**ಕನ್ನಡ ಕಲಿ**

▪ ಡಾ. ಶಿವಾನಂದ ಟವಳಿ
shivu.tavali@gmail.com



# ನಾನಾರ್ಥಕ ಪದಗಳು

ನಾನಾರ್ಥಕ ಪದಗಳ ವಾಕ್ಯ ಪ್ರಯೋಗಕ್ಕೆ ಬಳಕೆಗೊಂಡ ಸನ್ನಿವೇಶದ ಆಧಾರದ ಮೇಲೆ ಅರ್ಥ ನೀಡುವ ನಾನಾರ್ಥಕ ಪದಗಳನ್ನು ತಿಳಿಯಲು ಭಾಷಾ ಪಾಂಡಿತ್ಯವು ಅತ್ಯಗತ್ಯ. ಇವು ಭಾಷಾ ವೈಶಿಷ್ಟ್ಯಗಳ ಪ್ರತೀಕ. ಓದುಗರ ಪದಭಂಡಾರದ ಅಭಿವೃದ್ಧಿಗಾಗಿ ಕೆಲವು ನಾನಾರ್ಥಕ ಪದಗಳನ್ನು ವಾಕ್ಯ ಪ್ರಯೋಗಕ್ಕೆ ಒಳಪಡಿಸಿ ಈ ಕೆಳಗೆ ನೀಡಲಾಗಿದೆ.

ಗಂಡ – ಅರ್ಜುನನು ಮೂರು ಲೋಕದ ಗಂಡನಾಗಿದ್ದನು. (ಶೂರ)

ಅರ್ಜುನನು ಸುಭದ್ರೆಯ ಗಂಡನಾಗಿದ್ದನು. (ಪತಿ)

ಹದ್ದು – ಮರದ ತುದಿಯಲ್ಲಿ ಹದ್ದು ಕುಳಿತಿದೆ. (ಪಕ್ಷಿ)

ಹಿರಿಯರೆದುರು ಹದ್ದು ಮೀರಿ ಮಾತನಾಡಬಾರದು. (ಮಿತಿ)

ದೊರೆ – ಇಮ್ಮಡಿ ಪುಲಿಕೇಶಿ ಚಾಲುಕ್ಯರ ದೊರೆ. (ರಾಜ)

ರಮೇಶನಿಗೆ ಕೆಲಸ ದೊರೆಯಿತು. (ಸಿಗು)

ಪತ್ರ – ನಳಿನಿಯು ತಾಯಿಗೆ ಪತ್ರ ಬರೆದಳು. (ಕಾಗದ)

ಮರದ ಪತ್ರದಲ್ಲಿನ ನೀರಹನಿ ಮುತ್ತಂತೆ ಕಾಣುತ್ತಿದೆ. (ಎಲೆ)

ಜರುಗು– ನೀವು ಸ್ವಲ್ಪ ಪಕ್ಕಕ್ಕೆ ಜರುಗಿ ಕುಳಿತುಕೊಳ್ಳಿ (ಪಕ್ಕಕ್ಕೆ ಸರಿ)

ನಿನ್ನೆ ಜರುಗಿದ ಘಟನೆಗೆ ಜನ ಭಯಗೊಂಡಿದ್ದಾರೆ. (ಸಂಭವಿಸು)

ಚುಕ್ಕೆ – ಆಕಾಶದಲ್ಲಿ ಚುಕ್ಕೆಗಳು ಮಿನುಗುತ್ತಿವೆ. (ನಕ್ಷತ್ರ)

ಅವಳು ಚುಕ್ಕೆ ರಂಗೋಲಿ ಹಾಕಿದಳು (ಬಿಂದು) ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಿರುದ್ಧಾರ್ಥಕ ಪದಗಳು

ಪದವೊಂದಕ್ಕೆ ವಿರುದ್ಧ ಅರ್ಥದಲ್ಲಿ ಬಳಕೆಯಾಗುವ ಪದಗಳೇ ವಿರುದ್ಧ ಪದಗಳು. ಕೆಲವು ಪದಗಳಿಗೆ ಉಪಸರ್ಗ ಪ್ರತ್ಯಯಗಳು ಸೇರುವ ಮೂಲಕ ವಿರುದ್ಧ ಪದಗಳಾಗುತ್ತವೆ. ಇನ್ನು ಕೆಲವು ಪದಗಳಿಗೆ ಕನ್ನಡ ಭಾಷೆಯಲ್ಲಿ ಸಹಜವಾಗಿಯೇ ವಿರುದ್ಧ ಪದಗಳಿರುತ್ತವೆ. ಓದುಗರ ಅನುಕೂಲಕ್ಕಾಗಿ ಈ ಕೆಳಗೆ ವಿರುದ್ಧಾರ್ಥಕ ಪದಗಳನ್ನು ಪಟ್ಟಿ ಮಾಡಿ ಕೊಡಲಾಗಿದೆ.

## ಉದಾಹರಣೆಗಾಗಿ ವಿರುದ್ಧಾರ್ಥಕ ಪದಗಳು

| | | |
|---|---|---|
| ಅಪರಾಧಿ | x | ನಿರಪರಾಧಿ |
| ಅವಸ್ಥೆ | x | ಅವ್ಯವಸ್ಥೆ |
| ಅವಶ್ಯ | x | ಅನವಶ್ಯ |
| ಅಶ್ಲೀಲ | x | ಶೀಲ |
| ಏರು | x | ಇಳಿ |
| ಏಳು | x | ಬೀಳು |
| ಏಕ | x | ಅನೇಕ |
| ಗುಣ | x | ನಿರ್ಗುಣ |
| ಘೋರ | x | ಅಘೋರ |
| ಚಂಚಲ | x | ನಿಶ್ಚಂಚಲ |
| ಚರ | x | ಸ್ಥಿರ |
| ಧೈರ್ಯ | x | ಅಧೈರ್ಯ |
| ಧರ್ಮ | x | ಅಧರ್ಮ |
| ನಗು | x | ಅಳು |
| ನಕಲಿ | x | ಅಸಲಿ |
| ಸುಪ್ತ | x | ವ್ಯಕ್ತ |
| ಸೂಕ್ಷ್ಮ | x | ಸ್ಥೂಲ |
| ಸ್ಥಾಪಕ | x | ಭಂಜಕ |
| ಸ್ವಂತ | x | ಅನ್ಯ |
| ಶುದ್ಧ | x | ಅಶುದ್ಧ |
| ಶಿಸ್ತು | x | ಅಶಿಸ್ತು |
| ಶುಷ್ಕ | x | ಆರ್ದ್ರ |
| ಶೀಘ್ರ | x | ವಿಳಂಬ |
| ಮುಂಭಾರ | x | ಹಿಂಭಾರ |

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ದೇಶಿಯ–ಪದಗಳು

ಕನ್ನಡವು ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದು ಪ್ರಾಚೀನ ಕಾಲದಲ್ಲಿ ಸಂಸ್ಕೃತ ಪ್ರಾಕೃತ ಪದಗಳು ಸೇರಿವೆ. ಅದಕ್ಕೆ ಆರ್ಯ ಮತ್ತು ದ್ರಾವಿಡರ ಸಂಬಂಧವೇ ಕಾರಣ. ಮಧ್ಯಕಾಲೀನ ಯುಗದಲ್ಲಿ ಫಾರ್ಸಿ, ಅರಬ್ಬಿ, ಹಿಂದೂಸ್ತಾನಿ, ಉರ್ದು ಭಾಷೆಗಳ ಪ್ರಭಾವ ಹೆಚ್ಚಾಗಿತ್ತು. ಆಧುನಿಕ ಯುಗದಲ್ಲಿ ವಿದೇಶಿಯರ ಆಡಳಿತದಿಂದಾಗಿ ಪೋರ್ಚುಗೀಸ್, ಇಂಗ್ಲಿಷ್ ಪದಗಳು ಕನ್ನಡ ಭಾಷೆಯಲ್ಲಿ ಸೇರಿಕೊಂಡಿವೆ. ಇಂದಿಗೂ ಭಾಷಾ ಬಳಕೆಯ ಹರಿವು ಹೆಚ್ಚಾದಂತೆಲ್ಲ ಬೇರೆಬೇರೆ ಭಾಷೆಯ ಪದಗಳು ಕನ್ನಡದಲ್ಲಿ ಬಳಕೆಗೊಳ್ಳುತ್ತಲೇ ಇವೆ. ಕನ್ನಡದಲ್ಲಿ ಹೃಸ್ವ ಸ್ವರಗಳು ಆಗುವವು.

### ದೇಶಿಯ ಪದಗಳು

ಕನ್ನಡ ಭಾಷೆಯಲ್ಲಿರುವ ಅಚ್ಚಗನ್ನಡ ಶಬ್ದಗಳೇ ದೇಶಿಯ ಶಬ್ದಗಳು. ಇವು ಕನ್ನಡ ಭಾಷೆಯಲ್ಲಿನ ಮೂಲ ಪದಗಳಾಗಿದ್ದು ಸಾಮಾನ್ಯವಾಗಿ ದೇಶಿಯ ಪದಗಳ ಹುಟ್ಟು, ಬೆಳವಣಿಗೆ ವಿಕಾಸ ಎಲ್ಲವೂ ಕನ್ನಡದಲ್ಲಿಯೇ ಆಗಿರುತ್ತದೆ.

**ಉದಾ:**

| | | |
|---|---|---|
| ಹೊಲ | ಮನೆ | ಗದ್ದೆ |
| ಮಜ್ಜಿಗೆ | ಹಾಲು | ತುಪ್ಪ |
| ರಾಗಿ | ಜೋಳ | ಭತ್ತ |
| ಎಮ್ಮೆ | ತಲೆ | ಕಣ್ಣು |
| ಕಿವಿ | ಹೀರು | ತೋರು |
| ಬರು | ಸೇರು | ತೇರು |
| ಮೂಡಣ | ತೆಂಕಣ | ನೇಸರು |
| ಒಂದು | ಎರಡು | ಸೇರು |
| ನೂರು | ಹತ್ತು | ಗಿಳಿ |
| ಕಾಗೆ | ಗುಬ್ಬಿ | ಹೊಳೆ |

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅನ್ಯದೇಶಿಯ ಪದಗಳು

ಅಚ್ಚಗನ್ನಡದ ಪದಗಳನ್ನು ಹೊರತುಪಡಿಸಿ ಕನ್ನಡ ಭಾಷೆಯಲ್ಲಿ ಬಳಸಲ್ಪಡುವ ಬೇರೆಬೇರೆ ಭಾಷೆಯ ಪದಗಳನ್ನು ಅನ್ಯ ದೇಶಿಯ ಅಥವಾ ಅನ್ಯದೇಶ್ಯ ಪದಗಳು ಎಂದು ಕರೆಯುತ್ತಾರೆ. ಕನ್ನಡ ಭಾಷೆಯಲ್ಲಿ ಫಾರ್ಸಿ, ಅರಬ್ಬಿ, ಉರ್ದು, ಪೋರ್ಚುಗೀಸ್, ಹಾಗೂ ಇಂಗ್ಲಿಷ್ ಪದಗಳು ಸೇರಿಕೊಂಡಿವೆ.

### ಇಂಗ್ಲಿಷ್ ಭಾಷೆಯಿಂದ ಬಂದ ಪದಗಳು

| | | |
|---|---|---|
| ಷರ್ಟು | ಬ್ಯಾಂಕ್ | ಚೆಕ್ |
| ಕಾರ್ಡು | ಸ್ಕೂಲ್ | ಬುಕ್ |
| ಸರ್ | ರೀಡರ್ | ಪ್ರೆಸ್ |
| ಡ್ರೈವರ್ | ಟೀ | ಕಾಫಿ |
| ಮೊಬೈಲು | ಲಾಯರು | ಫೀಸ್ |
| ರಿಜಿಸ್ಟರ್ | ಡಾಕ್ಟರ್ | ಬ್ರೆಡ್ |
| ಸಿನೆಮಾ | ಪೆನ್ಸಿಲ್ | ಇಂಕ್ |

### ಉರ್ದು ಭಾಷೆಯಿಂದ ಬಂದ ಪದಗಳು

| | | |
|---|---|---|
| ಇಲಾಖೆ | ಇಲಾಜ್ | ಕಬೂಲ್ |
| ಖಿಲ್ಲೆ | ಕೋಮು | ಖಾಲಿ |
| ಜವಾಬ್ | ಜಮಾ | ಖರ್ಚು |
| ಸವಾಲ್ | ಜಾಮೀನು | ಜಿಲ್ಲಾ |
| ಪರಾರಿ | ತುರಾಯಿ | ರಿವಾಜು |
| ಉಸ್ತಾದ | ಫಸಲು | ಫಾಯಿದೆ |
| ಬಾಕಿ | ಮಜಲು | ಮನ್ನಾ |
| ಮಸಲತ್ತು | ಶರಾ | ಲುಕ್ಸಾನ್ |
| ವಕಾಲತ್ತು | ರುಜು | ವಾಯಿದೆ |

### ಪೋರ್ಚುಗೀಸ್ ಭಾಷೆಯಿಂದ ಬಂದ ಪದಗಳು

| | | |
|---|---|---|
| ಅಲಮಾರು | ಚೆಂಬು | ಸ್ಪಂಜು |
| ಮೇಜು | ಬಟಾಣಿ | ಕಂದೀಲು |
| ವರಾಂಡ | ಪಗೋಡಾ | ಪಾದ್ರಿ |
| ಲಾಟೀನ್ | ಇಸ್ತ್ರೀ | ತಂಬಾಕು |
| ಮೇಸ್ತ್ರಿ | ಅನಾನಸ್ | ಫಿಸ್ತೂಲ್ |
| ರಸೀದಿ | ಸಾಬೂನು | ಪಿಪಾಯಿ |

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ಕೃದಂತ ಪದಗಳು

ಧಾತುಗಳ ಅಂತ್ಯದಲ್ಲಿ ಕೃತ್ ಪ್ರತ್ಯಯಗಳು ಸೇರುವುದರಿಂದ ಕೃದಂತಗಳು ಎಂಬ ಹೆಸರು ಬಂದಿದೆ. ಧಾತುಗಳಿಗೆ 'ಕೃತ್ ಪ್ರತ್ಯಯಗಳು' ಸೇರುವುದರಿಂದ ಉಂಟಾಗುವ ಪದಗಳೇ 'ಕೃದಂತ ಪದಗಳು'.

ಉದಾ:

| | | | | |
|---|---|---|---|---|
| ಧಾತು | + | ಕೃತ್ ಪ್ರತ್ಯಯ | = | ಕೃದಂತ ಪದ |
| ಕೇಳು | + | ದ | = | ಕೇಳಿದ |
| ಅಂಜು | + | ಇಕೆ | = | ಅಂಜಿಕೆ |
| ತಿಳಿ | + | ವಳಿಕೆ | = | ತಿಳಿವಳಿಕೆ |
| ಬರೆ | + | ದು | = | ಬರೆದು |
| ಹೋಗು | + | ಉತ್ತ | = | ಹೋಗುತ್ತ |
| ಹಾಡು | + | ವ | = | ಹಾಡುವ |
| ಕುಣಿ | + | ಉವ | = | ಕುಣಿಯುವ |
| ಓಡು | + | ಅಲು | = | ಓಡಲು |

ಕ್ರಿಯಾಪದದ ಮೂಲ ರೂಪವೇ ಕ್ರಿಯಾಪ್ರಕೃತಿ ಅಥವಾ ಧಾತು. ಧಾತುಗಳಿಗೆ ಕಾಲಸೂಚಕ ಪ್ರತ್ಯಯದ ನಂತರ ಆಖ್ಯಾತ ಪ್ರತ್ಯಯಗಳು ಸೇರುವುದರಿಂದ ಕ್ರಿಯಾಪದಗಳು ರೂಪುಗೊಳ್ಳುತ್ತವೆ. ಧಾತುಗಳಿಗೆ 'ಕೃತ್ ಪ್ರತ್ಯಯಗಳು' ಸೇರುವುದರಿಂದ ಕೃದಂತ ಪದಗಳು ರೂಪುಗೊಳ್ಳುತ್ತವೆ.

### ಕೃತ್ ಪ್ರತ್ಯಯಗಳು

ಧಾತುಗಳಿಗೆ ಆಖ್ಯಾತ ಪ್ರತ್ಯಯಗಳನ್ನು ಹೊರತುಪಡಿಸಿ ಸೇರುವ ಪ್ರತ್ಯಯಗಳನ್ನು ಕೃತ್ ಪ್ರತ್ಯಯಗಳು ಎಂದು ಕರೆಯುವರು.

ಉದಾ: ಇಸು, ವು, ಇಕೆ, ಉವ, ಇಗೆ ವಳಿಕೆ, ಸು, ವಣಿಗೆ, ಪು, ತ ಇತ್ಯಾದಿ

# ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

## ತತ್ಸಮ-ತದ್ಭವಗಳು

ಕನ್ನಡ ಭಾಷೆಯ ಶಬ್ದ ಭಂಡಾರವು ವಿವಿಧ ಭಾಷೆಗಳ ಪದಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಶ್ರೀಮಂತವಾಗಿದೆ. ಆರಂಭದಲ್ಲಿ ಸಾಕಷ್ಟು ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬಂದು ಸೇರಿವೆ. ಹಾಗೆ ಬರುವಾಗ ವ್ಯತ್ಯಾಸಗೊಳ್ಳುವ ಪ್ರಕ್ರಿಯೆಯ ಆಧಾರದ ಮೇಲೆ ಪದಗಳನ್ನು ತತ್ಸಮ-ತದ್ಭವಗಳೆಂದು ವಿಂಗಡಣೆ ಮಾಡಲಾಗಿದೆ.

## ತತ್ಸಮಗಳು

'ತತ್+ಸಮ' ಎಂದರೆ ಅದಕ್ಕೆ ಸಮ ಎಂದರ್ಥ. 'ತತ್ಸಮ 'ಅಂದರೆ ಸಂಸ್ಕೃತಕ್ಕೆ ಸಮನಾದುದು ಎಂದರ್ಥ. ಸಂಸ್ಕೃತ ಪದಗಳು ಯಾವ ಬದಲಾವಣೆ ಇಲ್ಲದೇ ಕನ್ನಡದಲ್ಲಿ ಬಳಕೆಯಾಗಿದ್ದರೆ ಅಂತಹ ಸಂಸ್ಕೃತ ಶಬ್ದಗಳನ್ನು 'ತತ್ಸಮಗಳು' ಎನ್ನುವರು. ಇವುಗಳನ್ನು 'ಸಮ ಸಂಸ್ಕೃತಗಳು' ಎಂತಲೂ ಕರೆಯುವರು.

ಉದಾ: ಕ್ಷಣ, ಅಕ್ಷರ, ಆಕಾಶ, ವನ, ಪುಸ್ತಕ, ಋಷಿ, ಚಂದ್ರ, ರಾಜ, ಸೀತಾ, ಕಾವ್ಯ, ಧ್ವನಿ, ಶ್ರೀ, ಮಾಲಾ, ಆರ್ಯ, ವಾಸಂತಿ, ಕಥಾ, ಸ್ನುಷಾ, ಆಶಾ, ಯಮ, ಪಗೆ...... ಇತ್ಯಾದಿ

## ತದ್ಭವಗಳು

'ತತ್+ಸಮ' ಎಂದರೆ ಅದಕ್ಕೆ ಜನಿಸಿದ್ದು ಎಂದರ್ಥ. 'ತದ್ಭವ' ಎಂದರೆ ಸಂಸ್ಕೃತದಿಂದ ಜನಿಸಿದ್ದು ಎಂದರ್ಥ. ಸಂಸ್ಕೃತ ಪದಗಳು ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಇಲ್ಲವೇ ಪೂರ್ಣವಾಗಿ ಬದಲಾವಣೆ ಹೊಂದಿರುವ ಶಬ್ದಗಳನ್ನು 'ತದ್ಭವಗಳು' ಎನ್ನುವರು. ಇವು ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ವಿಕಾರವನ್ನು ಇಲ್ಲವೇ ಪದದಲ್ಲಿ ಎಲ್ಲಿಯಾದರೂ ಬದಲಾವಣೆಯನ್ನು ಹೊಂದಿರುತ್ತವೆ.

ಉದಾ: ಚಣ, ಅಕ್ಕರ, ಆಗಸ, ಬನ, ಹೊತ್ತಗೆ, ರಿಸಿ, ಚಂದಿರ, ರಾಯ, ಸೀತೆ, ಕಬ್ಬ, ದನಿ, ಸಿರಿ, ಮಾಲೆ, ಅಜ್ಜ, ಬಸಂತಿ, ಕತೆ, ಸೊಸೆ, ಆಸೆ, ಜವ, ಹಗೆ......ಇತ್ಯಾದಿ.

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ತತ್ಸಮ–ತದ್ಭವಗಳಾಗುವ ಬಗೆ

ಸಂಸ್ಕೃತ ಪದದಲ್ಲಿನ ವರ್ಗದ ಮೊದಲನೆಯ ಅಕ್ಷರಗಳು ಕನ್ನಡದಲ್ಲಿ ಮೂರನೆಯ ಅಕ್ಷರಗಳಾಗಿ ಬದಲಾವಣೆ ಹೊಂದುವವು.

| ತತ್ಸಮ | ತದ್ಭವ |
|---|---|
| ಸೂಚೀ | ಸೂಜಿ |
| ಅಡವಿ | ಅಟವಿ |
| ಮಲ್ಲಿಕಾ | ಮಲ್ಲಿಗೆ |
| ದೀಪಿಕಾ | ದೀವಿಗೆ |
| ಚತುರ | ಚದುರ |
| ವಸತಿ | ಬಸದಿ |

ಸಂಸ್ಕೃತ ಪದದಲ್ಲಿನ 'ಪ, ಫ' ಕಾರಗಳು ಕನ್ನಡದಲ್ಲಿ 'ಹ' ಕಾರ ಆಗುವವು.

| ತತ್ಸಮ | ತದ್ಭವ |
|---|---|
| ಪಾಲು | ಹಾಲು |
| ಪೆಣ್ಣು | ಹೆಣ್ಣು |
| ಪಲ್ಲೀ | ಹಲ್ಲಿ |
| ಪಲವು | ಹಲವು |
| ಪಣೆ | ಹಣೆ |
| ಪಿಡಿ | ಹಿಡಿ |

ಸಂಸ್ಕೃತ ಪದದಲ್ಲಿನ ಅನುಸ್ವಾರಗಳು ಕನ್ನಡದಲ್ಲಿ ಲೋಪ ಹೊಂದುತ್ತವೆ.

| ತತ್ಸಮ | ತದ್ಭವ |
|---|---|
| ಸೆರಂಗು | ಸೆರಗು |
| ತೊಡಂಕು | ತೊಡಕು |
| ತುರುಂಬು | ತುರುಬು |
| ನೊರಂಜು | ನೊರಜು |
| ಅಡಂಗು | ಅಡಗು |
| ಸೋಂಕು | ಸೋಕು |

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ತತ್ಸಮ–ತದ್ಭವಗಳಾಗುವ ಬಗೆ

8) ಸಂಸ್ಕೃತದಲ್ಲಿನ ವಿಜಾತೀಯ ಸಂಯುಕ್ತಾಕ್ಷರಗಳನ್ನು ಹೊಂದಿದ ಪದಗಳು ಕನ್ನಡದಲ್ಲಿ ಸಜಾತೀಯ ಸಂಯುಕ್ತಾಕ್ಷರಗಳಾಗುತ್ತವೆ.

| ತತ್ಸಮ | ತದ್ಭವ |
|---|---|
| ಅಕ್ಷರಾ | ಅಕ್ಕರ |
| ಗೋಷ್ಠಿ | ಗೊಟ್ಟಿ |
| ಪಕ್ಷಿ | ಹಕ್ಕಿ |
| ವಿಸ್ತಾರ | ಬಿತ್ತರ |
| ಸಂಸ್ಕೃತ | ಸಕ್ಕದ |
| ಅಶ್ರದ್ಧಾ | ಅಸಡ್ಡೆ |

9) ಸಂಸ್ಕೃತ ಪದದಲ್ಲಿನ 'ಶ, ಷ' ಕಾರಗಳು ಕನ್ನಡದಲ್ಲಿ 'ಸ' ಕಾರವಾಗಿ ಬದಲಾವಣೆ ಹೊಂದುವವು.

| ತತ್ಸಮ | ತದ್ಭವ |
|---|---|
| ಕಲಶ | ಕಳಸ |
| ದೇಶಿ | ದೇಸಿ |
| ರಾಶಿ | ರಾಸಿ |
| ವರ್ಷ | ವರುಸ |
| ಶಶಿ | ಸಸಿ |
| ಆಕಾಶ | ಆಗಸ |

10) ಸಂಸ್ಕೃತ ಪದದಲ್ಲಿನ ಕೆಲವು ದೀರ್ಘ ಸ್ವರಗಳು ಕನ್ನಡದಲ್ಲಿ ಹ್ರಸ್ವ ಸ್ವರಗಳು ಆಗುವವು.

| ತತ್ಸಮ | ತದ್ಭವ |
|---|---|
| ದಯಾ | ದಯೆ |
| ನದೀ | ನದಿ |
| ಭಿಕ್ಷಾ | ಭಿಕ್ಷೆ |
| ವೀಣಾ | ವೀಣೆ |
| ಅಕ್ಷತಾ | ಅಕ್ಷತೆ |
| ಲಕ್ಷ್ಮೀ | ಲಕ್ಷ್ಮಿ |

# ಕನ್ನಡ ಕಲಿ



■ ಡಾ. ಶಿವಾನಂದ ಟವಳಿ
shivu.tavali@gmail.com

## ನಾಮಪದಗಳು

### II. ವಿಶೇಷ ನಾಮಗಳು

ವ್ಯಕ್ತಿ, ಪ್ರಾಣಿ, ಸ್ಥಳ, ವಸ್ತು, ಗುಣ, ಸ್ವಭಾವ, ವೃತ್ತಿ, ಪ್ರಕಾರ, ಬಣ್ಣ, ಸಂಖ್ಯೆ, ಪರಿಮಾಣ ಮುಂತಾದವುಗಳನ್ನು ವರ್ಣಿಸುವ ಶಬ್ದಗಳಿಗೆ ವಿಶೇಷಣ ಎಂದು ಕರೆಯುವರು. ಕನ್ನಡ ಭಾಷೆಯಲ್ಲಿ ವಿಶೇಷಣವು ಯಾವಾಗಲೂ ಪೂರ್ವಪದದಲ್ಲಿ ಇರುತ್ತದೆ. ವಿಶೇಷ ನಾಮಗಳಲ್ಲಿ ಎಂಟು ಪ್ರಕಾರಗಳಿವೆ.

1. ಗುಣವಾಚಕಗಳು
2. ಸಂಖ್ಯಾವಾಚಕಗಳು
3. ಸಂಖ್ಯೇಯವಾಚಕಗಳು
4. ಪರಿಮಾಣವಾಚಕಗಳು
5. ಪ್ರಕಾರವಾಚಕಗಳು
6. ದಿಗ್ವಾಚಕಗಳು
7. ತದ್ಧಿತ ವಿಶೇಷಣಗಳು
8. ಕೃದಂತ ವಿಶೇಷಣಗಳು

**1. ಗುಣವಾಚಕಗಳು :** ಯಾವುದೇ ಒಂದು ವಸ್ತು, ಪ್ರಾಣಿ, ವ್ಯಕ್ತಿಯ ಗುಣ, ಸ್ವಭಾವ ಮತ್ತು ರೀತಿಗಳನ್ನು ವರ್ಣಿಸುವ ಶಬ್ದಗಳೇ ಗುಣವಾಚಕಗಳು.
**ಉದಾ :–** ಭವ್ಯ, ಹಿರಿಯ, ಒಳ್ಳೆಯ, ಹೆಮ್ಮೆಯ, ಸುಂದರ, ವಿಶಾಲ, ಉತ್ತಮ, ಪವಿತ್ರ, ಬಿಳಿದು, ಕರಿದು ಇತ್ಯಾದಿ.

**2. ಸಂಖ್ಯಾವಾಚಕಗಳು :** ಸಂಖ್ಯೆಯನ್ನು ಹೇಳುವ ಶಬ್ದಗಳು ವಿಶೇಷಣದ ಸ್ಥಾನದಲ್ಲಿದ್ದರೆ ಅವು ಸಂಖ್ಯಾವಾಚಕಗಳು.
**ಉದಾ :–** ಒಂದು, ಐದು, ಏಳು, ಹತ್ತು, ಇಪ್ಪತ್ತು, ನೂರು, ಸಾವಿರ, ಅಷ್ಟ, ನವ, ಸಪ್ತ ಇತ್ಯಾದಿ.

**3. ಸಂಖ್ಯೇಯವಾಚಕಗಳು :** ಸಂಖ್ಯೆಯನ್ನು ಹೇಳುವ ಶಬ್ದಗಳು ವಿಶೇಷಣದ ಸ್ಥಾನದಲ್ಲಿದ್ದರೆ ಅವು ಸಂಖ್ಯೇಯವಾಚಕಗಳು. ಆದರೆ ಇವುಗಳಲ್ಲಿ 'ಅನೆಯ' ಎಂಬ ಪ್ರತ್ಯಯವಿರುತ್ತದೆ.
**ಉದಾ :–** ಒಂದನೆಯ, ಎರಡನೆಯ, ನೂರನೆಯ, ಹತ್ತನೆಯ, ಏಳನೆಯ, ಇಪ್ಪತ್ತೊಂದನೆಯ ಇತ್ಯಾದಿ.

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ನಾಮಪದಗಳು

ನಾವು ಮಾತನಾಡುವಾಗ ನಾನಾ ಬಗೆಯ ಪದಗಳನ್ನು ಬಳಸುತ್ತೇವೆ. ಇಲ್ಲಿ ಕೆಲವು ಪದಗಳು ಹೆಸರನ್ನು ಸೂಚಿಸಿದರೆ, ಕೆಲವು ಕ್ರಿಯೆಯನ್ನು ತೋರಿಸುತ್ತವೆ. ನಾಮ ಎಂದರೆ ಹೆಸರು ಎಂದರ್ಥ. ಹೆಸರನ್ನು ಸೂಚಿಸುವ ಪದಗಳೇ ನಾಮಪದಗಳು.

### ನಾಮ ಪ್ರಕೃತಿ

ಸ್ವತಂತ್ರವಾದ ಅರ್ಥವುಳ್ಳ ಕ್ರಿಯೆಯನ್ನು ಹೊಂದಿರದ, ವಿಭಕ್ತಿರಹಿತವಾದ ನಾಮಪದದ ಮೂಲರೂಪವೇ ನಾಮಪ್ರಕೃತಿ. ಇದನ್ನು 'ಪ್ರಕೃತಿ' ಎಂತಲೂ ಕರೆಯುವರು.

ಉದಾ: ಶಂಕರ, ಗೋಪಾಲ, ಹಸು, ಕರು, ಸುಮಾ, ಹುಡುಗಿ, ಹುಡುಗ, ಗದ್ದೆ, ಬಾಗಿಲು, ಹುಡುಗ, ಹುಡುಗಿ, ಇಲಿ, ಕೆರೆ, ಹೊಳೆ ಇತ್ಯಾದಿ.

### ನಾಮಪದಗಳು

ವ್ಯಕ್ತಿ, ಸ್ಥಳ, ವಸ್ತು ಅಥವಾ ಪ್ರಾಣಿಯ ಗುಣ, ಸ್ವಭಾವ, ಬಣ್ಣ ಆಕಾರ, ವೃತ್ತಿ ಹಾಗೂ ಹೆಸರನ್ನು ಹೇಳುವ ಪದಗಳೇ ನಾಮಪದಗಳು. ನಾಮಪ್ರಕೃತಿಗೆ ವಿಭಕ್ತಿ ಪ್ರತ್ಯಯ ಸೇರಿ ನಾಮಪದವಾಗುತ್ತದೆ. ಪ್ರಕೃತಿಯ ಮುಂದೆ ಲಿಂಗಸೂಚಕ ಅಕ್ಷರಗಳ ನಂತರ ವಿಭಕ್ತಿ ಪ್ರತ್ಯಯಗಳು ಸೇರಿದರೆ ನಾಮಪದಗಳು ಉಂಟಾಗುತ್ತವೆ. ಉದಾ:

| ನಾಮಪ್ರಕೃತಿ | + | ವಿಭಕ್ತಿ ಪ್ರತ್ಯಯ | = | ನಾಮಪದ |
|---|---|---|---|---|
| ರಾಮ | + | ಉ | = | ರಾಮನು |
| ಚಿರತೆ | + | ಅನ್ನು | = | ಚಿರತೆಯನ್ನು |
| ಮನೆ | + | ಇಂದ | = | ಮನೆಯಿಂದ |
| ಊರು | + | ಇಗೆ | = | ಊರಿಗೆ |

### ನಾಮಗಳ ಪ್ರಕಾರಗಳು

I. ವಸ್ತುವಾಚಕ ನಾಮಗಳು

II. ವಿಶೇಷ ನಾಮಗಳು

III. ಸರ್ವನಾಮಗಳು

IV. ಭಾವನಾಮಗಳು

## ಕನ್ನಡ ಕಲಿ



■ ಡಾ. ಶಿವಾನಂದ ಟವಳಿ
shivu.tavali@gmail.com

# ನಾಮಪದಗಳು

## ಸರ್ವನಾಮಗಳು

ಯಾವುದೇ ಒಂದು ವಾಕ್ಯದಲ್ಲಿ ನಾಮಪದವನ್ನು ಒಂದು ಸಲ ಉಪಯೋಗಿಸಿದ ಬಳಿಕ ಪುನಃ ಅದೇ ವಾಕ್ಯದಲ್ಲಿ ಆ ನಾಮಪದದ ಬದಲಿಗೆ ಬೇರೊಂದು ಪದವನ್ನು ಬಳಸುವುದಕ್ಕೆ ಸರ್ವನಾಮ ಎಂದು ಕರೆಯುವವರು.

ಸರ್ವನಾಮಗಳು ಆಯಾ ವಾಕ್ಯದಲ್ಲಿಯ ನಾಮಪದಗಳಿಗೆ ಪರ್ಯಾಯವಾಗಿ ಉಪಯೋಗಿಸಲ್ಪಟ್ಟು ಆಯಾ ನಾಮಪದಗಳ ಅರ್ಥವನ್ನು ಪ್ರತಿನಿಧಿಸುವಂತಹ ಪದಗಳಾಗಿರುತ್ತವೆ.
ಉದಾ: ಅವನು, ಅವಳು, ಅವರು, ಇವನು, ಇವಳು, ಇವರು, ಇದು, ಅದು, ಅವು, ಇವು ಇತ್ಯಾದಿ

## ಸರ್ವನಾಮಗಳ ಪ್ರಕಾರಗಳು

1) ಪುರುಷಾರ್ಥಕ ಸರ್ವನಾಮ
2) ಆತ್ಮಾರ್ಥಕ ಸರ್ವನಾಮ
3) ದರ್ಶಕ ಸರ್ವನಾಮ
4) ಪ್ರಶ್ನಾರ್ಥಕ ಸರ್ವನಾಮ

### 1) ಪುರುಷಾರ್ಥಕ ಸರ್ವನಾಮ :

ಆಯಾ ವಸ್ತುಗಳ ಅರ್ಥವನ್ನು ಅರ್ಥೈಸುವ ಅಥವಾ ಯಾವುದೇ ವ್ಯಕ್ತಿ ಮತ್ತು ವಸ್ತುವಿಗಾಗಿ ಪ್ರಯೋಗಿಸಿದ ಸರ್ವನಾಮಗಳೇ ಪುರುಷಾರ್ಥಕ ಸರ್ವನಾಮಗಳು. ಇವುಗಳಲ್ಲಿ ಮೂರು ವಿಧಗಳಿವೆ.

ಅ) ಉತ್ತಮ ಪುರುಷ
ಆ) ಮಧ್ಯಮ ಪುರುಷ
ಇ) ಪ್ರಥಮ ಪುರುಷ

| ಪುರುಷಾರ್ಥಕ ಸರ್ವನಾಮಗಳು | ಏಕವಚನ ಉದಾಹರಣೆ | ಬಹುವಚನ ಉದಾಹರಣೆ |
|---|---|---|
| ಪ್ರಥಮ ಪುರುಷ | ಅವನು<br>ಅವಳು<br>ಅದು | ಅವರು<br>ಅವರು<br>ಅವು |
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ನಾಮಪದಗಳು

**2) ಆತ್ಮಾರ್ಥಕ ಸರ್ವನಾಮ :**
ಆತ್ಮವನ್ನು ಸೂಚಿಸುವ ಸರ್ವನಾಮಗಳೇ ಆತ್ಮಾರ್ಥಕ ಸರ್ವನಾಮ. ಇವು ಆತ್ಮದ ಪ್ರತಿನಿಧಿಯಂತೆ ಕಾರ್ಯ ನಿರ್ವಹಿಸುತ್ತವೆ.

**ಉದಾ :** ತಾನು (ಏಕವಚನ), ತಾವು (ಬಹುವಚನ), ತನ್ನ, ತಮಗೆ, ತಮ್ಮ ಇತ್ಯಾದಿ

**3) ದರ್ಶಕ ಸರ್ವನಾಮ :**
ವ್ಯಕ್ತಿ, ವಸ್ತು, ಪ್ರಾಣಿಗಳ ದೂರ ಹಾಗೂ ಸಮೀಪವನ್ನು ಹೇಳಲು ಬಳಸುವ ಸರ್ವನಾಮಗಳೇ ದರ್ಶಕ ಸರ್ವನಾಮ ದರ್ಶಕ ಸರ್ವನಾಮದಲ್ಲಿ ಮತ್ತೆರಡು ರೂಪಗಳಿವೆ. ಅವು

**ಅ) ದೂರದರ್ಶಕ ಸರ್ವನಾಮ :**
ದೂರದಲ್ಲಿನ ವಸ್ತುಗಳನ್ನು ನಿರ್ದೇಶಿಸಲು ಬಳಸುವ ಸರ್ವನಾಮಗಳೇ ದೂರದರ್ಶಕ ಸರ್ವನಾಮಗಳಾಗಿವೆ.

**ಉದಾ :** ಅವನು, ಅವಳು, ಅವರು, ಅದು, ಅವು ಇತ್ಯಾದಿ

**ಆ) ಸಮೀಪ ದರ್ಶಕ ಸರ್ವನಾಮ :**
ಸಮೀಪದಲ್ಲಿನ ವಸ್ತುಗಳನ್ನು ನಿರ್ದೇಶಿಸಲು ಬಳಸುವ ಸರ್ವನಾಮಗಳೇ ಸಮೀಪ ದರ್ಶಕ ಸರ್ವನಾಮಳು ಎನಿಸುವವು

**ಉದಾ :** ಇವನು, ಇವಳು, ಇವರು, ಇದು, ಇವು ಇತ್ಯಾದಿ

**4) ಪ್ರಶ್ನಾರ್ಥಕ ಸರ್ವನಾಮ :**
ಸಾಮಾನ್ಯವಾಗಿ ಪ್ರಶ್ನೆಯನ್ನು ಮಾಡುವ ಸಂದರ್ಭದಲ್ಲಿ ಉಪಯೋಗಿಸುವ ಸರ್ವನಾಮಗಳೇ ಪ್ರಶ್ನಾರ್ಥಕ ಸರ್ವನಾಮಗಳು.

**ಉದಾ :** ಯಾವಾಗ?, ಯಾವುದು?, ಏನು?, ಯಾಕೆ?, ಯಾರು?, ಯಾವುದನ್ನು?, ಏತಕ್ಕಾಗಿ? ಇತ್ಯಾದಿ

**IV. ಭಾವನಾಮಗಳು**
ವಸ್ತುಗಳ, ಪ್ರಾಣಿಗಳ, ವ್ಯಕ್ತಿಗಳ ಮೊದಲಾದ ಭಾವನೆಗಳನ್ನು ಬುದ್ಧಿಗೆ ಅಥವಾ ಮನಸ್ಸಿಗೆ ಸೂಚಿಸುವ ಶಬ್ದಗಳೇ ಭಾವನಾಮಗಳು

**ಉದಾ :-** ಆಶ್ಚರ್ಯ, ಸಂತೋಷ, ದುಃಖ, ಸಿಟ್ಟು, ಆಟ, ನೋಟ, ಶಾಂತಿ, ಭಯ, ಹಿರಿಮೆ, ಗರಿಮೆ, ಹೇಳಿಕೆ, ಕೇಳಿಕೆ, ಕೆಂಪು, ಮಾಟ ಇತ್ಯಾದಿ.

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ವಿಭಕ್ತಿ ವ್ಯವಸ್ಥೆ

### ವಿಭಕ್ತಿ

ಪದದ ಅರ್ಥವನ್ನು ವಿಭಜಿಸಿ ಹೇಳುವುದರಿಂದ 'ವಿಭಕ್ತಿ' ಎಂಬ ಹೆಸರು ಬಂದಿದೆ. ವಾಕ್ಯದಲ್ಲಿಯ ನಾಮಪದ, ಕ್ರಿಯಾಪದ ಮತ್ತು ಇತರ ಎಲ್ಲ ಪದಗಳಿಗೂ ಇರುವ ಸಂಬಂಧವನ್ನು ತಿಳಿಸುತ್ತದೆ. ನಾಮಪ್ರಕೃತಿಗೆ ವಾಕ್ಯದಲ್ಲಿರುವ ಸಂಬಂಧವನ್ನು ತಿಳಿಸಲು ಸೇರುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು.

### ವಿಭಕ್ತಿ ಪ್ರತ್ಯಯಗಳು

ವಿಭಕ್ತಿ ಪ್ರತ್ಯಯಗಳು ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆಬೇರೆ ಅರ್ಥಗಳನ್ನು ಉಂಟು ಮಾಡುತ್ತವೆ. ನಾಮಪ್ರಕೃತಿಗೆ ವಿಭಕ್ತಿ ಪ್ರತ್ಯಯವನ್ನು ಸೇರಿಸುವುದರಿಂದ ನಾಮಪದಗಳೆನಿಸುತ್ತವೆ. ಪ್ರಕೃತಿಗೆ ಪ್ರತ್ಯಯ ಸೇರಿದಾಗ ಪದ ಲಭಿಸುತ್ತದೆ.

ವಿಭಕ್ತಿ ಪ್ರತ್ಯಯಗಳ ಬಹುಮುಖ್ಯ ಕಾರ್ಯವೆಂದರೆ ಅವು ಸೇರಿಕೊಂಡಿರುವ ನಾಮಪದ ಹಾಗೂ ವಾಕ್ಯದಲ್ಲಿಯ ಕ್ರಿಯಾಪದ ಇವುಗಳ ನಡುವಿನ ಸಂಬಂಧವನ್ನು ಸಂಕೇತಿಸುವುದಾಗಿದೆ. ಸರ್ವನಾಮ, ವಿಶೇಷಣ, ಭಾವನಾಮಗಳಿಗೂ ವಿಭಕ್ತಿ ಪ್ರತ್ಯಯಗಳು ಸೇರುತ್ತವೆ. ವಿಭಕ್ತಿ ಪ್ರತ್ಯಯಗಳನ್ನು ಅವುಗಳ ಉದಾಹರಣೆಯೊಂದಿಗೆ ಈ ಕೆಳಗೆ ನೀಡಲಾಗಿದೆ.

### ಹಳಗನ್ನಡ ವಿಭಕ್ತಿಯ ಪ್ರತ್ಯಯಗಳು

| ವಿಭಕ್ತಿಯ ಹೆಸರು | ಹಳಗನ್ನಡ ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ | ಮ್ (ಂ) | ಮರಂ |
| ದ್ವಿತೀಯಾಅಮ್ | (ಅಂ) | ಮರವಂ |
| ತೃತೀಯಾ | ಇಮ್ (ಇಂ) | ಮರದಿಂ |
| ಚತುರ್ಥಿ | ಗೆ, ಇಗೆ, ಕ್ಕೆ, ಅಕ್ಕೆ | ಮರಕ್ಕೆ |
| ಪಂಚಮಿ | ಅತ್ತಣಿಂ | ಮರದತ್ತಣಿಂ |
| ಷಷ್ಠಿ | ಅ | ಮರದ |
| ಸಪ್ತಮಿ | ಒಳು, | ಒಳ್ |

ಮರದೊಳ್ ಸಂಭೋದನಾ ಆ, ಏ, ಈ, ಇರಾ ಮರವೇ

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಿಭಕ್ತಿ ವ್ಯವಸ್ಥೆ

## ಹೊಸಗನ್ನಡ ವಿಭಕ್ತಿಯ ಪ್ರತ್ಯಯಗಳು

| ವಿಭಕ್ತಿಯ ಹೆಸರು | ಹೊಸಗನ್ನಡ ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ | ಉ | ಮರವು |
| ದ್ವಿತೀಯಾ | ಅನ್ನು | ಮರವನ್ನು |
| ತೃತೀಯಾ | ಇಂದ | ಮರದಿಂದ |
| ಚತುರ್ಥಿ | ಗೆ, ಕೆ, ಕ್ಕೆ | ಮರಕ್ಕೆ |
| ಪಂಚಮಿ | ದೆಸೆಯಿಂದ ಮರದ | ದೆಸೆಯಿಂದ |
| ಷಷ್ಠಿ | ಅ | ಮರದ |
| ಸಪ್ತಮಿ | ಅಲ್ಲಿ | ಮರದಲ್ಲಿ |
| ಸಂಭೋದನಾ | ಆ, ಏ | ಮರವೇ |

## ವಿಭಕ್ತಿಗಳ ವಿಚಾರ

- ಕೇಶಿರಾಜನ ಕಾಲದಿಂದಲೂ ಪ್ರಥಮ ವಿಭಕ್ತಿಯಿಂದ ಸಪ್ತಮಿವರೆಗೆ ವಿಭಕ್ತಿಗಳು ಏಳು ಇವೆ.
- ಏಳು ವಿಭಕ್ತಿಗಳ ಇರುವಿಕೆಯನ್ನು ಹೇಳಿದ್ದರೂ ಪ್ರಥಮಾ, ಪಂಚಮಿ ವಿಭಕ್ತಿ ಪ್ರತ್ಯಯಗಳ ಕುರಿತು ಸಾಕಷ್ಟು ಚರ್ಚೆಗಳಾಗಿವೆ.
- ಸಂಭೋದನೆ ಸೇರಿ ಕನ್ನಡದಲ್ಲಿ ಎಂಟು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಅಧ್ಯಯನ ಮಾಡುತ್ತಾರೆ.
- ಕನ್ನಡದಲ್ಲಿ ಪ್ರಕೃತಿಯೇ ಪ್ರಥಮಾ ವಿಭಕ್ತಿಯನ್ನು ಹೇಳುವುದರಿಂದ ಅದು ಇಲ್ಲವೆಂದು ಭಾಷಾತಜ್ಞ ಕಾಲ್ಡವೆಲ್ ಹೇಳುತ್ತಾರೆ.
- ತೃತೀಯಾ ವಿಭಕ್ತಿ ಪ್ರತ್ಯಯವು ಪಂಚಮಿಯ ಸ್ಥಾನದಲ್ಲಿ ಬಳಕೆಯಾಗುವುದರಿಂದ ಪಂಚಮಿ ವಿಭಕ್ತಿ ಪ್ರತ್ಯಯದ ಇರುವಿಕೆಯನ್ನು ಅಲ್ಲಗಳೆಯುತ್ತಾರೆ.
- ಅಗಲಿಕೆ ಹಾಗೂ ತೊಂದರೆಯ ಸಂದರ್ಭದಲ್ಲಿ ಪಂಚಮಿ ವಿಭಕ್ತಿ ಪ್ರತ್ಯಯ(ಇಂದ)ವನ್ನು ಬಳಸುವರು.

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ಸಂಧಿಗಳು

ನಾವು ಮಾತನಾಡುವಾಗ ಪದಗಳ ಪ್ರಯೋಗ ದೀರ್ಘವಾಗಿ ಉಪಯೋಗಿಸದೇ ಅವುಗಳನ್ನು ಮಿತವಾಗಿ ಅರ್ಥವು ಕೆಡದಂತೆ ಭಾಷೆಯಲ್ಲಿ ಉಪಯೋಗಿಸುತ್ತವೆ. ಒಂದು ಭಾಷೆಯನ್ನು ಸ್ಪಷ್ಟವಾಗಿ ಮಾತನಾಡಲು ಇವು ಸಹಕರಿಸುವುದರಿಂದ ಭಾಷಾ ವ್ಯಾಕರಣದಲ್ಲಿ ಸಂಧಿ ಪಾತ್ರ ವ್ಯಾಪಕವಾಗಿದೆ. ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಒಟ್ಟಾಗಿ ಸೇರುವುದೇ ಸಂಧಿ. ಈ ರೀತಿಯಲ್ಲಿ ಪದಗಳು ಕೂಡುವಾಗ ಮೂಲ ಪದಗಳ ಅರ್ಥಕ್ಕೆ ಯಾವ ಭಾದೆಯೂ ಬರಬಾರದು. ಅರ್ಥಕ್ಕೆ ಭಾದೆ ಬರುವುದಾದಲ್ಲಿ ಸಂಧಿಯನ್ನು ಮಾಡಬಾರದೆಂಬ ನಿಯಮವಿದೆ.

### ಸಂಧಿ ಕಾರ್ಯ

ಅಕ್ಷರಗಳು ಸೇರುವಾಗ ಆಗುವ ಬದಲಾವಣೆಯನ್ನು 'ಸಂಧಿ ಕಾರ್ಯ'. ಸಂಧಿ ಕಾರ್ಯದಲ್ಲಿರುವ ಮೊದಲನೆಯ ಘಟಕಕ್ಕೆ 'ಪೂರ್ವಪದ' ಎಂತಲೂ ಎರಡನೆಯ ಘಟಕಕ್ಕೆ 'ಉತ್ತರಪದ' ಎಂದು ಕರೆಯುತ್ತಾರೆ. ಸಂಧಿ ಕಾರ್ಯವು ಪೂರ್ವಪದದ ಕೊನೆಯ ಅಕ್ಷರ ಹಾಗೂ ಉತ್ತರಪದದ ಮೊದಲ ಅಕ್ಷರಗಳ ನಡುವೆ ನಡೆಯುತ್ತದೆ.

ಉದಾ:

| ಪೂರ್ವಪದ | + ಉತ್ತರಪದ | = ಸಂಧಿಪದ | ಸಂಧಿ ಹೆಸರು |
|---|---|---|---|
| ಮಗು | + ಇಗೆ | = ಮಗುವಿಗೆ | ವಕಾರಾಗಮ |
| ಮೈ | + ತುಂಬಿ | = ಮೈದುಂಬಿ | ಆದೇಶ ಸಂಧಿ |
| ರವಿ | + ಇಂದ್ರ | = ರವೀಂದ್ರ | ಸವರ್ಣದೀರ್ಘ |
| ಮಳೆ | + ಕಾಲ | = ಮಳೆಗಾಲ | ಆದೇಶ ಸಂಧಿ |

### ಸಂಧಿ ಕಾರ್ಯಗಳು

ಸಂಧಿ ಕಾರ್ಯವು ನಡೆಯುವಾಗ ಲೋಪ, ಆಗಮ ಮತ್ತು ಆದೇಶ ಮೂರು ಬಗೆಯ ಬದಲಾವಣೆಗಳು ಜರುಗುತ್ತವೆ. ಅವುಗಳ ಕಾರ್ಯದ ವಿವರ ಹೀಗಿದೆ.

1. **ಲೋಪ:** ಅರ್ಥ ಕೆಡದಂತೆ ಸ್ವರ ಬಿಟ್ಟು ಹೋಗುವುದು.
2. **ಆಗಮ:** ಅರ್ಥ ಕೆಡುವಲ್ಲಿ ಹೊಸ ಅಕ್ಷರದ ಆಗಮ.
3. **ಆದೇಶ:** ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬರುವಿಕೆ.

### ಸಂಧಿಯ ಸಾಮಾನ್ಯ ನಿಯಮಗಳು

- ಅರ್ಥಕ್ಕೆ ಚ್ಯುತಿ ಬರುವಂತಿದ್ದರೆ ಸಂಧಿಯನ್ನು ಮಾಡಬಾರದು.
- ಅಸಹ್ಯ ಅರ್ಥ ಹುಟ್ಟುವಂತಿದ್ದರೆ ಸಂಧಿ ಕಾರ್ಯ ಮಾಡಬಾರದು.
- ಶ್ರುತಿಕಟುತ್ವವಾಗುವಂತಿದ್ದರೆ ಸಂಧಿಯನ್ನು ಮಾಡಬಾರದು.
- ಅರ್ಥ ಏಕಾಶ್ರಯ ಪದಗಳನ್ನು ಸಂಧಿಗೆ ಒಳಪಡಿಸಬಾರದು.
- ಸಂಧಿ ದೋಷವು (ಪ್ರಕೃತಿ ಭಾವ) ಇರಬಾರದು.

**ಕನ್ನಡ ಕಲಿ**

▪ ಡಾ. ಶಿವಾನಂದ ಟವಳಿ
shivu.tavali@gmail.com



# ಸಂಧಿಯ ಮೂಲ ಪ್ರಕಾರಗಳು

**ಕನ್ನಡ ಸಂಧಿಗಳು**– ಪೂರ್ವೋತ್ತರ ಪದಗಳೆರಡು ಕನ್ನಡ ಪದಗಳಾಗಿದ್ದರೆ ಇಲ್ಲವೆ ಒಂದು ಕನ್ನಡ ಪದ ಇನ್ನೊಂದು ಸಂಸ್ಕೃತ ಪದವಾಗಲಿ ಕೂಡಿ ಆಗುವ ಸಂಧಿಗಳೇ ಕನ್ನಡ ಸಂಧಿಗಳು. **ಉದಾ:**

**ಕನ್ನಡಪದ + ಸಂಸ್ಕೃತಪದ = ಕನ್ನಡ ಸಂಧಿ, ಸಂಧಿ**

ಎಳೆ + ಕರು = ಎಳೆಗರು, ಆದೇಶ ಸಂಧಿ

**ಸಂಸ್ಕೃತ ಸಂಧಿಗಳು** – ಪೂರ್ವೋತ್ತರ ಪದಗಳೆರಡು ಸಂಸ್ಕೃತವಾಗಿದ್ದರೆ ಇಲ್ಲವೇ ಎರಡು ಸಂಸ್ಕೃತ ಪದಗಳು ಸೇರಿ ಆಗುವ ಸಂಧಿಗಳೇ ಸಂಸ್ಕೃತ ಸಂಧಿ. **ಉದಾ:**

**ಸಂಸ್ಕೃತ ಪದ + ಸಂಸ್ಕೃತ ಪದ= ಕನ್ನಡ ಸಂಧಿ, ಸಂಧಿ**

**ಸುರ + ಅಸುರ = ಸುರಾಸುರ, ಸವರ್ಣದೀರ್ಘ**

**ಸ್ವರ ಸಂಧಿಗಳು** – ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಇದ್ದು ಇಲ್ಲವೇ ಸ್ವರಗಳ ನಡುವೆ ಸಂಧಿಯಾದರೆ ಅವುಗಳೇ ಸ್ವರಸಂದಿಗಳು. **ಉದಾ:**

**ಸ್ವರ + ಸ್ವರ= ಸ್ವರ ಸಂಧಿ, ಸಂಧಿ ಹೆಸರು**

**ಅವನ+ ಊರು= ಅವನೂರು,ಲೋಪ ಸಂಧಿ**

**ವ್ಯಂಜನ ಸಂಧಿಗಳು** – ವ್ಯಂಜನಕ್ಕೆ ವ್ಯಂಜನ, ವ್ಯಂಜನಕ್ಕೆ ಸ್ವರ ಅಥವಾ ಸ್ವರಕ್ಕೆ ವ್ಯಂಜನವಾಗಲಿ ಸೇರಿ ಸಂಧಿಯಾದರೆ ಅವುಗಳೇ ವ್ಯಂಜನ ಸಂಧಿಗಳು.

**ವ್ಯಂಜನ + ವ್ಯಂಜನ= ವ್ಯಂಜನ ಸಂಧಿ, ಸಂಧಿ**

**ಬೆವರ್ + ಪನಿ= ಬೆವರ್ವನಿ ಆದೇಶ ಸಂಧಿ**

## ಸಂಧಿಯ ಪ್ರಕಾರಗಳು

**ಕನ್ನಡ ಸಂಧಿಗಳು** : ಕನ್ನಡ ಸಂಧಿಗಳಲ್ಲಿ ಲೋಪ ಮತ್ತು ಆಗಮ ಸಂಧಿಗಳು ಸ್ವರಸಂಧಿಗಳಾಗಿದ್ದು ಆದೇಶ ಸಂಧಿಯು ವ್ಯಂಜನ ಸಂಧಿಯಾಗಿದೆ.

**ಕನ್ನಡ ಸಂಧಿಗಳು**

ಸ್ವರ ಸಂಧಿಗಳು ವ್ಯಂಜನ

ಲೋಪ ಸಂಧಿ

ಆದೇಶ ಸಂಧಿ

ಆಗಮ ಸಂಧಿ – ಕತಪ ಗಳಿಗೆ ಗದಬ ಕಾರಾದೇಶ

ಯ ಕಾರಾಗಮ– ಪಬಮ ಗಳಿಗೆ ವ ಕಾರಾದೇಶ

ವ ಕಾರಾಗಮ– ಸಕಾರಕ್ಕೆ ಚಜಛ ಕಾರಾದೇಶ

ಲ ಕಾರಾಗಮ

**ಸಂಸ್ಕೃತ ಸಂಧಿಗಳು** : ಸಂಸ್ಕೃತ ಸಂಧಿಗಳಲ್ಲಿ ಸವರ್ಣದೀರ್ಘ, ಗುಣ, ವೃದ್ಧಿ ಮತ್ತು ಯಣ್ ಸಂಧಿಗಳು ಸ್ವರಸಂಧಿಗಳಾಗಿದ್ದು ಜಶ್ತ್ವ, ಶ್ಚುತ್ವ, ಅನುನಾಸಿಕ, ವಿಸರ್ಗ ಸಂಧಿಗಳು ವ್ಯಂಜನ ಸಂಧಿಗಳಾಗಿವೆ.

**ಸಂಸ್ಕೃತ ಸಂಧಿಗಳು**

| ಸ್ವರ ಸಂಧಿಗಳು | ವ್ಯಂಜನ |
|---|---|
| ಸವರ್ಣದೀರ್ಘ | ಜಶ್ತ್ವ |
| ಗುಣ | ಶ್ಚುತ್ವ |
| ವೃದ್ಧಿ | ಅನುನಾಸಿಕ |
| ಯಣ್ | ವಿಸರ್ಗ |

## ಕನ್ನಡ ಕಲಿ

■ ಡಾ. ಶಿವಾನಂದ ಟವಳಿ
shivu.tavali@gmail.com



# ಕನ್ನಡ ವ್ಯಂಜನ ಸಂಧಿ

### 1. ಆದೇಶ ಸಂಧಿ :

ಉತ್ತರಪದದ ಆದಿಯಲ್ಲಿರುವ ವ್ಯಂಜನಕ್ಕೆ ಬೇರೊಂದು ವ್ಯಂಜನವು ಪರವಾಗಿ ಬರುವುದನ್ನು 'ಆದೇಶ ಸಂಧಿ' ಎಂದು ಕರೆಯುತ್ತಾರೆ. ಆದೇಶ ಸಂಧಿಯು ವ್ಯಂಜನ ಸಂಧಿಯಾಗಿದ್ದು, ಇಲ್ಲಿ ವ್ಯಂಜನಕ್ಕೆ ವ್ಯಂಜನವು ಪರವಾಗಿ ಬಂದು ಸಂಧಿ ಕಾರ್ಯ ನಡೆಯುತ್ತದೆ. ಆದೇಶ ಸಂಧಿಯ ಕಾರ್ಯವು ಉತ್ತರಪದದಲ್ಲಿರುವ ಮೊದಲ ವ್ಯಂಜನದಲ್ಲಿ ಮಾತ್ರ ನಡೆಯುತ್ತದೆ.

* **ಗದಬ ಆದೇಶ ಸಂಧಿ :** ಉತ್ತರ ಪದದ ಆದಿಯಲ್ಲಿರುವ ಕ, ತ, ಪ ವ್ಯಂಜನಗಳಿಗೆ ಕ್ರಮವಾಗಿ ಗ, ದ, ಬ ವ್ಯಂಜನಗಳು ಆದೇಶವಾಗಿ ಬಂದರೆ ಅದುವೇ ಗದಬಾದೇಶ ಸಂಧಿ.

ಕ –> ಗ್

ತ –> ದ್

ಪ –> ಬ್

**ಉದಾ :**

| ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ಹುಲಿ | + ತೊಗಲು | = ಹುಲಿದೊಗಲು |
| ಹುಲ್ಲು | + ಕಾವಲು | = ಹುಲ್ಲುಗಾವಲು |
| ಕಣ್ | + ಪನಿ | = ಕಂಬನಿ |
| ಹಳೆ | + ಕನ್ನಡ | = ಗಳೆಗನ್ನಡ |
| ಹೂ | + ಪುಟ್ಟಿ | = ಹೂಬುಟ್ಟಿ |

## ಕನ್ನಡ ಕಲಿ

■ ಡಾ. ಶಿವಾನಂದ ಟವಳಿ
shivu.tavali@gmail.com



# ಕನ್ನಡ ವ್ಯಂಜನ ಸಂಧಿ

**ವ ಕಾರಾದೇಶ ಸಂಧಿ :** ಉತ್ತರ ಪದದ ಆದಿಯಲ್ಲಿರುವ ಪ, ಬ, ಮ ವ್ಯಂಜನಗಳಿಗೆ 'ವ' ಕಾರವು ಆದೇಶವಾಗುವುದೇ ವಕಾರಾದೇಶ ಸಂಧಿ.

ಪ -> ವ

ಬ -> ವ

ಮ -> ವ

ಉದಾ :-

| ಪೂರ್ವಪದ | +ಉತ್ತರಪದ | =ಸಂಧಿಪದ |
|---|---|---|
| ಕೆನೆ | + ಪಾಲು | = ಕೆನೆವಾಲು |
| ತಲೆ | + ಬಾಗು | = ತಲೆವಾಗು |
| ಮೆಲ್ | + ಮಾತು | = ಮೆಲ್ವಾತು |
| ಎಲೆ | + ಮನೆ | = ಎಲೆವನೆ |
| ಬೆವರ್ | + ಪನಿ | = ಬೆವರ್ವನಿ |

**ಚಛಜ ಕಾರಾದೇಶ ಸಂಧಿ :** ಉತ್ತರ ಪದದ ಆದಿಯಲ್ಲಿರುವ 'ಸ' ಕಾರಕ್ಕೆ 'ಚ/ಛ/ಜ' ಕಾರಗಳು ಆದೇಶವಾಗುವುದೇ ಚಛಜ ಕಾರಾದೇಶ ಸಂಧಿ.

ಸ -> ಚ

ಸ -> ಛ

ಸ -> ಜ

ಉದಾ :-

| ಪೂರ್ವಪದ | +ಉತ್ತರಪದ | =ಸಂಧಿಪದ |
|---|---|---|
| ಇನ್ | + ಸರ | = ಇಂಚರ |
| ಇರ್ | + ಸಾಸಿರ | = ಇರ್ಛಾಸಿರ |
| ಮುನ್ | + ಸೆರಗು | =ಮುಂಜೆರಗು |
| ನೂರ್ | + ಸಾಸಿರ | =ನೂರ್ಛಾಸಿರ |
| ಪೊನ್ | + ಸುರಿಗೆ | =ಪೊಂಜುರಿಗೆ |

### ಕನ್ನಡ ಸಂಧಿಗಳು ಮತ್ತು ಸಂಸ್ಕೃತ ಸಂಧಿಗಳು

**ಕನ್ನಡ ಸಂಧಿಗಳು:**
ಲೋಪಸಂಧಿ
ಆಗಮ ಸಂಧಿ
ಯಕಾರಾಗಮ ಸಂಧಿ
ವಕಾರಾಗಮ ಸಂಧಿ
ಆದೇಶ ಸಂಧಿ

**ಸಂಸ್ಕೃತ ಸಂಧಿಗಳು:**
ಸವರ್ಣ ದೀರ್ಘ ಸಂಧಿ
ಗುಣಸಂಧಿ
ವೃದ್ಧಿ ಸಂಧಿ
ಯಣ್ ಸಂಧಿ
ಜಶ್ತ್ವ ಸಂಧಿ
ಶ್ಚುತ್ವ ಸಂಧಿ
ಅನುನಾಸಿಕ ಸಂಧಿ

# ಕನ್ನಡ ಕಲಿ



■ ಡಾ. ಶಿವಾನಂದ ಟವಳಿ
shivu.tavali@gmail.com

## 4. ಅನುನಾಸಿಕ ಸಂಧಿ

ಪೂರ್ವಪದದ ಕೊನೆಯಲ್ಲಿರುವ ವರ್ಗೀಯ ವ್ಯಂಜನದ ಪ್ರಥಮಾಕ್ಷರಗಳಿಗೆ ಯಾವುದೇ ಅನುನಾಸಿಕಾಕ್ಷರವು ಮುಂದೆ ಬಂದರೆ ಆಯಾ ವರ್ಗದ ಅನುನಾಸಿಕಾಕ್ಷರಗಳು ಆದೇಶವಾಗಿ ಬರುವುದಕ್ಕೆ 'ಅನುನಾಸಿಕ ಸಂಧಿ' ಎಂದು ಕರೆಯುತ್ತಾರೆ.

| ಸಂಧಿ ವಿನ್ಯಾಸ |
|---|
| ಕ + ಯಾವುದೇ ಅನುನಾಸಿಕ = ಙ |
| ಚ + ಯಾವುದೇ ಅನುನಾಸಿಕ = ಞ |
| ಟ + ಯಾವುದೇ ಅನುನಾಸಿಕ = ಣ |
| ತ + ಯಾವುದೇ ಅನುನಾಸಿಕ = ನ |
| ಪ + ಯಾವುದೇ ಅನುನಾಸಿಕ = ಮ |

ಉದಾ :

| ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ವಾಕ್ | + ಮಯ | = ವಾಙ್ಮಯ |
| ಷಟ್ | + ಮುಖ | = ಷಣ್ಮುಖ |
| ಸತ್ | + ಮಾರ್ಗ | = ಸನ್ಮಾರ್ಗ |
| ಚಿತ್ | + ಮೂರ್ತಿ | = ಚಿನ್ಮೂರ್ತಿ |
| ಅಪ್ | + ಮಯ | = ಅಮ್ಮಯ |

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ಸಂಸ್ಕೃತ ಸ್ವರ ಸಂಧಿಗಳು

### 4. ಯಣ್ ಸಂಧಿ :

ಪೂರ್ವ ಪದದ ಕೊನೆಯಲ್ಲಿ ಇ, ಈ, ಉ, ಊ, ಋ ಕಾರಗಳಿದ್ದು ಅವುಗಳ ಮುಂದೆ ಸವರ್ಣವಲ್ಲದ ಸ್ವರವೂ ಬಂದರೆ ಇ, ಈ ಕಾರಗಳಿಗೆ 'ಯ' ಕಾರವು, ಉ ಊ ಕಾರಗಳಿಗೆ 'ವ' ಕಾರವು, ಋ ಕಾರಕ್ಕೆ 'ರ' ಕಾರವೂ ಆದೇಶವಾಗಿ ಬರುವುದಕ್ಕೆ 'ಯಣ್ ಸಂಧಿ' ಎಂದು ಕರೆಯುತ್ತಾರೆ.

| ಸಂಧಿ ವಿನ್ಯಾಸ |
|---|
| ಇ/ಈ + ಸವರ್ಣವಲ್ಲದ ಸ್ವರ = ಯ |
| ಉ/ಊ + ಸವರ್ಣವಲ್ಲದ ಸ್ವರ = ವ |
| ಋ + ಸವರ್ಣವಲ್ಲದ ಸ್ವರ = ರ |

ಉದಾ :

| ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ಜಾತಿ | + ಅತೀತ | = ಜಾತ್ಯತೀತ |
| ಗುರು | + ಆಜ್ಞೆ | = ಗುರ್ವಾಜ್ಞೆ |
| ಪಿತೃ | + ಆರ್ಜಿತ | = ಪಿತ್ರಾರ್ಜಿತ |
| ಅತಿ | + ಅಂತ | = ಅತ್ಯಂತ |
| ಪ್ರತಿ | + ಉತ್ತರ | = ಪ್ರತ್ಯುತ್ತರ |

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ಸಂಸ್ಕೃತ ಸ್ವರ ಸಂಧಿಗಳು

### 2. ಗುಣಸಂಧಿ: ಉದಾ–

| ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ದೇವ | + ಇಂದ್ರ | = ದೇವೇಂದ್ರ |
| ರಾಜ್ಯ | + ಉತ್ಸವ | = ರಾಜ್ಯೋತ್ಸವ |
| ಮಹಾ | + ಋಷಿ | = ಮಹರ್ಷಿ |
| ದೇವ | + ಋಷಿ | = ದೇವರ್ಷಿ |

### 3. ವೃದ್ಧಿ ಸಂಧಿ :

ಪೂರ್ವ ಪದದ ಕೊನೆಯಲ್ಲಿ ಅ, ಆ ಕಾರಗಳಿದ್ದು ಅವುಗಳ ಮುಂದೆ ಏ, ಐ ಕಾರಗಳು ಬಂದರೆ ಐ ಕಾರವೂ, ಓ, ಔ ಕಾರಗಳು ಬಂದರೆ ಔ ಕಾರವೂ ಆದೇಶವಾಗಿ ಬರುವುದಕ್ಕೆ 'ವೃದ್ಧಿ ಸಂಧಿ' ಎಂದು ಕರೆಯುತ್ತಾರೆ.

| ಸಂಧಿ ವಿನ್ಯಾಸ |
|---|
| ಅ/ಆ + ಏ/ಐ = ಐ |
| ಅ/ಆ + ಓ/ಔ = ಔ |

ಉದಾ :

| ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ಏಕ | + ಏಕ | = ಏಕೈಕ |
| ಲೋಕ | + ಏಕ | = ಲೋಕೈಕ |
| ಮಹಾ | + ಔಷಧ | = ಮಹೌಷಧ |
| ಗಂಗಾ | + ಓಘ | = ಗಂಗೌಘ |
| ಅಷ್ಟ | + ಐಶ್ವರ್ಯ | = ಅಷ್ಟೈಶ್ವರ್ಯ |

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ಸಂಸ್ಕೃತ ಸ್ವರ ಸಂಧಿಗಳು

**1. ಸವರ್ಣದೀರ್ಘ ಸಂಧಿ :** ಸವರ್ಣೀಯ ಸ್ವರಗಳು ಒಂದರ ಮುಂದೊಂದು ಬಂದು ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘ ಸ್ವರವು ಆದೇಶವಾಗಿ ಬಂದರೆ ಅದನ್ನು 'ಸವರ್ಣದೀರ್ಘ ಸಂಧಿ' ಎಂದು ಕರೆಯುತ್ತಾರೆ.

| ಸಂಧಿ ವಿನ್ಯಾಸ | | |
|---|---|---|
| ಅ/ಆ | + ಅ/ಆ | = ಆ |
| ಇ/ಈ | + ಇ/ಈ | = ಈ |
| ಉ/ಊ | + ಉ/ಊ | = ಊ |

ಉದಾ :

| ಪೂರ್ವಪದ | +ಉತ್ತರಪದ | = ಸಂಧಿಪದ |
|---|---|---|
| ದೇವ | + ಆಲಯ | = ದೇವಾಲಯ |
| ಗಿರಿ | + ಈಶ | = ಗಿರೀಶ |
| ಗಜ | + ಆನನ | = ಗಜಾನನ |
| ಗುರು | + ಉಪದೇಶ | = ಗುರೂಪದೇಶ |
| ಕವಿ | + ಇಂದ್ರ | = ಕವೀಂದ್ರ |

**2. ಗುಣಸಂಧಿ :**

ಪೂರ್ವ ಪದದ ಕೊನೆಯಲ್ಲಿ ಅ, ಆ ಕಾರಗಳಿದ್ದು ಅವುಗಳ ಮುಂದೆ ಇ, ಈ ಕಾರಗಳು ಬಂದರೆ 'ಏ' ಕಾರವೂ, ಉ, ಊ ಕಾರಗಳು ಬಂದರೆ 'ಓ' ಕಾರವೂ ಮತ್ತು ಋ ಕಾರ ಬಂದರೆ 'ಅರ್' ಕಾರವೂ ಆದೇಶವಾಗಿ ಬರುವುದಕ್ಕೆ 'ಗುಣ ಸಂಧಿ' ಎಂದು ಕರೆಯುತ್ತಾರೆ.

| ಸಂಧಿ ವಿನ್ಯಾಸ | | |
|---|---|---|
| ಅ/ಆ | + ಇ/ಈ | = ಏ |
| ಅ/ಆ | + ಉ/ಊ | = ಓ |
| ಅ/ಆ | + ಋ | = ಅರ್ |

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಸಮಾಸಗಳು

ಸಮಾಸವೆಂದರೆ ಕೂಡುವಿಕೆ, ಒಂದಾಗುವಿಕೆ ಅಥವಾ ಸೇರುವಿಕೆ ಎಂದರ್ಥ. ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಸಾರವಾಗಿ ಸೇರಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪ ಮಾಡಿಕೊಂಡು ಒಂದು ಪದವಾಗುವುದನ್ನು 'ಸಮಾಸ' ಎನ್ನುವರು. ಎರಡು ಅಕ್ಷರಗಳು ಸೇರಿ ಸಂಧಿಯಾಗುವಂತೆ ಎರಡು ಅಥವಾ ಹೆಚ್ಚು ಪದಗಳು ಸೇರಿ ಸಮಾಸವಾಗುತ್ತವೆ. ಹೀಗೆ ಸಮಾಸವಾಗುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯಗಳು ಲೋಪವಾಗುತ್ತವೆ. ಹೀಗೆ ಎರಡು ಅಥವಾ ಹೆಚ್ಚು ಪದಗಳು ಕೂಡುವ ಸಮಾಸಗಳಿಗೆ 'ಕೂಡುನುಡಿ' ಎಂಬ ಹೆಸರಿನಿಂದಲೂ ಕರೆಯುವರು.

ಉದಾ: ಹುಲಿಯಂಜಿಕೆ, ಗಂಗಾಮೂಲ, ನಿಡುದೋಳು, ಮೆಲ್ವಾಸು, ಸಪ್ತಸ್ವರಗಳು, ಮೂಲೋಕ, ಪದ್ಮನಾಭ, ಮೀನಾಕ್ಷಿ, ಒಳಗಣ್ಣು, ನಟ್ಟಿರುಳು ಇತ್ಯಾದಿ.

## ವಿಗ್ರಹ ವಾಕ್ಯ

ಸಮಾಸ ಪದದಲ್ಲಿ ಸೇರಿರುವ ಪದಗಳನ್ನು ಬಿಡಿಸಿ ಅವು ಯಾವ ಅರ್ಥದಲ್ಲಿ ಸೇರಿವೆ? ಎಂಬುದನ್ನು ವಿವರಿಸುವುದಕ್ಕೆ 'ವಿಗ್ರಹ ವಾಕ್ಯ' ಎನ್ನುವರು. ಸಮಸ್ತ ಪದವನ್ನು ಬಿಡಿಸಿ ಬರೆಯುವುದೇ ವಿಗ್ರಹ ವಾಕ್ಯ. ಹೀಗೆ ಬಿಡಿಸಿ ಬರೆದಾಗ ಬರುವ ಮೊದಲನೆಯ ಪದವನ್ನು ಪೂರ್ವಪದ ಎಂತಲೂ ಎರಡನೆಯ ಪದವನ್ನು ಉತ್ತರಪದ ಎಂತಲೂ ಕರೆಯುತ್ತಾರೆ.

ಉದಾ:

| ಪೂರ್ವಪದ | + ಉತ್ತರಪದ | = ಸಮಾಸ ಪದ |
|---|---|---|
| ಮೈಯನ್ನು | + ತಡವಿ | = ಮೈದಡವಿ |
| ಬೇರಿನಿಂದ | + ಬೆರೆಸಿ | = ಬೇರ್ವೆರಸಿ |
| ಪಾದಗಳ | + ಸಂಕಲೆ | = ಪಾದಸಂಕಲೆ |
| ಸವಿಯಾದ | + ನೆನಪು | = ಸವಿನೆನಪು |
| ಮೂರು | + ಕಣ್ಣು | = ಮುಕ್ಕಣ್ಣು |

# ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

## ಸಮಾಸಗಳು

### 1. ತತ್ಪುರುಷ ಸಮಾಸ

ಉತ್ತರಪದದ ಅರ್ಥವು ಪ್ರಧಾನವಾಗಿದ್ದು, ಎರಡು ನಾಮಪದಗಳು ಪರಸ್ಪರ ಕೂಡುವುದೇ ತತ್ಪುರುಷ ಸಮಾಸ. ಪುರುಷ ಪದ (ಉತ್ತರಪದ)ವನ್ನು ಪೂರ್ವಪದವು ಅನುಸರಿಸಿ ಬರುವುದರಿಂದ (ತತ್ ಎಂದರೆ ಅನುಸರಿಸು) ತತ್ಪುರುಷ ಎಂಬ ಹೆಸರು ಬಂದಿದೆ. ಪೂರ್ವಪದದ ಅಂತ್ಯದಲ್ಲಿ ಯಾವ ವಿಭಕ್ತಿ ಇರುವುದೋ ಅದೇ ವಿಭಕ್ತಿಯ ಹೆಸರಿನಿಂದ ಈ ಸಮಾಸವನ್ನು ಕರೆಯಲಾಗುತ್ತದೆ. ಕನ್ನಡದಲ್ಲಿ ಹೆಚ್ಚಾಗಿ ಷಷ್ಠೀ ತತ್ಪುರುಷ ಸಮಾಸಗಳೇ ಬಳಕೆಯಾಗುತ್ತವೆ.

ಉದಾ: ವಯಸ್ಸಿನಿಂದ + ವೃದ್ಧ= ವಯೋವೃದ್ಧ (ತೃತೀಯತ.ಸ.)
ಗುರುವಿನ + ಮನೆ = ಗುರುಮನೆ (ಷಷ್ಠಿ ತ.ಸ.)
ಸಾಲದ+ಮೇಳ = ಸಾಲಮೇಳ (ಷಷ್ಠಿ ತ.ಸ.)
ಕಾಲಿನ + ಬಳೆ = ಕಾಲುಬಳೆ (ಷಷ್ಠಿ ತ.ಸ.)
ತಲೆಯಲ್ಲಿ+ ನೋವು = ತಲೆ ನೋವು (ಸಪ್ತಮಿತ.ಸ.)
ಭೂತಕ್ಕೆ+ ಬಲಿ = ಭೂತಬಲಿ (ಚತುರ್ಥಿತ.ಸ.)
ಸೆರೆಯಲ್ಲಿ+ವಾಸ = ಸೆರೆವಾಸ (ಸಪ್ತಮಿತ.ಸ.)
ಕೈಯಿಂದ+ ಜಗಳ = ಕೈಜಗಳ (ತೃತೀಯತ.ಸ.)

### 2. ಕರ್ಮಧಾರೆಯ ಸಮಾಸ

ಇಲ್ಲಿ ಉತ್ತರಪದದ ಅರ್ಥವೇ ಪ್ರಧಾನವಾಗಿರುತ್ತದೆ. ಪೂರ್ವ ಪದದಲ್ಲಿನ ವಿಶೇಷಣವು ಉತ್ತರಪದದಲ್ಲಿನ ನಾಮದೊಡನೆ ಸೇರಿ ಆಗುವ ಸಮಾಸವೇ ಕರ್ಮಧಾರೆಯ ಸಮಾಸ. ಪೂರ್ವ ಪದವು ವಿಶೇಷಣವಾಗಿದ್ದು, ಉತ್ತರ ಪದವು ವಿಶೇಷ್ಯವಾಗಿರುತ್ತದೆ. ಈ ಸಮಾಸದಲ್ಲಿ ಅರಿ ಸಮಾಸ(ದೋಷ) ಕಂಡುಬರುವುದಿಲ್ಲ.

ಉದಾ: ಬಿಳಿದಾದ + ತಾವರೆ= ಬೆಳ್ದಾವರೆ
ಕೊಂಕಿದ + ಕೋಲು = ಕುಡುಗೋಲು
ಹಳೆಯ + ಕನ್ನಡ = ಹಳೆಗನ್ನಡ
ಇಂಪಾದ+ ಸ್ವರ = ಇಂಚರ
ಹಿರಿದು+ ಜೇನು = ಹೆಜ್ಜೇನು
ಚೆಲುವಾದ+ ಬೆಳಕು = ಚೆಂಬೆಳಕು
ಕೆಂಪಾದ + ತುಟಿ = ಕೆಂದುಟಿ

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಸಮಾಸಗಳು

### 3. ದ್ವಿಗು ಸಮಾಸ

ಉತ್ತರಪದದ ಅರ್ಥವು ಪ್ರಧಾನವಾಗಿದ್ದು, ಪೂರ್ವಪದದಲ್ಲಿನ ಸಂಖ್ಯಾವಾಚಕಕ್ಕೆ ಉತ್ತರಪದದಲ್ಲಿನ ನಾಮಪದ ಇಲ್ಲವೇ ಸಂಖ್ಯಾವಾಚಕಗಳೊಡನೆ ಕೂಡಿ ಆಗುವ ಸಮಾಸವೇ 'ದ್ವಿಗು ಸಮಾಸ'. ಇಲ್ಲಿ ಸಂಖ್ಯೆಯು ಸಂಖ್ಯೆಯೊಂದಿಗೆ ಸಂಖ್ಯೆಯು ನಾಮದೊಂದಿಗೆ ಸೇರಿ ಸಮಾಸ ಪದ ರೂಪಗೊಳ್ಳುತ್ತದೆ.

ಉದಾ: ಎರಡು + ತಂಡ = ಇತ್ತಂಡ
ಒಂದು + ಕಣ್ಣು = ಒಕ್ಕಣ್ಣು
ಮೂರು + ಕಣ್ಣು = ಮುಕ್ಕಣ್ಣು
ಎರಡು + ಮಡಿ = ಇಮ್ಮಡಿ
ನಾಲ್ಕು + ಪತ್ತು = ನಾಲ್ವತ್ತು
ಎರಡು + ಐದು = ಇರ್ಐದು
ಐದು + ಪತ್ತು = ಐವತ್ತು
ಆರು + ಪತ್ತು = ಆರವತ್ತು

### 4. ಕ್ರಿಯಾ ಸಮಾಸ

ಉತ್ತರಪದ ಪ್ರಧಾನವಾಗಿದ್ದು, ಪೂರ್ವಪದದಲ್ಲಿರುವ ನಾಮಪದವು ಉತ್ತರ ಪದದಲ್ಲಿಯ ಕ್ರಿಯಾಪದ, ಕೃದಂತದೊಡನೆ ಕೂಡಿದರೆ ಅದುವೇ ಕ್ರಿಯಾ ಸಮಾಸ. ಪೂರ್ವಪದವು ನಾಮಪದವಾಗಿದ್ದು ದ್ವಿತೀಯಾ ವಿಭಕ್ತಿ ಪ್ರತ್ಯಯವನ್ನು ಹೊಂದಿರುತ್ತದೆ. ಈ ಸಮಾಸದಲ್ಲಿ ಅರಿಸಮಾಸ(ದೋಷ) ಕಂಡುಬರುವುದಿಲ್ಲ.

ಉದಾ: ಕಣ್ಣನ್ನು + ಮುಚ್ಚಿ = ಕಣ್ಮುಚ್ಚಿ
ಸುಖವನ್ನು+ ಪಡು = ಸುಖಪಡು
ಜನ್ಮವನ್ನು + ತಾಳು = ಜನ್ಮತಾಳು
ನೀರನ್ನು + ಉಣಿಸು = ನೀರುಣಿಸು
ಕಾಲನ್ನು + ತೆಗೆದು = ಕಾಲ್ತೆಗೆದು
ದುಃಖವನ್ನು + ಪಡು = ದುಃಖಪಡು
ವಿಷವನ್ನು + ಕಾರು = ವಿಷಕಾರ
ಸತ್ಯವನ್ನು + ನುಡಿ = ಸತ್ಯನುಡಿ

**ಕನ್ನಡ ಕಲಿ**



▪ ಡಾ. ಶಿವಾನಂದ ಟವಳಿ
shivu.tavali@gmail.com

# ಸಮಾಸದ ಸಾಮಾನ್ಯ ನಿಯಮಗಳು

* ಸಮಾಸದಲ್ಲಿಯ ಎರಡೂ ಪದಗಳು ಒಂದೇ ಜಾತಿಗೆ ಸೇರಿದವುಗಳಾಗಿರಬೇಕು.

**(ಸಂಸ್ಕೃತ+ಸಂಸ್ಕೃತ, ಕನ್ನಡ + ಕನ್ನಡ)**

* ಅರಿಸಮಾಸ ಎಂದರೆ ಸಮಾಸಕ್ಕೆ ವೈರತ್ವ.ಅರಿ ಸಮಾಸ ಮಾಡಬಾರದು.

**(ಸಂಸ್ಕೃತ+ಕನ್ನಡ, ಕನ್ನಡ+ಸಂಸ್ಕೃತ)**

* ಹಿಂದಿನ ಕವಿಗಳು ಮಾಡಿರುವ ಅರಿ ಸಮಾಸಗಳನ್ನು ದೋಷಗಳೆಂದು ಪರಿಗಣಿಸಬಾರದು.

ಉದಾ: **ತುರಗರಥ**

* ಬಿರುದುಗಳು, ಪ್ರಶಸ್ತಿಗಳು, ಪದವಿಗಳು ಅರಿ ಸಮಾಸಗಳೆಂದು ತಿಳಿಯಬಾರದು.

ಉದಾ: **ರಾಯಕೋಲಾಹಲ**

* ಕರ್ಮಧಾರೆಯ, ಗಮಕ ಹಾಗೂ ಕ್ರಿಯಾ ಸಮಾಸಗಳಿಗೆ ಅರಿ ಸಮಾಸದೋಷ ಅನ್ವಯಿಸುವುದಿಲ್ಲ.

## ಸಮಾಸದ ಪ್ರಕಾರಗಳು

| | |
|---|---|
| ಉತ್ತರಪದ ಪ್ರಧಾನ ಸಮಾಸಗಳು | ತತ್ಪುರುಷ ಸಮಾಸ<br>ಕರ್ಮಧಾರೆಯ ಸಮಾಸ<br>ದ್ವಿಗು ಸಮಾಸ<br>ಕ್ರಿಯಾ ಸಮಾಸ<br>ಗಮಕ ಸಮಾಸ |
| ಪೂರ್ವಪದ ಪ್ರಧಾನ ಸಮಾಸ | ಅಂಶಿ ಸಮಾಸ |
| ಉಭಯಪದ ಪ್ರಧಾನ ಸಮಾಸ | ದ್ವಂದ್ವ ಸಮಾಸ |
| ಅನ್ಯಪದ ಪ್ರಧಾನ ಸಮಾಸ | ಬಹುವ್ರೀಹಿ ಸಮಾಸ |

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಲೇಖನ ಚಿಹ್ನೆಗಳು

## ಅರ್ಧವಿರಾಮ ಚಿಹ್ನೆ

ಒಂದು ಪ್ರಧಾನ ವಾಕ್ಯದಲ್ಲಿ ಅನೇಕ ಉಪಯೋಗ ವಾಕ್ಯಗಳಿದ್ದಾಗ ಅವುಗಳ ಕೊನೆಯಲ್ಲಿ ಬಳಸುವ ಲೇಖನ ಚಿಹ್ನೆಯಾಗಿದೆ. ಸ್ವತಂತ್ರ್ಯ ವಾಕ್ಯಗಳು ಬಂದಾಗ ಅವುಗಳ ಮುಂದೆ ಈ ಅರ್ಧವಿರಾಮ ಬಳಸಲಾಗುತ್ತದೆ. ವಾಕ್ಯಗಳು ಪರಸ್ಪರ ಪೂರಕವಾಗಿದ್ದರೆ ಅವುಗಳ ನಡುವೆ ಅರ್ಧವಿರಾಮ ಬರುತ್ತದೆ.

ಉದಾ :-

1. ಅಂದು ಮಳೆಯಾಯಿತು; ಆಟ ನಡೆಯಲಿಲ್ಲ.
2. ಗಂಟೆಯು ಬಾರಿಸಿತು; ಮಕ್ಕಳು ಮನೆಗೆ ಕುಣಿಯುತ್ತಾ ಹೋದರು.

## ಪ್ರಶ್ನಾರ್ಥಕಚಿಹ್ನೆ

ಪ್ರಶ್ನೆಯನ್ನು ಮಾಡುವ ಪದಗಳ ಮುಂದೆ ಬಳಸುವ ಚಿಹ್ನೆಯಾಗಿದೆ. ವಾಕ್ಯದಲ್ಲಿಯೂ ಪ್ರಶ್ನೆ ಅಡಗಿದ್ದರೆ ವಾಕ್ಯದ ಕೊನೆಗೆ ಈ ಚಿಹ್ನೆ ಬಳಸಲಾಗುತ್ತದೆ. ಪ್ರಶ್ನಾರ್ಥಕ ಪದ ಮತ್ತು ವಾಕ್ಯದ ಮುಂದೆ ಈ ಚಿಹ್ನೆ ಬಳಕೆಯಾಗುತ್ತದೆ.

ಉದಾ :

1. ಪ್ರಬಂಧ ಎಂದರೇನು?
2. ಗದಾಯುದ್ಧವನ್ನು ರಚಿಸಿದವರು ಯಾರು?

ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಲೇಖನ ಚಿಹ್ನೆಗಳು

ಬರವಣಿಗೆ ಮೂಲಕ ನಿಲುಗಡೆ, ವಿಚಾರ, ಭಾವನೆಗಳನ್ನು ಸೂಚಿಸುವುದಕ್ಕಾಗಿ ಬಳಸುವ ಚಿಹ್ನೆಗಳನ್ನು 'ಲೇಖನ ಚಿಹ್ನೆಗಳು' ಎಂದು ಕರೆಯುವರು. ನಮ್ಮ ವಿಚಾರಗಳನ್ನು, ಭಾವನೆಗಳನ್ನು ಇನ್ನೊಬ್ಬರಿಗೆ ಲೇಖನದ ಮೂಲಕ ತೋರಿಸಬೇಕಾದಾಗ ಇವುಗಳ ಬಳಕೆ ಅತ್ಯವಶ್ಯಕವಾಗಿದೆ.

ಲೇಖನ ಚಿಹ್ನೆಗಳನ್ನು ಬಳಸದೇ ಹೋದರೆ ಅರ್ಥ ಸ್ಪಷ್ಟತೆ ಕಂಡು ಬರುವುದಿಲ್ಲ. ಹಳಗನ್ನಡ ಸಾಹಿತ್ಯದಲ್ಲಿ ಇವುಗಳ ಬಳಕೆ ಕಂಡು ಬರುವುದಿಲ್ಲ. ಆದರೆ ಇತ್ತೀಚೆಗೆ ಪಾಶ್ಚಾತ್ಯ ಸಾಹಿತ್ಯದ ಪರಿಣಾಮವಾಗಿ ಲೇಖನ ಚಿಹ್ನೆಗಳನ್ನು ಹೊಸಗನ್ನಡ ಗದ್ಯ ಸಾಹಿತ್ಯದಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು.

## ಕನ್ನಡದಲ್ಲಿ ಬಳಸುವ ಪ್ರಮುಖ ಲೇಖನ ಚಿಹ್ನೆಗಳು

ಲೇಖನದ ವಿಚಾರ ಸಹೃದಯರ ಗಮನಕ್ಕೆ ಬರಬೇಕಾದಲ್ಲಿ ಲೇಖನ ಚಿಹ್ನೆಗಳನ್ನು ಶಬ್ದಗಳ ಮುಂದೆ ವಾಕ್ಯದ ಮಧ್ಯದಲ್ಲಿ ಮತ್ತು ಕೊನೆಯಲ್ಲಿ ಬಳಸುತ್ತಾರೆ. ಅಭಿಪ್ರಾಯ, ಆಲೋಚನೆ, ಭಾವನೆ, ಆಕಾಂಕ್ಷೆ, ಪ್ರಶ್ನಾರ್ಥ ಮೊದಲಾದವು ಸ್ಫುಟವಾಗುವಂತೆ ಓದುವುದಕ್ಕೂ, ಅರ್ಥಭಾವಗಳನ್ನೂ ಗ್ರಹಿಸುವುದಕ್ಕೂ ಲೇಖನ ಚಿಹ್ನೆಗಳು ಸಹಾಯಕವಾಗಿವೆ. ಬೇರೆಬೇರೆ ಭಾಷೆಗಳ ಪ್ರಭಾವದಿಂದ ಲೇಖನ ಚಿಹ್ನೆಗಳನ್ನು ಕನ್ನಡದಲ್ಲಿ ಬಳಸಲಾಗುತ್ತಿದೆ. ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಲೇಖನ ಚಿಹ್ನೆಗಳು

ಬೇರೆಬೇರೆ ಭಾಷೆಗಳ ಪ್ರಭಾವದಿಂದ ಲೇಖನ ಚಿಹ್ನೆಗಳನ್ನು ಕನ್ನಡದಲ್ಲಿ ಬಳಸಲಾಗುತ್ತಿದೆ.

**ಅವುಗಳು ಈ ಕೆಳಗಿನಂತಿವೆ**

1. ಪೂರ್ಣವಿರಾಮ ಚಿಹ್ನೆ .
2. ಅರ್ಧವಿರಾಮ ಚಿಹ್ನೆ ;
3. ಪ್ರಶ್ನಾರ್ಥಕ ಚಿಹ್ನೆ ?
4. ಅಲ್ಪವಿರಾಮ ಚಿಹ್ನೆ ,
5. ಉದ್ಧರಣ ಚಿಹ್ನೆ ‘’ “”
6. ಭಾವಸೂಚಕ ಚಿಹ್ನೆ !
7. ವಿವರಣ ಚಿಹ್ನೆ : :– –
8. ಆವರಣ ಚಿಹ್ನೆ [] (){}
9. ಸಮನಾರ್ಥಕ ಚಿಹ್ನೆ =
10. ಸಂಕಲನ ಚಿಹ್ನೆ +
11. ವಿರುದ್ಧಾರ್ಥಕ ಚಿಹ್ನೆ ..
12. ಇತರೆ ಚಿಹ್ನೆಗಳು

**1. ಪೂರ್ಣವಿರಾಮ ಚಿಹ್ನೆ:** ವಾಕ್ಯದಲ್ಲಿ ಕ್ರಿಯೆಯು ಪೂರ್ಣವಾಗಿದೆ ಎಂದು ಸೂಚಿಸುವ ಪೂರ್ಣ ಕ್ರಿಯಾಪದದ ಮುಂದೆ ಪೂರ್ಣವಿರಾಮ ಚಿಹ್ನೆಯನ್ನು ಬಳಸಲಾಗುತ್ತದೆ. ವಾಕ್ಯದ ಕೊನೆಗೆ ಇದು ಬಂದು ವಾಕ್ಯ ಪೂರ್ಣವಾದುದನ್ನು ಇದು ಸೂಚಿಸುತ್ತದೆ. ಸಂಕ್ಷೇಪಗಳನ್ನು ಬಳಸುವಾಗಲೂ ಕೆಲವೊಮ್ಮೆ ಪೂರ್ಣ ವಿರಾಮ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ :– ವಾಕ್ಯದ ಮುಕ್ತಾಯದಲ್ಲಿ ಪೂರ್ಣ ವಿರಾಮ ಚಿಹ್ನೆಯ ಬಳಕೆ**

1. ಮಕ್ಕಳು ಶಾಲೆಗೆ ಹೋದರು.

2. ಹಕ್ಕಿಗಳು ಆಗಸದಲ್ಲಿ ಹಾರಿದವು.

**ಪದಗಳನ್ನು ಸಂಕ್ಷೇಪಿಸುವಲ್ಲಿ ಪೂರ್ಣ ವಿರಾಮ ಚಿಹ್ನೆಯ ಬಳಕೆ:** 1. ಬಿ.ಎಂ.ಶ್ರೀ. 2. ಅ.ನ.ಕೃ.

## ಕನ್ನಡ ಕಲಿ



■ ಡಾ. ಶಿವಾನಂದ ಟವಳಿ
shivu.tavali@gmail.com

# ಲೇಖನ ಚಿಹ್ನೆಗಳು

ಅಲ್ಪವಿರಾಮ ಚಿಹ್ನೆ
ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ಕರ್ತೃಪದಗಳು, ಕರ್ಮಪದಗಳು, ಸರ್ವನಾಮಗಳು, ವಿಶೇಷಣಗಳು, ಕೃದಂತಗಳು ಹಾಗೂ ತದ್ಧಿತಾಂತಗಳು ಬಂದಲ್ಲಿ ಅಲ್ಪವಿರಾಮ ಚಿಹ್ನೆಯು ಬಳಕೆಯಾಗುತ್ತದೆ.

**ಉದಾ: ಒಂದಕ್ಕಿಂತ ಹೆಚ್ಚು ಕರ್ತೃಪದಗಳ ಮುಂದೆ ಅಲ್ಪವಿರಾಮದ ಬಳಕೆ**

1. ಧರ್ಮರಾಜ, ಭೀಮ, ಅರ್ಜುನ, ನಕುಲ ಮತ್ತು ಸಹದೇವ ಸೇರಿ ಕುರುಕ್ಷೇತ್ರ ಯುದ್ಧವನ್ನು ಮಾಡಿದರು.
2. ಆ ಜಾತ್ರೆಯಲ್ಲಿ ಪುರುಷರು, ಸ್ತ್ರೀಯರು, ವೃದ್ಧರು ಮಕ್ಕಳು, ತರುಣರು ಹೀಗೆ ಎಲ್ಲರೂ ಭಾಗವಹಿಸಿದ್ದರು.

**ಸಂಬೋಧನಾರ್ಥಕ ಶಬ್ದದ ಮುಂದೆ ಅಲ್ಪವಿರಾಮದ ಬಳಕೆ**

1. ರಾಮನೇ, ಬಿಲ್ಲನ್ನು ಮುರಿದವನು.
2. ಮಕ್ಕಳೇ, ಬೇಗಬೇಗ ಬರೆದುಕೊಳ್ಳಿ.

**5. ಉದ್ಧರಣ ಚಿಹ್ನೆಗಳು**

ಒಬ್ಬರು ನುಡಿದ ಮಾತನ್ನುಇನ್ನೊಬ್ಬರು ಹೇಳುವಾಗ ಮಾತಿನ ಆರಂಭ ಕೊನೆಯಲ್ಲಿ ಜೋಡು ಅವತರಣಿಕೆ ಚಿಹ್ನೆಯನ್ನು (" ") ಬಳಸುತ್ತಾರೆ ವಿಶೇಷಾರ್ಥ, ವಿಶೇಷ ಪದವನ್ನು ಹೇಳುವಲ್ಲಿ Man ಅವತರಣಿಕೆ ಚಿಹ್ನೆ (' ') ಬಳಸುತ್ತಾರೆ.

**ಉದಾ: ವಾಕ್ಯದಲ್ಲಿಯ ವಿಶೇಷ ಪದವನ್ನು ಎತ್ತಿತೋರಿಸಲು Man ಉದ್ಧರಣ ಚಿಹ್ನೆಯ ಬಳಕೆ**

1. ರನ್ನನು 'ಸಾಹಸಭೀಮ ವಿಜಯ' ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ.
2. ಸರ್ವಜ್ಞನನ್ನು 'ತ್ರಿಪದಿ ಬ್ರಹ್ಮ' ಎಂದು ಕರೆಯುತ್ತಾರೆ.

**ಒಬ್ಬರು ಹೇಳಿದ ವಾಕ್ಯವನ್ನು ಉದ್ಧರಿಸಿ ಹೇಳುವಾಗ ಇಡೀ ವಾಕ್ಯಕ್ಕೆ ಜೋಡಿ ಉದ್ಧರಣ ಚಿಹ್ನೆಯ ಬಳಕೆ**

1. ಗೌತಮ ಬುದ್ಧರು 'ಆಸೆಯೇ ದುಃಖಕ್ಕೆ ಮೂಲ ಕಾರಣ' ಎಂದು ಹೇಳಿದ್ದಾರೆ.
2. ಜಗಜ್ಯೋತಿ ಬಸವಣ್ಣನವರು 'ಕಾಯಕವೇ ಕೈಲಾಸ' ಎಂದು ಹೇಳಿದ್ದಾರೆ.

## ಕನ್ನಡ ಕಲಿ

■ ಡಾ. ಶಿವಾನಂದ ಟವಳಿ
shivu.tavali@gmail.com



# ಲೇಖನ ಚಿಹ್ನೆಗಳು

### ಭಾವಸೂಚಕ ಚಿಹ್ನೆ

ಆಶ್ಚರ್ಯ, ಹರ್ಷ, ಸಂತೋಷ, ವಿಷಾದ, ದುಃಖ, ಕೋಪ ಮುಂತಾದ ಭಾವನೆಗಳನ್ನು ಸೂಚಿಸುವ ಶಬ್ದಗಳ ಮುಂದೆ ಭಾವ ಸೂಚಕ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ: 1. ಆಹಾ ! ಬೆಳದಿಂಗಳು ಎಷ್ಟು ಸೊಗಸಾಗಿದೆ.
2. ಅಯ್ಯೋ ಪಾಪ ! ಹೀಗಾಗಬಾರದಿತ್ತು.

### 7. ವಿವರಣ ಚಿಹ್ನೆಗಳು

ಯಾವುದಾದರೊಂದು ಪದದ, ಮಾತು, ವಾಕ್ಯದಲ್ಲಿ ಒಂದು ವಿಷಯದ ವಿವರಣೆ ಈ ಮುಂದಿನಂತಿದೆ ಎಂಬುದನ್ನು ತಿಳಿಸಲು ಈ ಚಿಹ್ನೆಯನ್ನು ಬಳಸುತ್ತಾರೆ.

ಉದಾ: 1. ವ್ಯಾಕರಣ:– ಭಾಷೆಯನ್ನು ತಿಳಿಯುವ ಸಾಧನ.
2. ಕನ್ನಡದ ಕವಿಚಕ್ರವರ್ತಿಗಳು: ಪೊನ್ನ, ರನ್ನ, ಜನ್ನ

ಪದಗಳು ಪರಸ್ಪರ ಒಂದಕ್ಕೊಂದು ಅರ್ಥ ಸಂಬಂಧವನ್ನು ಹೊಂದಿದ್ದರೆ ಅವುಗಳ ಮಧ್ಯೆ ಬಳಕೆ

1. ಜನನ–ಮರಣ
2. ಸರಸ–ವಿರಸ

### 8. ಆವರಣ ಚಿಹ್ನೆಗಳು

ಒಂದು ಶಬ್ದವನ್ನಾಗಲಿ ಅಥವಾ ಒಂದು ವಾಕ್ಯವನ್ನಾಗಲಿ ಹೇಳಿ ಅದಕ್ಕೆ ಸಮನಾರ್ಥ ಕೊಡುವ ಶಬ್ದ ಅಥವಾ ವಾಕ್ಯವನ್ನು ಹೇಳುವಾಗ ಈ ಚಿಹ್ನೆ ಬಳಕೆಯಾಗುತ್ತದೆ. ಸಾಮಾನ್ಯವಾಗಿ ಚಂದ್ರಾವರಣವನ್ನು ಕನ್ನಡದಲ್ಲಿ ಹೆಚ್ಚು ಬಳಸಲಾಗುತ್ತದೆ. ಇದರಲ್ಲಿ ಚೌಕಾವರಣ ([]) ಹಾಗೂ ಪುಷ್ಪಾವರಣ ({})ಗಳು ಕಂಡುಬರುತ್ತವೆ.

ಉದಾ: 1. ವಾತಾವರಣದಲ್ಲಿ ಸಾರಜನಕ (ನೈಟ್ರೋಜನ್) ಅನಿಲ ಹೇರಳವಾಗಿದೆ.
2. ಪಂಪನು 'ವಿಕ್ರಮಾರ್ಜುನ ವಿಜಯ' (ಪಂಪ ಭಾರತ) ಎಂಬ ಕೃತಿಯನ್ನು ರಚಿಸಿದ್ದಾನೆ.

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅವ್ಯಯಗಳು

### 5) ಕೃದಂತ ಅವ್ಯಯಗಳು

ಧಾತುವಿನಿಂದ ಹುಟ್ಟಿ ಅವ್ಯಯದ ಲಕ್ಷಣಗಳನ್ನು ಹೊಂದಿರುವ ಪದಗಳಿಗೆ 'ಕೃದಂತಾವ್ಯಯಗಳು' ಎಂದು ಹೆಸರು. ಕರ್ತೃ ಪ್ರತ್ಯಯ ಧಾತುಗಳಿಗೆ ಕ್ರಿಯಾವಿಭಕ್ತಿ ಪ್ರತ್ಯಯ/ ಆಖ್ಯಾತ ಪ್ರತ್ಯಯ ಸೇರಿದರೆ ಕ್ರಿಯಾಪದಗಳಾಗುತ್ತವೆ. ಅದರಂತೆ ಧಾತುಗಳಿಗೆ ಕರ್ತೃ ಪ್ರತ್ಯಯಗಳು ಸೇರಿದರೆ ಕೃದಂತ ಪದಗಳಾಗುತ್ತವೆ.

**ಉದಾ:** ನಗುತ್ತ, ಬರೆದು, ನಗದೆ, ಬಿದ್ದ, ಬಂದು,
ನೋಡಲು ಹಾಡುತ್ತ, ಕೊಟ್ಟು, ಬೆಂದು,
ಬರಲು, ಕೇಳಿದರೆ, ಬರುವರೆ, ಮಾಡಿ ಇತ್ಯಾದಿ

### 6) ತದ್ಧಿತಾಂತ ಅವ್ಯಯಗಳು

ನಾಮವಿಭಕ್ತಿ ಪ್ರತ್ಯಯಗಳು ಹಾಗೂ ತದ್ಧಿತ ಪ್ರತ್ಯಯಗಳು ಸೇರಿ ನಾಮಪದಗಳಾಗುವವು. ಷಷ್ಠ್ಯಂತ ನಾಮಪದಗಳ ಮುಂದೆ ಅಂತೆ, ವೋಲ್, ತನಕ, ವರೆಗೆ, ಓಸ್ಕರ, ಮಟ್ಟಿಗೆ ಮುಂತಾದ ತದ್ಧಿತ ಪ್ರತ್ಯಯ ಸೇರಿದಾಗ ಉಂಟಾಗುವ ಪದಗಳನ್ನು 'ತದ್ಧಿತಾಂತ ಅವ್ಯಯ' ಎಂದು ಕರೆಯುವರು.

**ಉದಾ:** ಅವನಂತೆ, ರಾಮನವೊಲ್, ಮನೆತನಕ, ಸಂಜೆವರೆಗೆ,
ಅವಳಿಗೋಸ್ಕರ, ತಕ್ಕಮಟ್ಟಿಗೆ, ಹಕ್ಕಿಯ ಹಾಗೆ,
ಉಪ್ಪಿಗಿಂತ,
ದೇವರಿಗಾಗಿ, ಮಾತಿನ ಸಲುವಾಗಿ, ಅಣ್ಣನಿಗೋಸುಗ
ಇತ್ಯಾದಿ

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅವ್ಯಯಗಳು

## ಬಹು ಆಯ್ಕೆಯ ಪ್ರಶ್ನೋತ್ತರಗಳು

**1) 'ಅಯ್ಯೋ!' ಎಂಬುದು**
ಅ. ಸಾಮಾನ್ಯಾವ್ಯಯ ಬ. ಭಾವಸೂಚಕಾವ್ಯಯ
ಕ. ಕ್ರಿಯಾರ್ಥಕಾವ್ಯಯ ಡ. ಸಂಬಂಧಸೂಚಕಾವ್ಯಯ [ಬ]

**2) ಜುಳುಜುಳು, ಪಟಪಟ, ದಡದಡ – ಎಂಬವು**
ಅ. ಕ್ರಿಯಾರ್ಥಕಾವ್ಯಯಗಳು
ಬ. ಅನುಕರಣಾವ್ಯಯಗಳು
ಕ. ಅವಧಾರಣಾರ್ಥಕಾವ್ಯಯಗಳು
ಡ. ಕೃದಂತಾವ್ಯಯಗಳು [ಬ]

**3) ಅಂತೆ, ಹಾಗೆ, ವೋಲ್ – ಎಂಬವು**
ಅ. ಕೃತ್ ಪ್ರತ್ಯಯಗಳು ಬ. ತತ್ ಪ್ರತ್ಯಯಗಳು
ಕ. ವಿಭಕ್ತಿ ಪ್ರತ್ಯಯಗಳು ಡ. ವಚನ ಪ್ರತ್ಯಯಗಳು [ಬ]

**4) ಪ್ರಶ್ನಾರ್ಥಕಾವ್ಯಯಕ್ಕೆ ಒಂದು ನಿದರ್ಶನ**
ಅ. ಚೆನ್ನಾಗಿ ಬ. ಬಂದನೇ?
ಕ. ಅಯ್ಯೋ ಡ. ಹಾಗಾದರೆ [ಬ]

**5) 'ದಬದಬ' ಎಂಬುದು**
ಅ. ಕದಂತಾವ್ಯಯ ಬ. ಕ್ರಿಯಾರ್ಥಕಾವ್ಯಯ
ಕ. ಅವಧಾರಣಾರ್ಥಕಾವ್ಯಯ ಡ. ಅನುಕರಣಾವ್ಯಯ [ಡ]

**6) ಹಾಗೂ, ಮತ್ತು, ಅಥವಾ – ಎಂಬವು**
ಅ. ಕ್ರಿಯಾರ್ಥಕಾವ್ಯಯ ಬ. ಸಂಬಂಧಕಾವ್ಯಯ
ಕ. ಪ್ರಶ್ನಾರ್ಥಕಾವ್ಯಯ ಡ. ಸಂಬೋಧಕಾವ್ಯಯ [ಬ]

# ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

## ಅವ್ಯಯಗಳು

### 3) ಅನುಕರಣಾವ್ಯಯಗಳು

ಯಾವುದೇ ಅರ್ಥವನ್ನು ತಿಳಿಸದೇ ನಡೆಯುತ್ತಿರುವ ಕ್ರಿಯೆ ಧ್ವನಿಯ ಅನುಕರಣ ಮಾಡುವ ಪದಗಳು. ನಮಗೆ ಕೇಳಿಸಿದಂತಹ, ಕಾಣಿಸಿದಂತಹ ಧ್ವನಿ ಮತ್ತು ವಸ್ತುಗಳನ್ನು ಕೇಳಿಸಿದಂತೆ, ಕಾಣಿಸಿದಂತೆ ಪುನಃ ಅನುಕರಣೆ ಮಾಡಿ ಹೇಳುವ ಪದಗಳನ್ನು ಅನುಕರಣಾವ್ಯಯ ಎಂದು ಕರೆಯುವರು.

ಉದಾ: **ಗುಳುಗುಳು, ದಬದಬ, ಜುಳುಜುಳು, ತರತರ, ಸುಯ್ಯನೆ, ಬರ್ರನೆ, ಚುರುಚುರು ಕಲಕಲ, ಢಣಢಣ, ಸುಯ್ಯನೆ, ಭರ್ರೆಂದು, ದಿಗ್ಗನೆ, ಕಿಲಕಲ, ಬುಸುಬುಸು, ಭಗಭಗನೆ, ಗುಡುಗುಡು, ಥರಥರ, ಸರಸರ, ಬಳಬಳ ಇತ್ಯಾದಿ.**

### 4) ಭಾವಸೂಚಕಾವ್ಯಯಗಳು

ಮನಸ್ಸಿನ ಭಾವನೆಗಳಾದ ಆಶ್ಚರ್ಯ, ದುಃಖ, ಹರ್ಷ, ಕೋಪ, ಪ್ರಶ್ನೆ, ಸಂಶಯ, ತಿರಸ್ಕಾರ, ಮೆಚ್ಚುಗೆ, ಆಕ್ಷೇಪ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಅರ್ಥವಿಲ್ಲದ ಪದಗಳನ್ನು 'ಭಾವಸೂಚಕಾವ್ಯಯ' ಎನ್ನುವರು. ಇವುಗಳಿಗೆ ವಿಪಾತಾವ್ಯಯ, ಭಾವಭೋಧಕಾವ್ಯಯ ಎಂಬ ಹೆಸರು ಕೂಡ ಇದೆ.

ಉದಾ: **ಛೀ, ಆಹಾ!, ಅರರೇ, ಅಯ್ಯೋ, ಅಬ್ಬಾ, ಓಹೋ, ಥೂ, ಅಹಹಾ, ಎಲಾ, ಅಕಟಕಟಾ, ಭಲೇ, ಓ, ಛೀ, ಹೋ, ಹೊಹೋ ಇತ್ಯಾದಿ.**

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅವ್ಯಯಗಳು

## 1) ಸಾಮಾನ್ಯ ಅವ್ಯಯಗಳು

ಕ್ರಿಯೆಯು ನಡೆದ ಕಾಲ, ಸ್ಥಾನ, ರೀತಿಗಳನ್ನು ತಿಳಿಸುವ ಅವ್ಯಯಗಳಿಗೆ 'ಸಾಮಾನ್ಯ ಅವ್ಯಯ' ಎನ್ನುವರು.

ಕ್ರಿಯೆಯ ವಿಶೇಷತೆಯನ್ನು ತಿಳಿಸುವುದರಿಂದ ಇವುಗಳನ್ನು 'ಕ್ರಿಯಾ ವಿಶೇಷಣಗಳು' ಎಂತಲೂ ಕರೆಯುವರು.

ಉದಾ: ಸ್ಥಾನ – ಮೇಲೆ, ಕೆಳಗೆ, ಅಲ್ಲಿ, ಇಲ್ಲಿ, ಎಲ್ಲಿ, ಅತ್ತ, ಇತ್ತ, ಎತ್ತ, ಸುತ್ತ

ಕಾಲ – ಬಳಿಕ, ಒಡನೆ, ತರುವಾಯ, ಅಂದು, ಬೇಗನೆ, ಇಂದು, ಕೂಡಲೇ, ಈಗ, ಆಗ, ನಿನ್ನೆ, ಎಂದು, ಬೇಗ

ರೀತಿ – ಇಂತು, ಎಂತು, ಹಾಗೆ, ಹೀಗೆ, ಚೆನ್ನಾಗಿ ಅಂತು, ಅಂತೆ, ಮೆಲ್ಲನೆ, ಸುಮ್ಮನೆ, ತಣ್ಣಗೆ, ತೆಳ್ಳಗೆ

## 2) ಸಂಬಂಧಸೂಚಕಾವ್ಯಯಗಳು

ಪದಗಳ ನಡುವಿನ ಸಂಬಂಧ ಕಲ್ಪಿಸುವುದರಿಂದ ಸಮುಚ್ಚಯ ಸೂಚಕಾವ್ಯಯ ಎಂತಲೂ ಕರೆಯುವರು. ಎರಡು ಹಾಗೂ ಹಲವು ಪದಗಳ ನಡುವೆ, ಎರಡು ಹಾಗೂ ಹಲವು ವಾಕ್ಯಗಳ ನಡುವೆ ಸಂಬಂಧವನ್ನು ತೋರಿಸುವ ಪದಗಳನ್ನು ಸಂಬಂಧಸೂಚಕಾವ್ಯಯ ಎನ್ನುವರು

ಉದಾ: ಮತ್ತು, ಅಥವಾ, ಆದ್ದರಿಂದ, ಹಾಗಾದರೆ, ಆದರೆ, ಆದುದರಿಂದ, ಊ, ಹಾಗೂ, ಇಲ್ಲವೇ, ಅಲ್ಲದೇ, ಹೊರತು, ಆಗ, ಇನ್ನೂ ಇತ್ಯಾದಿ.

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅವ್ಯಯಗಳು

ಲಿಂಗ, ವಚನ ಹಾಗೂ ವಿಭಕ್ತಿಗಳಲ್ಲಿ ರೂಪಭೇದವನ್ನು ಹೊಂದದೇ ಒಂದೇ ರೀತಿಯಲ್ಲಿರುವ ಪದಗಳಿಗೆ 'ಅವ್ಯಯಗಳು' ಎಂದು ಹೆಸರು. ಈ ಅವ್ಯಯಗಳಿಗೆ ಲಿಂಗ, ವಚನ ಹಾಗೂ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಲು ಬರುವುದಿಲ್ಲ. ಒಂದು ವೇಳೆ ಪ್ರತ್ಯಯಗಳನ್ನು ಹಚ್ಚಿದರೂ ಯಾವುದೇ ಬದಲಾವಣೆ ಕಂಡುಬರುವುದಿಲ್ಲ.

**ಉದಾ:** ಆದರೆ, ಛೀ, ಹೋ, ಗೋಸ್ಕರ, ಕಿಲಕಲ, ಮತ್ತು, ಆದ್ದರಿಂದ, ಓ, ಉಂಟು, ಪಿಸುಪಿಸು, ಅಲ್ಲಿವರೆಗೆ, ತನಕ, ಬುಸುಬುಸು, ಹಾಗೂ, ಆಹಾ!, ಮೆಲ್ಲನೆ, ಸುಮ್ಮನೆ ಇತ್ಯಾದಿ

## ಅವ್ಯಯಗಳ ವಿಧಗಳು

ಅವ್ಯಯಗಳು ಯಾವುದೇ ರೀತಿಯ ರೂಪಭೇದ, ಬದಲಾವಣೆ ಹೊಂದದೇ ವಾಕ್ಯದಲ್ಲಿ ಬಳಸಲ್ಪಡುವ ಪದಗಳಾಗಿವೆ. ಈ ಅವ್ಯಯಗಳು ಲಿಂಗ, ವಚನ, ವಿಭಕ್ತಿ ಪ್ರತ್ಯಯಗಳನ್ನು ಹೊಂದಿರುವುದಿಲ್ಲ. ಅವ್ಯಯ ಪದಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

1) ಸಾಮಾನ್ಯ ಅವ್ಯಯಗಳು
2) ಸಂಬಂಧಸೂಚಕಾವ್ಯಯಗಳು
3) ಅನುಕರಣಾವ್ಯಯಗಳು
4) ಭಾವಸೂಚಕಾವ್ಯಯಗಳು
5) ಕೃದಂತ ಅವ್ಯಯಗಳು
6) ತದ್ಧಿತಾಂತ ಅವ್ಯಯಗಳು
7) ಕ್ರಿಯಾರ್ಥಕ ಅವ್ಯಯಗಳು
8) ಸಂಬೋಧಕಾವ್ಯಯಗಳು
9) ಪ್ರಶ್ನಾರ್ಥಕಾವ್ಯಯಗಳು
10) ಅವಧರಣಾರ್ಥಕಾವ್ಯಯಗಳು

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಕ್ರಿಯಾಪದಗಳು

ವಾಕ್ಯದಲ್ಲಿ ಕರ್ತೃವಿನ ಕ್ರಿಯೆಯ ಸಂಪೂರ್ಣ ಅರ್ಥವನ್ನು ಹೇಳುವ ಪದಗಳೇ ಕ್ರಿಯಾಪದಗಳು. ಇವು ಕ್ರಿಯೆಯ ಅರ್ಥವನ್ನು ಹೇಳಿ ಮಾತನ್ನು ಮುಗಿಸುವ ಪದಗಳಾಗಿರುತ್ತವೆ. ಧಾತುಗಳು ನಂತರ ಕಾಲಸೂಚಕ ಪ್ರತ್ಯಯಗಳು ಹಾಗೂ ಆಖ್ಯಾತ ಪ್ರತ್ಯಯಗಳು ಸೇರಿ ಉಂಟಾಗುವ ಪದಗಳು ಕ್ರಿಯಾಪದಗಳೆನಿಸುತ್ತವೆ.

ಉದಾ:– 1. ನಿರಂಜನನು ಪತ್ರವನ್ನು ಬರೆಯುತ್ತಿದ್ದಾನೆ.
2. ಸಾಗರಿಕಾಳು ಬೆಂಗಳೂರಿನಿಂದ ಬಂದಳು.
3. ಗಿಳಿಯು ಹಣ್ಣನ್ನು ತಿನ್ನುತ್ತಿದೆ.
4. ಅವರು ಪಾಠವನ್ನು ಕೇಳುತ್ತಿದ್ದಾರೆ.

ಈ ಮೇಲಿನ ವಾಕ್ಯಗಳಲ್ಲಿ ಬರೆಯುತ್ತಿದ್ದಾನೆ, ಬಂದಳು, ಹೋದನು, ಕೇಳುತ್ತಿದ್ದಾರೆ – ಇವೆಲ್ಲವೂ ಕ್ರಿಯೆಯ ಸಂಪೂರ್ಣ ಅರ್ಥವನ್ನು ಕೊಡುವುದರಿಂದ ಕ್ರಿಯಾಪದಗಳೆನಿಸುತ್ತವೆ.

## ಕ್ರಿಯಾಪದದ ಘಟಕಗಳು

ಕ್ರಿಯಾಪದವು ಒಟ್ಟು ಮೂರು ಘಟಕಗಳಿಂದ ರೂಪುಗೊಂಡಿರುತ್ತದೆ. ಆ ಮೂರು ಘಟಕಗಳೆಂದರೆ

1. ಧಾತುಗಳು
2. ಕಾಲಸೂಚಕ ಪ್ರತ್ಯಯಗಳು
3. ಆಖ್ಯಾತ ಪ್ರತ್ಯಯಗಳು

ಉದಾ:–

**ಧಾತು + ಕಾಲಸೂಚಕ + ಆಖ್ಯಾತ = ಕ್ರಿಯಾಪದ**

| | | | | | | |
|---|---|---|---|---|---|---|
| ನೋಡು | + | ಉತ್ತ | + | ಆನೆ | = | ನೋಡುತ್ತಾನೆ |
| ಬೇಡು | + | ದ | + | ಅನು | = | ಬೇಡಿದನು |
| ಓಡು | + | ವ | + | ಅದು | = | ಓಡುವದು |
| ಬರೆ | + | ಉತ್ತ | + | ಆಳೆ | = | ಬರೆಯುತ್ತಾಳೆ |
| ಸೇರು | + | ದ | + | ಅರು | = | ಸೇರಿದರು |

# ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



## ಕ್ರಿಯಾಪದಗಳು

### ii. ಸಾಧಿತ ಧಾತುಗಳು

ಸಹಜ ಧಾತುಗಳಿಗೆ ಇಲ್ಲವೆ ಕೆಲವು ನಾಮ ಪ್ರಕೃತಿಗಳಿಗೆ, ಅನುಕರಣವಾಚಿ ಶಬ್ದಗಳಿಗೆ 'ಇಸು' ಎಂಬ ಪ್ರತ್ಯಯ ಸೇರಿದಾಗ 'ಸಾಧಿತ ಧಾತುಗಳು' ಆಗುತ್ತವೆ. 'ಇಸು' ಪ್ರತ್ಯಯ ಅಂತ್ಯದಲ್ಲಿ ಸೇರುವುದರಿಂದ ಸಾಧಿತ ಧಾತುಗಳಿಗೆ 'ಪ್ರತ್ಯಯಾಂತ ಧಾತುಗಳು' ಎಂತಲೂ ಕರೆಯುವರು. 'ಇಸು' ಎಂಬ ಪ್ರತ್ಯಯ ಸೇರಿದಾಗ ಸಾಧಿತ ಧಾತುಗಳು ಹೇಗೆ ಆಗುತ್ತವೆ ? ಎಂಬುದನ್ನು ತಿಳಿಯಲು ಈ ಕೆಳಗೆ ಗಮನಿಸಿ

ಉದಾ :–

| ಸಹಜ ಧಾತು | + ಇಸು | = | ಸಾಧಿತ ಧಾತು |
|---|---|---|---|
| ಕೇಳು | + ಇಸು | = | ಕೇಳಿಸು |
| ಮಲಗು | + ಇಸು | = | ಮಲಗಿಸು |
| ಓಡು | + ಇಸು | = | ಓಡಿಸು |
| ಸೇರು | + ಇಸು | = | ಸೇರಿಸು |
| ಕಾಡು | + ಇಸು | = | ಕಾಡಿಸು |

| ನಾಮ ಪ್ರಕೃತಿ | + ಇಸು | = | ಸಾಧಿತ ಧಾತು |
|---|---|---|---|
| ಕನ್ನಡ | + ಇಸು | = | ಕನ್ನಡಿಸು |
| ನೆನಪು | + ಇಸು | = | ನೆನಪಿಸು |
| ಭಾವ | + ಇಸು | = | ಭಾವಿಸು |
| ಸಿಂಗರ | + ಇಸು | = | ಸಿಂಗರಿಸು |
| ದುಃಖ | + ಇಸು | = | ದುಃಖಿಸು |

| ಅನುಕರಣಾವ್ಯಯ | + ಇಸು | = | ಸಾಧಿತಧಾತು |
|---|---|---|---|
| ಕರಕರ | + ಇಸು | = | ಕರಕರಿಸು |
| ಝುಗಝುಗ | + ಇಸು | = | ಝುಗಝುಗಿಸು |
| ಹಳಹಳ | + ಇಸು | = | ಹಳಹಳಿಸು |
| ಗಹಗಹ | + ಇಸು | = | ಗಹಗಹಿಸು |
| ಗುಡುಗುಡು | + ಇಸು | = | ಗುಡುಗುಡಿಸು |

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಕ್ರಿಯಾಪದಗಳು

## ಕ್ರಿಯಾಪದದ ಪ್ರಕಾರಗಳು

**1. ಕಾಲರೂಪದ ಕ್ರಿಯಾಪದಗಳು**

ಅ. ಭೂತ ಕಾಲದ ಕ್ರಿಯಾಪದಗಳು
ಬ. ವರ್ತಮಾನ ಕಾಲದ ಕ್ರಿಯಾಪದಗಳು
ಕ. ಭವಿಷ್ಯತ್ಕಾಲದ ಕ್ರಿಯಾಪದಗಳು

**2. ಅರ್ಥರೂಪದ ಕ್ರಿಯಾಪದಗಳು**

ಅ. ವಿಧ್ಯರ್ಥಕ ರೂಪದ ಕ್ರಿಯಾಪದಗಳು
ಬ. ನಿಷೇಧಾರ್ಥಕ ರೂಪದ ಕ್ರಿಯಾಪದಗಳು
ಕ. ಸಂಭಾವನಾರ್ಥಕ ರೂಪದ ಕ್ರಿಯಾಪದಗಳು

**1. ಕಾಲರೂಪದ ಕ್ರಿಯಾಪದಗಳು–ಕಾಲ ಪ್ರಧಾನವಾಗಿ** ಬಳಸಲ್ಪಡುವ ಕ್ರಿಯಾಪದಗಳು. ಇವುಗಳಲ್ಲಿ ನಡೆದುಹೋದ, ಕ್ರಿಯೆಯು ಸದ್ಯ ನಡೆಯುತ್ತಿರುವ ಹಾಗೂ ಮುಂದೆ ನಡೆಯಬಹುದಾದ ಕಾಲವನ್ನು ಕಾಲರೂಪದ ಕ್ರಿಯಾಪದಗಳು ಪ್ರತಿನಿಧಿಸುತ್ತವೆ.

**ಅ. ಭೂತ ಕಾಲದ ಕ್ರಿಯಾಪದಗಳು – 'ದ'**

ಕ್ರಿಯೆಯು ನಡೆದುಹೋದ ಕಾಲವನ್ನು ಸೂಚಿಸುವುದೇ ಭೂತಕಾಲ. ಕ್ರಿಯೆಯು ಹಿಂದೆ ನಡೆದುಹೋದ ಕಾಲವನ್ನು ಭೂತಕಾಲವು ಪ್ರತಿನಿಧಿಸುತ್ತದೆ. ಇದರ ಕಾಲಸೂಚಕ ಪ್ರತ್ಯಯ 'ದ' ಆಗಿದೆ.

ಉದಾ:–

| ಧಾತು + ಕಾ.ಸೂ.ಪ್ರ | + ಆ.ಪ್ರ = ಕ್ರಿಯಾಪದ |
|---|---|
| ಓದು + ದ | + ಅನು = ಓದಿದನು |
| ಓದು + ದ | + ಅಳು = ಓದಿದಳು |
| ಓದು + ದ | + ಅರು = ಓದಿದರು |
| ಓದು + ದ | + ಇತು = ಓದಿತು |
| ಓದು + ದ | + ಅವು = ಓದಿದವು |

▪

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಕ್ರಿಯಾಪದಗಳು

## ಬ. ವರ್ತಮಾನ ಕಾಲದ ಕ್ರಿಯಾಪದಗಳು - 'ಉತ್ತ'

ಕ್ರಿಯೆಯು ಸದ್ಯ ನಡೆಯುತ್ತಿರುವ ಕಾಲವನ್ನು ಸೂಚಿಸುವುದೇ ವರ್ತಮಾನಕಾಲ. ಸದ್ಯ ಕ್ರಿಯೆ ನಡೆಯುತ್ತಿರುವ ಕಾಲವನ್ನು ಇದು ಹೇಳುತ್ತದೆ. ಇದರ ಕಾಲ ಸೂಚಕ ಪ್ರತ್ಯಯ 'ಉತ್ತ' ಆಗಿದೆ.

ಉದಾ :-

ಧಾತು + ಕಾ.ಸೂ.ಪ್ರ + ಆ.ಪ್ರ = ಕ್ರಿಯಾಪದ
ನಡೆ + ಉತ್ತ + ಆನೆ = ನಡೆಯುತ್ತಾನೆ
ನಡೆ + ಉತ್ತ + ಆಳೆ = ನಡೆಯುತ್ತಾಳೆ
ನಡೆ + ಉತ್ತ + ಆರೆ = ನಡೆಯುತ್ತಾರೆ
ನಡೆ + ಉತ್ತ + ಅದೆ = ನಡೆಯುತ್ತದೆ
ನಡೆ + ಉತ್ತ + ಅವೆ = ನಡೆಯುತ್ತವೆ

## ಕ. ಭವಿಷ್ಯತ್ಕಾಲದ ಕ್ರಿಯಾಪದಗಳು -'ವ', 'ಉವ'

ಕ್ರಿಯೆಯು ಮುಂದೆ ನಡೆಯುವ ಕಾಲವನ್ನು ಸೂಚಿಸುವುದೇ ಭವಿಷ್ಯತ್‌ಕಾಲ. ಮುಂದೆ ನಡೆಯಬಹುದಾದ ಅಥವಾ ನಡೆಯುವ ಕಾಲವನ್ನು ಭವಿಷ್ಯತ್ ಕಾಲವು ಹೇಳುತ್ತದೆ. ಇದರ ಕಾಲ ಸೂಚಕ ಪ್ರತ್ಯಯ 'ವ', 'ಉವ' ಆಗಿದೆ.

ಉದಾ :-

ಧಾತು + ಕಾ.ಸೂ.ಪ್ರ + ಆ.ಪ್ರ = ಕ್ರಿಯಾಪದ
ಬರೆ + ವ + ಅನು = ಬರೆವನು
ಬರೆ + ವ + ಅಳು = ಬರೆವಳು
ಬರೆ + ಉವ + ಅರು = ಬರೆಯುವರು
ಬರೆ + ಉವ + ತ್ತದೆ = ಬರೆಯುತ್ತದೆ
ಬರೆ + ಉವ + ತ್ತವೆ = ಬರೆಯುತ್ತವೆ ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಕರ್ತರಿ–ಕರ್ಮಣಿ ಪ್ರಯೋಗ

ವಾಕ್ಯದಲ್ಲಿರುವ ಪದಗಳಲ್ಲಿ ಯಾವುದು ಪ್ರಧಾನವಾಗಿ ಬಳಕೆಯಾಗಿದೆ? ಎಂಬುದನ್ನು ಗುರುತಿಸಿ ಭಾಷೆಯಲ್ಲಿ ಎರಡು ಮಾದರಿಯ ಪ್ರಯೋಗಗಳನ್ನು ಕಾಣಬಹುದು. ಅವು

1) ಕರ್ತರಿ ಪ್ರಯೋಗ
2) ಕರ್ಮಣಿ ಪ್ರಯೋಗ

## ಕರ್ತರಿ ಪ್ರಯೋಗ

ಕರ್ತೃಪದ ಅರ್ಥವು ಪ್ರಧಾನವಾಗಿರುವ ವಾಕ್ಯವನ್ನು ಕರ್ತರಿ ಪ್ರಯೋಗದ ವಾಕ್ಯ ಎಂದು ಕರೆಯುವರು. ಕರ್ತರಿ ಪ್ರಯೋಗದ ಕರ್ತೃಪದವು ಪ್ರಥಮಾ ವಿಭಕ್ತಿ ಪ್ರತ್ಯಯವನ್ನು ಹೊಂದಿರುತ್ತದೆ. ಕ್ರಿಯಾಪದವು ಕರ್ತೃಪದದ ಪುರುಷ, ಲಿಂಗ, ವಚನಗಳನ್ನು ಅನುಸರಿಸುತ್ತದೆ.

ಉದಾ:

- ರೈತರು ಹೊಲವನ್ನು ಉಳುತ್ತಾರೆ.
- ಮಕ್ಕಳು ತಿಂಡಿಯನ್ನು ತಿಂದರು.
- ಭೀಮನು ಬಕಾಸುರನನ್ನು ಕೊಂದನು.
- ಬಭ್ರುವಾಹನನು ಕುದುರೆಯನ್ನು ಕಟ್ಟಿದನು.

ಈ ವಾಕ್ಯದಲ್ಲಿ ಮಕ್ಕಳು ಎಂಬುದು ಕರ್ತೃಪದ ಅದು ಪುಂಸ್ತ್ರೀಲಿಂಗ, ಪ್ರಥಮಾ, ಬಹುವಚನವಾಗಿರುತ್ತದೆ. ಆದ್ದರಿಂದ ತಿಂದರು ಎಂಬ ಕ್ರಿಯಾಪದವು ಅದೇ ಲಿಂಗ ವಚನವನ್ನು ಅನುಸರಿಸುತ್ತದೆ.

ಕರ್ತರಿ ಪ್ರಯೋಗದಲ್ಲಿ ಮತ್ತೆರೆಡು ರೀತಿಯ ಪ್ರಯೋಗಗಳನ್ನು ಕಾಣಬಹುದು ಅವು ಈ ಎರಡು ಪ್ರಯೋಗದಲ್ಲಿ ಕರ್ತೃ ಪದವು ಪ್ರಥಮಾ ವಿಭಕ್ತಿ ಪ್ರತ್ಯಯ ಹೊಂದಿರುತ್ತದೆ. ಕೆಲವೊಮ್ಮೆ ಲೋಪವಾಗುವುದನ್ನು ಕಾಣಬಹುದು. ಅವು

1) ಸಕರ್ಮಕ ಪ್ರಯೋಗ
2) ಅಕರ್ಮಕ ಪ್ರಯೋಗ ▪

ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಕರ್ತರಿ–ಕರ್ಮಣಿ ಪ್ರಯೋಗ

**1) ಸಕರ್ಮಕ ಕರ್ತರಿ ಪ್ರಯೋಗ**

ಸಕರ್ಮಕ ಕ್ರಿಯಾಪದವುಳ್ಳ ಕರ್ತರಿ ಪ್ರಯೋಗವಾಗಿದ್ದು ಕರ್ತೃಪದದೊಂದಿಗೆ ಕರ್ಮಪದವು ಮುಖ್ಯವಾಗಿರುತ್ತದೆ. ಕರ್ತೃ ಪದವು ಪ್ರಥಮ ವಿಭಕ್ತಿ ಪ್ರತ್ಯಯ ಹೊಂದಿದ್ದು ಕರ್ಮಪದವು ದ್ವಿತಿಯಾ ವಿಭಕ್ತಿ ಪ್ರತ್ಯಯ ಹೊಂದಿದೆ. ಕ್ರಿಯಾಪದವು ಕರ್ತೃ ಪದದ ಲಿಂಗ, ವಚನಗಳನ್ನು ಹೊಂದಿರುತ್ತದೆ.

ಉದಾ: **ಪಂಪ ಕವಿಯು ಆದಿಪುರಾಣವನ್ನು ಬರೆದನು.**
**ರೈತನು ಹದವಾಗಿ ಹೊಲವನ್ನು ಊಳಿದನು.**

**2) ಅಕರ್ಮಕ ಕರ್ತರಿ ಪ್ರಯೋಗ**

ಅಕರ್ಮಕ ಕ್ರಿಯಾಪದವುಳ್ಳ ಕರ್ತರಿ ಪ್ರಯೋಗವಾಗಿದ್ದು ಕರ್ಮಪದವಿರದೇ ಕರ್ತೃಪದ ಮಾತ್ರ ಇರುತ್ತದೆ. ಕರ್ತೃ ಪದವು ಪ್ರಥಮಾ ವಿಭಕ್ತಿ ಪ್ರತ್ಯಯ ಹೊಂದಿದೆ. ಕ್ರಿಯಾಪದವು ಕರ್ತೃ ಪದದ ಲಿಂಗ, ವಚನಗಳನ್ನು ಹೊಂದಿರುತ್ತದೆ.

ಉದಾ: **ಮಕ್ಕಳು ಶಾಲೆ ಬಿಟ್ಟೊಡನೆ ಮನೆಗಳಿಗೆ ಹೋದರು.**
**ರಮೇಶನು ಬೆಂಗಳೂರಿಗೆ ತೆರಳಿದನು.**

## ಕರ್ಮಣಿ ಪ್ರಯೋಗ

ಕರ್ತೃಪದಕ್ಕೆ ಬದಲಾಗಿ ಕ್ರಿಯಾಪದವು ಕರ್ಮಪದದ ಲಿಂಗ, ವಚನಗಳನ್ನು ಅನುಸರಿಸಿದರೆ ಕರ್ಮಣಿ ಪ್ರಯೋಗ ಎಂದು ಕರೆಯುವರು. ಕರ್ಮಪದ ಅರ್ಥವು ಇಲ್ಲಿ ಪ್ರಧಾನವಾಗಿರುತ್ತದೆ. ಕರ್ತೃ ಪದವು ತೃತೀಯಾ ವಿಭಕ್ತಿ ಪ್ರತ್ಯಯವನ್ನು ಹೊಂದಿದ್ದು, ಕ್ರಿಯಾಪದದ ಧಾತುವಿಗೆ 'ಅಲ್ಪಡು' ಎಂಬ ಪ್ರತ್ಯಯ ಸೇರಿಸುತ್ತದೆ.

ಉದಾ: **ರೈತರಿಂದ ಹೊಲವು ಉಳಲ್ಪಡುತ್ತದೆ.**
**ತಿಂಡಿಯು ಮಕ್ಕಳಿಂದ ತಿನ್ನಲ್ಪಟ್ಟಿತು.**
**ಬಕಾಸುರನು ಭೀಮನಿಂದ ಕೊಲ್ಲಲ್ಪಟ್ಟನು.**
**ಕುದುರೆಯು ಬಬ್ರುವಾಹನನಿಂದ ಕಟ್ಟಲ್ಪಟ್ಟಿತು.** ▪

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಕರ್ತರಿ–ಕರ್ಮಣಿ ಪ್ರಯೋಗ

### ಕರ್ಮಣಿ ಪ್ರಯೋಗದಲ್ಲಾಗುವ ಬದಲಾವಣೆ

ಕರ್ತೃಪದ ದ್ವಿತೀಯಾ ವಿಭಕ್ತಿ ಪ್ರತ್ಯಯವನ್ನು, ಕರ್ಮಪದ ಪ್ರಥಮಾ ವಿಭಕ್ತಿ ಪ್ರತ್ಯಯವನ್ನು ಹೊಂದಿರುತ್ತದೆ. ಕ್ರಿಯಾಪದವು ಅಲ್ಪಡು ಎಂಬ ಪ್ರತ್ಯಯ ಹೊಂದಿ ಕರ್ಮಪದದ ಲಿಂಗ, ವಚನಗಳನ್ನು ಹೊಂದಿರುತ್ತದೆ.

### ಕರ್ತರಿ–ಕರ್ಮಣಿ ಪ್ರಯೋಗಗಳಿಗೆ ಉದಾಹರಣೆಗಳು

1. ಶಂಕರನು ಹಣ್ಣನ್ನು ತಿನ್ನುತ್ತಾನೆ. (ಕರ್ತರಿ ಪ್ರಯೋಗ)
   ಶಂಕರನಿಂದ ಹಣ್ಣು ತಿನ್ನಲ್ಪಟ್ಟಿತು. (ಕರ್ಮಣಿ ಪ್ರಯೋಗ)

2. ರೈತರು ಹೊಲವನ್ನು ಉಳುತ್ತಾರೆ. (ಕರ್ತರಿ ಪ್ರಯೋಗ)
   ರೈತರಿಂದ ಹೊಲವು ಉಳಲ್ಪಡುತ್ತದೆ. (ಕರ್ಮಣಿ ಪ್ರಯೋಗ)

3. ರಾಧೆ ಕೃಷ್ಣನನ್ನು ವರಿಸುತ್ತಾಳೆ. (ಕರ್ತರಿ ಪ್ರಯೋಗ)
   ರಾಧೆಯಿಂದ ಕೃಷ್ಣನು ವರಿಸಲ್ಪಡುತ್ತಾನೆ. (ಕರ್ಮಣಿ ಪ್ರಯೋಗ)

4. ಗುರುಗಳು ಪಾಠವನ್ನು ಹೇಳಿದರು. (ಕರ್ತರಿ ಪ್ರಯೋಗ)
   ಗುರುಗಳಿಂದ ಪಾಠವು ಹೇಳಲ್ಪಟ್ಟಿತು. (ಕರ್ಮಣಿ ಪ್ರಯೋಗ)

5. ರನ್ನನು ಗದಾಯುದ್ಧ ಕಾವ್ಯವನ್ನು ರಚಿಸಿದನು. (ಕರ್ತರಿ ಪ್ರಯೋಗ)
   ರನ್ನನಿಂದ ಗದಾಯುದ್ಧ ಕಾವ್ಯವು ರಚಿಸಲ್ಪಟ್ಟಿತು. (ಕರ್ಮಣಿ ಪ್ರಯೋಗ)

6. ಹುಲಿ ಜಿಂಕೆಯನ್ನು ಹಿಡಿಯುತ್ತದೆ. (ಕರ್ತರಿ ಪ್ರಯೋಗ
   ಹುಲಿಯಿಂದ ಜಿಂಕೆಯು ಹಿಡಿಯಲ್ಪಟ್ಟಿತು. (ಕರ್ಮಣಿ ಪ್ರಯೋಗ)

ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ದ್ವಿರುಕ್ತಿಗಳು

ದ್ವಿರುಕ್ತಿಗಳ ವಾಕ್ಯ ಪ್ರಯೋಗಕ್ಕೆ ಉದಾಹರಣೆಗಳು ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸಲು ಒಂದು ಪದವನ್ನು ನಡುವೆ ಅವಕಾಶ ಕೊಡದೆ ಎರಡೆರಡು ಬಾರಿ ಪ್ರಯೋಗ ಮಾಡಲಾಗುತ್ತದೆ. ಇಡೀ ವಾಕ್ಯದಲ್ಲಿ ಬಳಸಿದ ದ್ವಿರುಕ್ತಿಯೇ ಹೆಚ್ಚು ಗಮನ ಸೆಳೆಯುತ್ತದೆ.

ಉದಾ : ನಡೆನಡೆ ಆಟವನ್ನು ನೋಡೋಣ.

ಆಗಲಿಆಗಲಿ ನಿನಗೆ ಶುಭವಾಗಲಿ.

ಕನ್ನಡದ ಮೊಟ್ಟಮೊದಲ ಕವಿ ಪಂಪ.

ಅಯ್ಯೋ ದೇವರೇ ! ಓಡೀಓಡೀ ಸಾಕಾಯಿತು.

ಮನೆಯ ಕಾಗದಪತ್ರಗಳನ್ನು ಅಡವಿಡಬೇಕಾಯಿತು.

ಅವು ಬಹಳ ದೊಡ್ಡದೊಡ್ಡ ಮರಗಳಾಗಿದ್ದವು.

ಅವಳಿಗೆ ಹಾಡಿಹಾಡಿ ಬೇಜಾರಾಯಿತು.

ದೇಶದ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯಗಳು ಸಿಗಬೇಕು.

ಹೌದೌದು ಅವನೇ ಇವನು ಇವನೇ ಅವನು.

ಅವರು ಹೆಣ್ಣುಹೆಣ್ಣು ಎಂದು ಪರಿತಪಿಸಿದರು.

ರೈತರು ಮಳೆಮಳೆ ಎಂದು ಬಾಯಿಬಿಡುತ್ತಿದ್ದಾರೆ.

ಜೀವನದಲ್ಲಿ ಸಣ್ಣಸಣ್ಣ ಸಂಗತಿಗಳು ಕೆಲವೊಮ್ಮೆ ಖುಷಿಕೊಡುತ್ತವೆ. ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ದ್ವಿರುಕ್ತಿಗಳು

ಕೆಲವೊಮ್ಮೆ ದ್ವಿರುಕ್ತಿಯಲ್ಲಿನ ಎರಡು ಪದಗಳು ಕೂಡಿದಾಗ ಮೊದಲ ಪದ ರೂಪಾಂತರಗೊಳ್ಳುತ್ತವೆ. ಹೀಗೆ ರೂಪಾಂತರಗೊಂಡಾಗಲೂ ಅರ್ಥ ಕೆಡುವುದಿಲ್ಲ. ಇವು ಕೂಡ ದ್ವಿರುಕ್ತಿಗಳೆನಿಸುತ್ತವೆ.

ಉದಾ :

ಹೌದು + ಹೌದು = ಹೌದೌದು

ಅಯ್ಯೊ + ಅಯ್ಯೊ = ಅಯ್ಯಯ್ಯೋ

ಉಂಡು + ಉಂಡು = ಉಂಡುಂಡು

ಕೊನೆಗೆ + ಕೊನೆಗೆ = ಕೊನೆಕೊನೆಗೆ

ಕಡೆ + ಕಡೆ = ಕಟ್ಟಕಡೆ

ಮೊದಲು + ಮೊದಲು = ಮೊತ್ತಮೊದಲು

ಕೆಳಗೆ + ಕೆಳಗೆ = ಕೆಳಕೆಳಗೆ

ಮೆಲ್ಲನೆ + ಮೆಲ್ಲನೆ = ಮೆಲ್ಲಮೆಲ್ಲನೆ

ನಡುವೆ + ನಡುವೆ = ನಡುನಡುವೆ

ಹೊಸದು + ಹೊಸದು = ಹೊಚ್ಚಹೊಸದು

ತುದಿ + ತುದಿ = ತುತ್ತತುದಿ

ಒಂದು + ಒಂದು = ಒಂದೊಂದು

ಭಾಷೆಯಲ್ಲಿ ಸಹಜ–ಸ್ವಾಭಾವಿಕ ಪದಗಳೊಂದಿಗೆ ವಿಶಿಷ್ಟ ಅರ್ಥಬರುವಂತೆ ಕೆಲವು ಪದಗಳನ್ನು ಜೋಡಿಸಿ ಬಳಸುವುದುಂಟು. ಅಂತಹ ಪದಗಳ ಜೋಡಣೆಯಲ್ಲಿ ದ್ವಿರುಕ್ತಿ, ಜೋಡುನುಡಿ, ನುಡಿಗಟ್ಟು ಅಥವಾ ಪಡೆನುಡಿ ಎಂಬುದಾಗಿ ಹಲವು ವಿಧಗಳಿವೆ. ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ದ್ವಿರುಕ್ತಿಗಳು

ದ್ವಿ ಎಂದರೆ 'ಎರಡು', 'ಉಕ್ತಿ' ಎಂದರೆ 'ಹೇಳು' ಎಂದರ್ಥ. 'ದ್ವಿರುಕ್ತಿ' ಎಂದರೆ 'ಎರಡು ಬಾರಿ ಹೇಳುವುದು' ಎಂದರ್ಥ. ಒಂದೇ ಪದ ಅಥವಾ ಮಾತು ಇಲ್ಲವೇ ಬರೆವಣಿಗೆಯಲ್ಲಿ ಎರಡು ಸಾರಿ ಬಳಕೆಯಾದರೆ ಅದನ್ನು 'ದ್ವಿರುಕ್ತಿ' ಎನ್ನುತ್ತಾರೆ.

ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದೇ ಅರ್ಥದ ಪದವನ್ನೋ, ಒಂದು ವಾಕ್ಯವನ್ನೋ, ಎರಡೆರಡು ಬಾರಿ ಪ್ರಯೋಗ ಮಾಡುವುದೇ ದ್ವಿರುಕ್ತಿ. ಸಾಮಾನ್ಯವಾಗಿ ಉತ್ಸಾಹ, ಅವಸರ, ದುಃಖ ಇತ್ಯಾದಿ ಸಂದರ್ಭಗಳಲ್ಲಿ ಭಾವನೆಗಳ ತೀವ್ರತೆಯನ್ನು ವ್ಯಕ್ತಪಡಿಸುವಾಗ ದ್ವಿರುಕ್ತಿಗಳು ಬಳಕೆಯಾಗುತ್ತವೆ.

ಉದಾ :

| | | |
|---|---|---|
| ಹೌದುಹೌದು | ನಡೆನಡೆ | ಸರಿಸರಿ |
| ಬೇಡಬೇಡ | ಮೇಲೆಮೇಲೆ | |
| ಬನ್ನಿಬನ್ನಿ | ನಿಲ್ಲಿನಿಲ್ಲಿ | ಕೇಳಿಕೇಳಿ |
| ಹಿಡಿಹಿಡಿ | ತಡೆತಡೆ | ನೀಡಿನೀಡಿ |
| ಬರೆಬರೆ | ಆಗಲಿಆಗಲಿ | ಕಲಿಕಲಿ |
| ನುಡಿನುಡಿ | ಬರಲಿಬರಲಿ | ತಿನ್ನುತಿನ್ನು |
| ಮನೆಮನೆ | | ಪರಿಪರಿ |
| ನಿಲ್ಲುನಿಲ್ಲು | ಕೇರಿಕೇರಿ | ದೊಡ್ಡದೊಡ್ಡ |
| ಕಟ್ಟೆಕಟ್ಟೆ | ಓಡುಓಡು | ಜೊತೆಜೊತೆ |
| | ಇರಲಿಇರಲಿ | ಮತ್ತೆಮತ್ತೆ ▪ |

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಜೋಡಿ ನುಡಿಗಳು

### ಜೋಡಿನುಡಿಗಳ ಪ್ರಯೋಗಕ್ಕೆ ಉದಾಹರಣೆಗಳು

ಜೋಡಿನುಡಿಗಳಿಗೆ ಭಿನ್ನಾರ್ಥಕ ನುಡಿ, ಜೊತೆನುಡಿ, ಮೇಳುನುಡಿ ಹೀಗೆ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಕನ್ನಡದಲ್ಲಿ ಪ್ರಾದೇಶಿಕ ವೈವಿಧ್ಯತೆ ಇರುವುದರಿಂದ ಜೋಡಿನುಡಿಗಳನ್ನು ಕೆಲವರು ಮಾತಿಗೊಂದು ಗೀತು, ಪ್ರತಿಧ್ವನಿ ಪದ ಎಂತಲೂ ಗುರುತಿಸುತ್ತಾರೆ.

ಮಾತಿನಲ್ಲಿ ವಿಶೇಷತೆ, ಸೊಗಸನ್ನು ತರಲು ಜೋಡಿನುಡಿಗಳನ್ನು ಪ್ರಯೋಗ ಮಾಡಲಾಗುತ್ತದೆ. ಆಡುವ, ಆಡಿದ ಮಾತಿನಲ್ಲಿ ಬಳಸಿದ ಜೋಡಿನುಡಿಗಳು ಮಾತಿನಿಂದ ಹೆಚ್ಚಿಸುತ್ತವೆ. ಜನಪದರ ಕೊಡುಗೆಯಾಗಿವೆ. ಅವರು ಸ್ವಾಭಾವಿಕವಾಗಿ ಮಾತನಾಡುವಾಗ ಜೋಡಿನುಡಿಗಳನ್ನು ಹೇರಳವಾಗಿ ಬಳಸುತ್ತಾರೆ.

**ಉದಾ :**

ನಾವು ನಾಡು–ನುಡಿಯ ಕೆಲಸಕ್ಕೆ ಒಂದಾಗಬೇಕು.
ಮಾತು–ಕೃತಿಯು ಒಂದಾಗಿದ್ದರೆ ಮಾತ್ರ ಜನರು ಮೆಚ್ಚುತ್ತಾರೆ.
ಜನರು ಪ್ರವಾಹದಲ್ಲಿ ಮನೆ–ಮಠ ಕಳೆದುಕೊಂಡರು.
ಶರಣರು ದಾನ–ಧರ್ಮಕ್ಕೆ ಮಹತ್ವ ನೀಡಿದ್ದರು.
ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಡವಬಲ್ಲಿದರೊಂದೇ.
ಸೋಮುವಿಗೆ ತಾಯಿ–ತಂದೆ ಅವರ ಚಿಕ್ಕಪ್ಪನೇ.
ಕೆಲವರಿಗೆ ಹಗಲು–ರಾತ್ರಿ ದುಡಿದರೂ ಹೊಟ್ಟೆ ತುಂಬದು.
ಜನರು ದೇವರಿಗೆ ಹಣ್ಣು–ಕಾಯಿ ಅರ್ಪಿಸುತ್ತಿದ್ದರು.
ಮದುವೆಗೆ ಬೀಗರು–ಬಿಜ್ಜರು ಬಂದಿದ್ದರು.
ಅಯ್ಯೋ ! ಅವರು ಕುರ್ಚಿ–ಗಿರ್ಚಿ ಎಸೆದಾಡಿದರು.

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಜೋಡಿ ನುಡಿಗಳು

### 2. ಅರ್ಥವಿಲ್ಲದ ಪ್ರಾಸಪದವಿರುವ ಜೋಡುನುಡಿಗಳು :

ಎರಡು ಪದಗಳಲ್ಲಿ ಮೊದಲ ಪದಕ್ಕೆ ನಿರ್ದಿಷ್ಟ ಅರ್ಥವಿದ್ದು, ಎರಡನೆಯ ಪದಕ್ಕೆ ಅರ್ಥವಿರುವುದಿಲ್ಲ.

ಉದಾ:

| | | |
|---|---|---|
| ಕುರ್ಚಿ–ಗಿರ್ಚಿ | ನೀರು– ಗೀರು | ಹಾಲು–ಗೀಲು |
| ಪುಸ್ತಕ–ಗಿಸ್ತಕ | ಹೊಲ– ಗಿಲ | ರೊಟ್ಟಿ–ಗಿಟ್ಟಿ |
| ಕಲ್ಲು–ಗಿಲ್ಲು | ಮುಳ್ಳು – ಗಿಳ್ಳು | ಅರಿವೆ–ಅಂಚಡಿ |
| ದೇವರು–ಗೀವರು | ಗುಡಿ–ಗುಂಡಾರ | ಸಂದಿ–ಗೊಂದಿ |
| ಅಕ್ಕಿ–ಗಿಕ್ಕಿ | ನೀರು– ನಿಡಿ | ಬಡವ–ಬಗ್ಗ |
| ಹಣ್ಣು– ಹಂಪಲು | ಪಾತ್ರೆ–ಪಗಡ | ಕಾಡು– ಮೇಡು |
| ಬಟ್ಟೆ–ಬರೆ | ಹುಳ–ಹುಪ್ಪಡಿ | ಗಂಟು–ಗದಡಿ |
| ಬೀಗರು–ಬಿಜ್ಜರು | ದೇವರು–ದಿಂಡರು | ಕೂಲಿ–ಕುಂಬಳಿ |

### 3. ವಿರುದ್ಧಾರ್ಥಕ ಪದವಿರುವ ಜೋಡುನುಡಿಗಳು :

ವಿರುದ್ಧಾರ್ಥಕ ಪದಗಳನ್ನು ಜೋಡಿಸಿ ಜೋಡುನುಡಿಗಳಾಗಿ ಬಳಸಲಾಗುತ್ತದೆ.

ಉದಾ:

| | | |
|---|---|---|
| ಸಿಹಿ–ಕಹಿ | ಬಲ್ಲಿದ–ಬಡವ | ನಗು–ಅಳು |
| ತ್ಯಾಗ–ಭೋಗ | ಮುಂದೆ–ಹಿಂದೆ | ಗುಣ–ಅವಗುಣ |
| ಸತ್ಯ–ಅಸತ್ಯ | ಸುಖ–ದು:ಖ | ರಾಗ–ದ್ವೇಷ |
| ನೋವು–ನಲಿವು | ಭೂಮಿ–ಆಕಾಶ | ಬೆಂಕಿ–ನೀರು |
| ಆದಿ–ಅಂತ್ಯ | ಇರುಳು–ಹಗಲು | ಇಹ–ಪರ |
| ಕೀಳು–ಮೇಲು | ಉಳಿವು–ಅಳಿವು | ನಾಕ–ನರಕ |
| ಎಡ–ಬಲ | ಏರು–ಇಳಿ | ಏಳು–ಬೀಳು |

■

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ನುಡಿಗಟ್ಟುಗಳು

ವಿಶೇಷಾರ್ಥ ನೀಡುವ ಪದ ಪುಂಜವನ್ನು 'ಪಡೆನುಡಿ' ಅಥವಾ 'ನುಡಿಗಟ್ಟು' ಎಂದು ಕರೆಯಲಾಗುತ್ತದೆ. ಇಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಸೂಚ್ಯಾರ್ಥ ಇಲ್ಲವೇ ಒಳ ಅರ್ಥವು ಪ್ರಧಾನವಾಗಿರುತ್ತದೆ. ಇವುಗಳನ್ನು ವಾಕ್ಯಗಳಲ್ಲಿ ಬಳಸುವಾಗ ಒಳಾರ್ಥದಲ್ಲಿಯೇ ಪ್ರಯೋಗಿಸಬೇಕು.

## ನುಡಿಗಟ್ಟುಗಳ ಪ್ರಯೋಗಕ್ಕೆ ಉದಾಹರಣೆಗಳು

- ವಿದ್ಯಾರ್ಥಿಗಳು ಅಡ್ಡಹಾದಿ ಹಿಡಿದಾಗ ಶಿಕ್ಷಕರು ತಿದ್ದಬೇಕು.
- ಬಡವರು ಹೊಟ್ಟೆಪಾಡಿಗಾಗಿ ನಗರಕ್ಕೆ ವಲಸೆ ಬರುತ್ತಿದ್ದಾರೆ.
- ಇಂದಿನ ಕಾಲದಲ್ಲಿ ಗೆದ್ದೆತ್ತಿನ ಬಾಲ ಹಿಡಿಯುವವರೇ ಜಾಸ್ತಿ.
- ಒಳಗೊಳಗೆ ಕತ್ತಿಮಸೆಯುವ ಜನರಿಂದ ದೂರವಿರಿ.
- ಬೆಕ್ಕು ಕಳ್ಳ ಹೆಜ್ಜೆ ಇಡುತ್ತಾ ಬಂದು ಹಾಲನ್ನು ಕುಡಿಯಿತು.
- ಒಳ್ಳೆಯ ಕೆಲಸಕ್ಕೆ ನೂರೆಂಟು ಅಡ್ಡಗಾಲು.
- ಸಭಿಕರು ಜನಪದರ ಹಾಡಿಗೆ ತಲೆದೂಗಿದರು.
- ಗ್ರಾಮೀಣ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ವಿಷಯವು ಕಬ್ಬಿಣದ ಕಡಲೆಯಂತೆ.
- ಶಂಕರನು ಭಾಷಣ ಮಾಡುವುದರಲ್ಲಿ ಎತ್ತಿದ ಕೈ.
- ನಾನು ಹೇಳುತ್ತಿರುವುದು ಹದಿನಾರಾಣೆ ಸತ್ಯ.
- ಹೊಂಚು ಹಾಕಿ ತಿನ್ನುವುದಕ್ಕಿಂತ ಹಂಚಿ ತಿನ್ನುವುದು ಶ್ರೇಷ್ಠ.
- ಬಸವತತ್ವಗಳನ್ನು ಗಾಳಿಗೆ ತೂರಿ ಜಯಂತಿಯನ್ನು ಆಚರಿಸಲಾಗುತ್ತಿದೆ.
- ಭಾರತೀಯ ಸೈನಿಕರು ಉಗ್ರರಿಗೆ ಗತಿಕಾಣಿಸಲು ಹೊರಟಿದ್ದಾರೆ.
- ಕಿತ್ತೂರು ರಾಣಿ ಚೆನ್ನಮ್ಮಳು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದಳು.

**ಕನ್ನಡ ಕಲಿ**



▪ ಡಾ. ಶಿವಾನಂದ ಟವಳಿ
shivu.tavali@gmail.com

# ನುಡಿಗಟ್ಟುಗಳು

ಮಾತಿನಲ್ಲಿ ಬಳಸುವ ಪದ ಅಥವಾ ಪದಸಮೂಹಕ್ಕೆ ಅರ್ಥವು ಒಂದಿದ್ದು ಅದು ಆಳವಾದ ಬೇರೊಂದು ಅರ್ಥವನ್ನು ಕೊಡುತ್ತಿದ್ದರೆ ಅಂತಹ ಶಬ್ದಗಳನ್ನು 'ನುಡಿಗಟ್ಟುಗಳು' ಎನ್ನುವರು. ನುಡಿಗಟ್ಟುಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಪದಗಳು ಸೇರಿ ಒಂದು ವಿಶಿಷ್ಟವಾದ ಅರ್ಥವನ್ನು ಸೃಷ್ಟಿಸುತ್ತವೆ.

ಒಂದು ಆಳವಾದ ಅರ್ಥವನ್ನು ಕೆಲವೇ ಪದಗಳಲ್ಲಿ ಹಿಡಿದಿಡುವುದು ನುಡಿಗಟ್ಟುಗಳ ವಿಶೇಷತೆ. ಇವು ಹೊರನೋಟಕ್ಕೆ ಒಂದು ಅರ್ಥವನ್ನು (ವಾಚ್ಯಾರ್ಥ) ನೀಡುತ್ತಿದ್ದರೆ ಅವುಗಳ ಒಳಾರ್ಥವು (ಗೂಢಾರ್ಥ) ಬೇರೆಯೇ ಇರುತ್ತದೆ. ಇವು ಕನ್ನಡ ಭಾಷೆಯಲ್ಲಿ ಒಳಾರ್ಥದ ಆಧಾರದ ಮೇಲೆ ಬಳಕೆಗೊಳ್ಳುತ್ತವೆ. ನುಡಿಗಟ್ಟುಗಳು ಕನ್ನಡ ಭಾಷೆಯ ಶ್ರೀಮಂತಿಕೆಗೆ ಕಾರಣವಾಗಿರುವುದಲ್ಲದೇ ಭಾಷೆಯ ಸೊಬಗನ್ನು ಹೆಚ್ಚಿಸುತ್ತದೆ.

ಉದಾ:

**ಕತ್ತಿಮಸೆ – ದ್ವೇಷ ಸಾಧಿಸು**
**ಕೈಕೊಡು – ಮೋಸ ಮಾಡು**
**ಬೆನ್ನುತಟ್ಟು – ಪ್ರೋತ್ಸಾಹಿಸು**
**ತೊಡೆ ತಟ್ಟಿ ನಿಲ್ಲು – ಜಗಳಕ್ಕೆ ನಿಲ್ಲು**
**ನೀರಿಗೆ ಹಾಕು – ವ್ಯರ್ಥ ಮಾಡು**
**ಮೂಗಿನ ಮೇಲೆ ಬೆರಳಿಡು– ಆಶ್ಚರ್ಯ ಪಡು**
**ಕಚ್ಚೆ ಕಟ್ಟು – ಸಿದ್ಧನಾಗು**
**ಕಟ್ಟು ಕತೆ – ಸುಳ್ಳು ಮಾತು, ಸುಳ್ಳು ಪ್ರಸಂಗ**
**ಕಂಕಣ ಬದ್ಧನಾಗು – ಸಂಕಲ್ಪ ಮಾಡು**
**ಕಡಿವಾಣ ಹಾಕು – ಹತೋಟಿಯಲ್ಲಿಡು**
**ಕಣ್ಣಿಗೆ ಮಣ್ಣೆರಚು – ಮೋಸಮಾಡು**
**ಕಣ್ಣಿನಲ್ಲಿ ಎಣ್ಣೆಹಾಕಿ ನೋಡು – ಸೂಕ್ಷ್ಮವಾಗಿ ಪರಿಶೀಲಿಸು** ▪

ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಾಕ್ಯಗಳು

ಸಂಪೂರ್ಣ ಅರ್ಥವನ್ನು ಕೊಡುವ ಪದ ಸಮುಚ್ಚಯಕ್ಕೆ 'ವಾಕ್ಯ' ಎನ್ನುವರು. ಇದು ಒಂದು ಮಾತಿನ ಸಂಪೂರ್ಣ ವಿಚಾರವನ್ನು ತಿಳಿಪಡಿಸುವ ಪದಗಳ ಗುಂಪಾಗಿದೆ. ಪರಸ್ಪರ ಸಂಪರ್ಕ ಬೆಳೆಯಲು ಭಾಷೆ ಎಷ್ಟು ಅವಶ್ಯಕವೋ? ವಾಕ್ಯಗಳು ಕೂಡ ಒಬ್ಬರ ವಿಚಾರವು ಇನ್ನೊಬ್ಬರಿಗೆ ತಿಳಿಯಲು ಅಷ್ಟೇ ಅವಶ್ಯಕವಾಗಿವೆ. ಅರ್ಥಪೂರ್ಣ ಪದಗಳು ಸೇರಿ ಅರ್ಥಪೂರ್ಣ ವಾಕ್ಯಗಳು ನಿರ್ಮಾಣವಾಗುತ್ತವೆ.

## ವಾಕ್ಯಗಳ ರಚನೆ

ಮಾತಿನ ವಿಚಾರವು ಪರರಿಗೆ ತಿಳಿಯಲು ಬರುವಂತೆ ಪದಗಳನ್ನು ಕ್ರಮಬದ್ಧವಾಗಿ ಸೇರಿಸುವುದನ್ನು 'ವಾಕ್ಯ ರಚನೆ' ಎಂದು ಕರೆಯುವರು. ಕನ್ನಡ ಭಾಷೆಯ ವ್ಯಾಕರಣದ ನಿಯಮದಂತೆ ಒಂದು ವಾಕ್ಯದಲ್ಲಿ ಕರ್ತೃ, ಕರ್ಮ ಹಾಗೂ ಕ್ರಿಯಾಪದಗಳು ಇರುತ್ತವೆ.

ಕರ್ತೃ, ಕರ್ಮ, ಕ್ರಿಯಾಪದಗಳಿಂದ ಒಂದು ವಾಕ್ಯದ ನಿರ್ಮಾಣವಾಗಿ, ಆಯಾ ಪದಗಳಿಗೆ ಸಂಬಂಧಿಸಿದಂತೆ ವಿಶೇಷಣಗಳು ಆಯಾಪದಗಳ ಆದಿಯಲ್ಲಿ ಬರುತ್ತವೆ. ಕನ್ನಡದ ವಾಕ್ಯಗಳಲ್ಲಿ ಮೊದಲಿಗೆ ಕರ್ತೃಪದ, ತದನಂತರ ಕರ್ಮಪದ ಕೊನೆಯಲ್ಲಿ ಕ್ರಿಯಾಪದ ಬರಬೇಕು ಎನ್ನುವ ನಿಯಮವಿದೆ.

ಉದಾ: ನಿಹಾರಿಕಾಳು ಆಟವನ್ನು ಆಡುತ್ತಾಳೆ.
ಅದು ಮರವನ್ನು ಏರಿತು.
ನಿರಂಜನನು ಶಾಲೆಗೆ ಹೋಗುತ್ತಾನೆ.
ಅವರು ಹಾಡನ್ನು ಹಾಡಿದರು.
ಸಾಗರಿಕಾಳು ನೃತ್ಯವನ್ನು ಮಾಡಿದಳು.
ಜನರು ರಥವನ್ನು ಎಳೆದರು.
ವಿದ್ಯಾರ್ಥಿಯ ಪ್ರಶ್ನೆಗೆ ಶಿಕ್ಷಕರು ಉತ್ತರಿಸಿದರು.

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ವಾಕ್ಯಗಳು

## 2) ಸಂಯೋಜಿತ ವಾಕ್ಯ

ಸ್ವತಂತ್ರವಾಗಿ ನಿಲ್ಲಬಲ್ಲ ಎರಡು ಅಥವಾ ಅನೇಕ ವಾಕ್ಯಗಳು ಸೇರಿ ಒಂದು ಸಂಪೂರ್ಣ ವಿಚಾರವನ್ನು ನೀಡುವ ವಾಕ್ಯಗಳನ್ನು ಸಂಯೋಜಿತ ವಾಕ್ಯ ಎನ್ನುವರು. ಈ ರೀತಿಯ ವಾಕ್ಯಗಳಲ್ಲಿ ಸಂಬಂಧಸೂಚಕಗಳನ್ನು ಹೆಚ್ಚಾಗಿ ಬಳಸುವರು. ಆದುದರಿಂದ ಸಂಯುಕ್ತ ಅಥವಾ ಸಂಬಂಧಸೂಚಕ ವಾಕ್ಯ ಎಂಬ ಹೆಸರೂ ಇದೆ.

**ಉದಾ: ಭರತನು ರಾಮನನ್ನು ರಾಜ್ಯಭಾರ ಮಾಡುವಂತೆ ಕೇಳಿಕೊಂಡ ಆದರೆ ರಾಮನು ಒಪ್ಪಲಿಲ್ಲ.**

- **ಹಸುವು ಕೊಟ್ಟಿಗೆಯಲ್ಲಿಲ್ಲ ಏಕೆಂದರೆ ಅದು ಕಾಡಿನಲ್ಲಿ ತಪ್ಪಿಸಿಕೊಂಡಿದೆ.**
- **ಶಂಕರನು ಕಷ್ಟಪಟ್ಟು ಓದಿದುದರಿಂದ ಅವನು ರ್‍ಯಾಂಕ್ ಗಳಿಸಿದನು.**

## 3) ಮಿಶ್ರ ವಾಕ್ಯ

ಒಂದು ವಾಕ್ಯವು ಪ್ರಧಾನವಾಗಿದ್ದು, ಆ ಪ್ರಧಾನ ವಾಕ್ಯಕ್ಕೆ ಒಂದು ಅಥವಾ ಎರಡಕ್ಕಿಂತ ಹೆಚ್ಚು ಉಪವಾಕ್ಯಗಳಾಗಿ ಸೇರಿದ ವಾಕ್ಯಗಳನ್ನು 'ಮಿಶ್ರ ವಾಕ್ಯ' ಎನ್ನುವರು. ಒಂದಕ್ಕಿಂತ ಹೆಚ್ಚು ಕರ್ತೃ, ಕರ್ಮ, ಕ್ರಿಯಾಪದಗಳು ಇಲ್ಲಿ ಬಂದಿರುತ್ತವೆ. ಮಿಶ್ರ ವಾಕ್ಯದಲ್ಲಿ ಅಪೂರ್ಣ ಕ್ರಿಯಾಪದ (ಕೃದಂತ)ಗಳಿದ್ದು, ಅವು ಪ್ರಧಾನ ಕ್ರಿಯಾಪದಕ್ಕೆ ಸಂಬಂಧಸೂಚಕಗಳಾಗಿರುತ್ತವೆ. ಇದಕ್ಕೆ ಸಂಕೀರ್ಣ ವಾಕ್ಯ ಎಂಬ ಹೆಸರೂ ಇದೆ.

ಉದಾ: ಕೋಟೆಯೊಳಗೆ ಸೈನಿಕರು ನುಗ್ಗಿದರೆಂಬ ಸುದ್ದಿಯನ್ನು ಕೇಳಿ ಜನಗಳು ಯುದ್ಧಭೀತರಾಗಿ ಅಲ್ಲಿಂದ ಓಡಿಹೋದರು.

- **ಪರೀಕ್ಷೆಯಲ್ಲಿ ಸರಳವಾದ ಪ್ರಶ್ನೆಗಳನ್ನು ಕೇಳಿದ್ದರಿಂದ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಕೀರ್ತಿಯನ್ನು ತಂದರು.**
- **ಶಂಕರನು ಪರೀಕ್ಷೆಯಲ್ಲಿ ಉತ್ತೀರ್ಣಗೊಂಡದ್ದಕ್ಕಾಗಿ ಆ ವಿಷಯವನ್ನು ಮನೆಯವರಿಗೆ ಹೇಳಿ ಎಲ್ಲರಿಗೂ ಸಿಹಿ ಹಂಚುವ ಮೂಲಕ ಸಂತೋಷಪಟ್ಟನು.**

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಾಕ್ಯಗಳು

### ವಾಕ್ಯ ವಿಭಜನೆ

ಯಾವುದೇ ಒಂದು ವಾಕ್ಯದಲ್ಲಿರುವ ಪದಗಳನ್ನೂ, ವಾಕ್ಯದ ಭಾಗಗಳನ್ನು ಮತ್ತು ಅವುಗಳ ಸಂಬಂಧವನ್ನು ಬೇರೆಬೇರೆ ಮಾಡಿ ಹೇಳುವುದನ್ನು 'ವಾಕ್ಯ ವಿಭಜನೆ' ಎನ್ನುವರು. ಆಖ್ಯೇಯ ಹಾಗೂ ಅಖ್ಯಾತಗಳು ವಾಕ್ಯದ ಎರಡು ಮುಖ್ಯ ಭಾಗಗಳು. ವಾಕ್ಯ ವಿಭಜನೆಯಲ್ಲಿ ಎರಡೂ ಭಾಗಗಳನ್ನೂ ವಿವರಿಸಬೇಕಾಗುತ್ತದೆ. ಕರ್ತೃಪದ ಹಾಗೂ ಕರ್ತೃವಿಗೆ ಸಂಬಂಧಿಸಿದ ವಿಶೇಷಣ ಪದಗಳು ಆಖ್ಯೇಯ ಭಾಗದಲ್ಲಿ ಇರುತ್ತವೆ. ಕರ್ಮಪದ–ಕರ್ಮಪದಕ್ಕೆ ಸಂಬಂಧಿಸಿದ ಪದಗಳು, ಕ್ರಿಯಾಪದ–ಕ್ರಿಯಾಪದಕ್ಕೆ ಸಂಬಂಧಿಸಿದ ಪದಗಳು ಹಾಗೂ ಉಳಿದೆಲ್ಲ ಪದಗಳು ಅಖ್ಯಾತ ಭಾಗದಲ್ಲಿ ಇರುತ್ತವೆ.

### ವಾಕ್ಯದ ವಿಧಗಳು

ಕನ್ನಡದಲ್ಲಿ ಮೂರು ಬಗೆಯ ವಾಕ್ಯಗಳ ವಿಧಗಳನ್ನು ಅವುಗಳ ಲಕ್ಷಣಗಳಿಗೆ ಅನುಗುಣವಾಗಿ ವರ್ಗೀಕರಿಸಲಾಗಿದೆ. ಅವು

1) ಸಾಮಾನ್ಯ ವಾಕ್ಯ
2) ಸಂಯೋಜಿಕ ವಾಕ್ಯ
3) ಮಿಶ್ರ ವಾಕ್ಯ

### 1)ಸಾಮಾನ್ಯ ವಾಕ್ಯ

ಯಾವುದೇ ವಾಕ್ಯಗಳ ಸಂಬಂಧವನ್ನು ಆಪೇಕ್ಷಿಸದೇ ಇರುವ ಒಂದು ಪೂರ್ಣ ಕ್ರಿಯಾಪದವನ್ನು ಹೊಂದಿರುವ ವಾಕ್ಯವನ್ನು 'ಸಾಮಾನ್ಯ ವಾಕ್ಯ' ಎಂದು ಕರೆಯುವರು. ಈ ವಾಕ್ಯದಲ್ಲಿ ಒಂದೇ ಕರ್ತೃಪದ, ಒಂದೇ ಕರ್ಮಪದ, ಒಂದೇ ಕ್ರಿಯಾಪದವಿದ್ದು ಆ ಕ್ರಿಯಾಪದ ಪೂರ್ಣ ಕ್ರಿಯಾಪದವಾಗಿರಬೇಕು. ಸಾಮಾನ್ಯ ವಾಕ್ಯಕ್ಕೆ ಸರಳ ವಾಕ್ಯ ಎಂದು ಕರೆಯುವ ರೂಢಿಯಿದೆ.

**ಉದಾ:** **ಕಾವೇರಿಯು ಹಾಡನ್ನು ಹಾಡಿದಳು**
**ಹಕ್ಕಿಯು ಹಣ್ಣನ್ನು ತಿನ್ನುತ್ತದೆ**
**ಸುರೇಶನು ಪುಸ್ತಕವನ್ನು ಓದಿದನು**
**ಕೋತಿಯು ಮರದಿಂದ ಜಿಗಿಯಿತು**

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ನುಡಿಗಟ್ಟುಗಳು

## ನುಡಿಗಟ್ಟುಗಳ ಅರ್ಥ

ಹೊಂಚುಹಾಕು –ಸಮಯ ಸಾಧಿಸು
ನಾಯಿ ಜನ್ಮ – ಹೀನಬಾಳು
ತಲೆದೂಗು – ಮೆಚ್ಚುಗೆ ಸೂಚಿಸು
ಟೋಪಿ ಹಾಕು – ಮೋಸಮಾಡು
ತಣ್ಣೀರೆರಚು – ಉತ್ಸಾಹ ಭಂಗ ಮಾಡು
ತಲೆ ತಪ್ಪಿಸು – ಕೈಗೆ ಸಿಗದಿರು, ಜಾರಿಕೊಳ್ಳು
ತಲೆಯಿಲ್ಲ – ಬುದ್ಧಿಯಿಲ್ಲ
ಮೈಯಲ್ಲಾ ಕಿವಿಯಾಗು – ಕೇಳುವುದರಲ್ಲಿ ಬಹಳ ಆಸಕ್ತಿ ತಾಳು
ರೈಲು ಬಿಡು – ಸುಳ್ಳು ಹೇಳು
ಕಣ್ಣೀರಿನಲ್ಲಿ ಕೈತೊಳೆ –ಬಹಳ ದುಃಖ, ಕಷ್ಟವನ್ನು ಅನುಭವಿಸು
ಕಣ್ಣು ತಾಗು – ದೃಷ್ಟಿಯಾಗು
ಭೂಮಿಗೆ ಭಾರ – ನಿಷ್ಪ್ರಯೋಜಕ
ಮಂಕುಬೂದಿ ಎರಚು – ಮರಳು ಮಾಡು
ಒರೆಗೆ ಹಚ್ಚು – ಚೆನ್ನಾಗಿ ಪರೀಕ್ಷಿಸು
ಕಂತೆ ಪುರಾಣ – ಯಾರಿಗೂ ಬೇಡವಾದ ಹಳೆಯ ವಿಚಾರ
ಕಂಬಿ ಕೀಳು –ಓಡಿಹೋಗು
ಕಣ್ಮಣಿ – ಪ್ರೀತಿ ಪಾತ್ರವಾದುದ್ದು
ಕತ್ತಿಮಸೆ – ಹಗೆ ಸಾಧಿಸು
ಕಪಾಳಮೋಕ್ಷ – ಕೆನ್ನೆಗೆ ಏಟು
ಕಪಿಮುಷ್ಟಿ – ಬಿಗಿಯಾದ ಹಿಡಿತ
ಕಬ್ಬಿಣದ ಕಡಲೆ – ಅತ್ಯಂತ ಕಠಿಣವಾದ ವಿಷಯ
ಕಲ್ಲು ಹಾಕು – ವಿಘ್ನ ಉಂಟು ಮಾಡು
ಕಾಲಿಗೆ ಬುದ್ಧಿ ಹೇಳು – ಓಡು
ಕಿಡಿಕಾರು – ಉರಿದು ಬೀಳು ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ತದ್ಧಿತಾಂತಗಳು

### 4. ತದ್ಧಿತಾಂತ ಅವ್ಯಯಗಳು

ಷಷ್ಠ್ಯಂತ ನಾಮಪದಗಳ ಮುಂದೆ ಅವ್ಯಯದ ಅರ್ಥದಲ್ಲಿ ಅಂತೆ, ಹಾಗೆ, ವೊಲ್, ವರೆಗೆ, ತನಕ, ಮಟ್ಟಿಗೆ, ಓಸುಗ, ಓಸ್ಕರ, ಇಂತ, ಆಗಿ, ಸಲುವಾಗಿ ಮುಂತಾದ ತತ್ ಪ್ರತ್ಯಯಗಳು ಸೇರಿದಾಗ ಉಂಟಾಗುವ ಪದಗಳೇ 'ತದ್ಧಿತಾಂತ ಅವ್ಯಯಗಳು'.

ಉದಾ:

ಅಂತೆ – ಅವಳಂತೆ, ತನ್ನಂತೆ, ನಿನ್ನಂತೆ, ರಾಮನಂತೆ

ಹಾಗೆ – ಆಕಾಶದ ಹಾಗೆ, ಹಾಲಿನ ಹಾಗೆ, ಆನೆಯ ಹಾಗೆ

ವೊಲ್ – ಅವನವೊಲ್, ಅವಳವೊಲ್, ಸೂರ್ಯನವೊಲ್

ವರೆಗೆ – ಅಲ್ಲಿಯವರೆಗೆ, ಊರಿನವರೆಗೆ, ಶಾಲೆಯವರೆಗೆ

ತನಕ – ಮನೆಯತನಕ, ಸಂಜೆಯತನಕ, ರಾಜನತನಕ

ಮಟ್ಟಿಗೆ – ಅವರಮಟ್ಟಿಗೆ, ನನ್ನಮಟ್ಟಿಗೆ, ನಿನ್ನಮಟ್ಟಿಗೆ

ಓಸುಗ – ಅವರಿಗೋಸುಗ, ನಿನಗೋಸುಗ, ಕಲಿಯಲೋಸುಗ

ಓಸ್ಕರ – ಯುದ್ಧಕ್ಕೋಸ್ಕರ, ದೇವರಿಗೋಸ್ಕರ, ಹಣಕ್ಕೋಸ್ಗರ

ಇಂತ – ನಿನಗಿಂತ, ತಾಯಿಗಿಂತ, ಉಪ್ಪಿಗಿಂತ

ಆಗಿ – ರಾಜನಾಗಿ, ರಾಮನಾಗಿ, ಮಕ್ಕಳಾಗಿ

ಸಲುವಾಗಿ– ತಾಯಿಯ ಸಲುವಾಗಿ, ಮಾತಿನ ಸಲುವಾಗಿ

ಅವ್ಯಯ ರೂಪಗಳಲ್ಲಿ ಬರುವ ತದ್ಧಿತಾಂತ ಅವ್ಯಯಗಳು ಯಾವುದೇ ಸಂದರ್ಭದಲ್ಲಿ ಬದಲಾಗದ ಏಕರೂಪದ ಪದಗಳಾಗಿವೆ.

**ಕನ್ನಡ ಕಲಿ**



▪ ಡಾ. ಶಿವಾನಂದ ಟವಳಿ
shivu.tavali@gmail.com

# ತದ್ಧಿತಾಂತಗಳ ವಿಧಗಳು

ನಾಮಪ್ರಕೃತಿಗಳಿಗೆ ತತ್ ಪ್ರತ್ಯಯಗಳ ಸೇರಿದಾಗ ಉಂಟಾಗುವ ರೂಪಗಳನ್ನು ಗಮನಿಸಿ ತದ್ಧಿತ ಪದ ಅಥವಾ ತದ್ಧಿತಾಂತ ಪದಗಳಲ್ಲಿ ಒಟ್ಟು ನಾಲ್ಕು ವಿಧಗಳನ್ನು ಕಾಣುತ್ತೇವೆ.

1. ತದ್ಧಿತ ನಾಮಗಳು
2. ತದ್ಧಿತ ವಿಶೇಷಣಗಳು
3. ತದ್ಧಿತ ಭಾವನಾಮಗಳು
4. ತದ್ಧಿತ ಅವ್ಯಯಗಳು

## 1. ತದ್ಧಿತ ನಾಮಗಳು

ನಾಮ ಪ್ರಕೃತಿಗೆ ಗಾರ/ಕಾರ, ವಂತ, ಇಗ, ಅಳಿ, ಗಾರ್ತಿ/ಕಾರ್ತಿ, ಅಡಿಗ, ಸ್ಥ, ಗುಳಿ, ಎ, ಇ, ತಿ, ಗಿತ್ತಿ/ಇತ್ತಿ, ಇತಿ ಮುಂತಾದ ತತ್ ಪ್ರತ್ಯಯಗಳು ಸೇರಿದಾಗ ಉಂಟಾಗುವ ಪದಗಳೇ 'ತದ್ಧಿತ ನಾಮಗಳು'.

ಉದಾ : ಗಾರ – ಸಾಲಗಾರ, ಕನಸುಗಾರ, ಮೋಸಗಾರ, ಬೇಟೆಗಾರ
ಗುಳಿ – ಲಂಚಗುಳಿ, ಸಾಲಗುಳಿ, ಆಟಗುಳಿ
ಕಾರ – ಅಂಗಡಿಕಾರ, ಸಾಹುಕಾರ, ಕೂಲಿಕಾರ
ವಂತ – ಗುಣವಂತ, ಸಿರಿವಂತ, ಹಣವಂತ
ಇಗ – ಕನ್ನಡಿಗ, ಲೆಕ್ಕಿಗ, ಶಿಲ್ಪಿಗ
ಸ್ಥ – ನಂಬಿಗಸ್ಥ, ಗ್ರಹಸ್ಥ, ವ್ಯಾಪಾರಸ್ಥ
ಅಡಿಗ – ಹೂವಾಡಿಗ, ಹಾವಾಡಿಗ
ಗಿತ್ತಿ – ಗಾಣಗಿತ್ತಿ, ಹೂವಾಡಗಿತ್ತಿ, ಅಗಸಗಿತ್ತಿ
ಎ – ಚೆಲುವೆ, ಜಾಣೆ, ಬುದ್ಧಿವಂತೆ
ತಿ – ಗೌಡತಿ, ಗೊಲ್ಲತಿ, ಕನ್ನಡಿತಿ
ಗಾರ್ತಿ – ಮಾಟಗಾರ್ತಿ, ಓಟಗಾರ್ತಿ, ಮಾತುಗಾರ್ತಿ
ಇ – ಅರಸಿ, ಹುಡುಗಿ, ಮುದುಕಿ

## ಕನ್ನಡ ಕಲಿ

■ ಡಾ. ಶಿವಾನಂದ ಟವಳಿ
shivu.tavali@gmail.com



# ತದ್ಧಿತಾಂತಗಳು

## 2. ತದ್ಧಿತ ವಿಶೇಷಣಗಳು

ತದ್ಧಿತನಾಮಗಳು ವಿಶೇಷಣ ಸ್ಥಾನದಲ್ಲಿ ಬಂದಾಗ ಅವು ತದ್ಧಿತ ವಿಶೇಷಣಗಳೆನಿಸುತ್ತವೆ. ತದ್ಧಿತ ನಾಮಗಳನ್ನೇ ವಿಶೇಷಣಗಳಂತೆ ಬಳಸುವುದರಿಂದ ಅವುಗಳೇ ತದ್ಧಿತ ವಿಶೇಷಣಗಳು.

ಉದಾ:

| | |
|---|---|
| ಓಟಗಾರ್ತಿ ಉಷಾ | ಬಳೆಗಾರ ಚೆನ್ನಯ್ಯ |
| ಸಿರಿವಂತ ಅಂಬಾನಿ | ಓಲೇಕಾರ ಓಂಕಾರಮೂರ್ತಿ |
| ಜಾಣ ಹುಡುಗ | ಆಟಗಾರ ಆದಿತ್ಯ |
| ಲಂಚಗುಳಿ ಕೆಂಚಪ್ಪ | ಹಾಡುಗಾರ್ತಿ ಈಶ್ವರಿ |
| ಗುಣವಂತ ರಾಮ | ಸಿರಿವಂತ ನವನೀತ್ |
| ಸೂಲಗಿತ್ತಿ ಸಂಕವ್ವ | ವ್ಯಾಕರಣಕಾರ ಕೇಶಿರಾಜ |
| ವಾಚಾಳಿ ಸಾಗರಿಕಾ | ಕನ್ನಡಿಗ ನಿರಂಜನ |
| ಮರೆಗುಳಿ ಮನುಷ್ಯ | ನೃತ್ಯಗಾರ್ತಿ ನಿಹಾರಿಕಾ |

ಈ ಮೇಲ್ಕಂಡ ರೂಪಗಳಲ್ಲಿ ಪೂರ್ವಪದದ ಸ್ಥಾನದಲ್ಲಿರುವ ಗೆರೆ ಎಳೆದ ಪದಗಳು ತದ್ಧಿತ ವಿಶೇಷಣಗಳು ಎನಿಸುತ್ತವೆ.

## 3. ತದ್ಧಿತ ಭಾವನಾಮಗಳು

ನಾಮಪ್ರಕೃತಿಗಳಿಗೆ ತನ, ಇಕೆ, ಉ, ಪು, ಮೆ, ವಳಿ ಮುಂತಾದ ಭಾವಸೂಚಕ ತತ್ ಪ್ರತ್ಯಯಗಳು ಸೇರಿದಾಗ ಉಂಟಾಗುವ ಪದಗಳೇ 'ತದ್ಧಿತ ಭಾವನಾಮಗಳು'.

ಉದಾ: ತನ – ಜಾಣತನ, ಹಿರಿತನ, ಶೂರತನ, ಗಂಡಸುತನ

ಇಕೆ – ಗೌಡಿಕೆ, ದೊಡ್ಡಸ್ತಿಕೆ, ಮಡಿವಂತಿಕೆ, ಸೊಗಸುಗಾರಿಕೆ

ಉ – ಕಿವುಡು, ಕುರುಡು, ತೊದಲು

ಪು – ಕಪ್ಪು, ಬಿಳಿಪು, ಕೆಂಪು

ಮೆ – ಜಾಣ್ಮೆ, ಹಿರಿಮೆ, ಹೆಮ್ಮೆ

ವಳಿ – ಗೊತ್ತುವಳಿ, ನಿಲುವಳಿ, ಬಳುವಳಿ

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಚನ ವ್ಯವಸ್ಥೆ

### ಗೌರವಾರ್ಥ ಬಹುವಚನ

ವಸ್ತು ಒಂದೇ ಇದ್ದರೂ ಗೌರವಾರ್ಥದಲ್ಲಿ, ತಾತ್ಸಾರದಲ್ಲಿ ಬಹುವಚನ ಪ್ರತ್ಯಯವನ್ನು ಕನ್ನಡ ಭಾಷೆಯಲ್ಲಿ ಬಳಸಬಹುದಾಗಿದೆ.

**ಉದಾ:** ಸಚಿವರು, ಮಂತ್ರಿಗಳು, ಅತಿಥಿಗಳು, ಶ್ರೀಯುತರು, ಗುರುಗಳು ಇತ್ಯಾದಿ

### ಜನ ಶಬ್ದದ ವಿಚಾರ

ಜನ ಶಬ್ದವು ಏಕವಚನ ನಪುಂಸಕಲಿಂಗ ಆಗಿರುತ್ತದೆ. ಜನ ಎಂಬ ಪ್ರಕೃತಿಗೆ ಬಹುವಚನದಲ್ಲಿ ಜನ, ಜನರು, ಜನಗಳು ಎಂಬ ರೂಪಗಳಿವೆ.ಈ ಜನ ಶಬ್ದಕ್ಕೆ ಕು, ಸು, ಸತ್, ದುರ್ ಎಂಬ ಉಪಸರ್ಗಗಳು ಸೇರಿದಾಗ ಅದು ಬಹುವಚನ ಪುಲ್ಲಿಂಗ ಆಗುತ್ತದೆ.

**ಉದಾ:** ಕುಜನ, ಸುಜನ, ಸಜ್ಜನ, ದುರ್ಜನ ಇತ್ಯಾದಿ.

### ಸಂಸ್ಕೃತ ವಚನ ವ್ಯವಸ್ಥೆ

ಆರ್ಯ ಭಾಷೆಗಳಲ್ಲಿ ಮೂರು ವಚನ ಪದ್ಧತಿ ಇದ್ದರೆ ದ್ರಾವಿಡ ಭಾಷೆಗಳಲ್ಲಿ ಎರಡು ವಚನ ಪದ್ಧತಿ ಇದೆ. ಸಂಸ್ಕೃತ ಭಾಷೆಯಲ್ಲಿ ಮೂರು ಪ್ರಕಾರದ ವಚನ ವ್ಯವಸ್ಥೆ ಇದೆ.

**ಏಕವಚನ** – ಅಲ್ಲಿ ವಸ್ತು ಒಂದು ಆಗಿದ್ದರೆ ಏಕವಚನ.
**ಉದಾ:** ಹುಡುಗ, ಅವನು, ಮರ, ನಾಯಿ, ಅದು ಇತ್ಯಾದಿ

**ದ್ವಿವಚನ** – ವಸ್ತು ಎರಡು ಆಗಿದ್ದರೆ ದ್ವಿವಚನ.
ಉದಾ: ಕಣ್ಣುಗಳು, ಕಾಲುಗಳು, ಕೈಗಳು, ಕಿವಿಗಳು ಇತ್ಯಾದಿ

**ಬಹುವಚನ** – ವಸ್ತು ಎರಡಕ್ಕಿಂತ ಹೆಚ್ಚಾಗಿದ್ದರೆ ಬಹುವಚನ.
ಉದಾ: ಹುಡುಗರು, ಅವರು, ಮರಗಳು, ನಾಯಿಗಳು, ಅವು ಇತ್ಯಾದಿ

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಚನ ವ್ಯವಸ್ಥೆ

### ವಚನ ವ್ಯವಸ್ಥೆ

ವ್ಯಾಕರಣಾರ್ಥದಲ್ಲಿ ವಚನ ಎಂದರೆ 'ಸಂಖ್ಯೆ' ಎಂದರ್ಥ. ವಸ್ತು, ವ್ಯಕ್ತಿ ಮತ್ತು ಪ್ರಾಣಿಗಳ ಸಂಖ್ಯೆಯನ್ನು ಹೇಳುವ ಪದಗಳಿಗೆ 'ವಚನ'ಎನ್ನುವರು. ವಚನ ವ್ಯವಸ್ಥೆಯು ಆಯಾ ಭಾಷೆಗಳಲ್ಲಿ ಭಿನ್ನಭಿನ್ನವಾಗಿರುತ್ತದೆ.

### ವಚನ ವ್ಯವಸ್ಥೆಯ ವಿಧಗಳು

ಸಂಸ್ಕೃತ ಭಾಷೆಯಲ್ಲಿ ಮೂರು ಪ್ರಕಾರದ ವಚನ ವ್ಯವಸ್ಥೆ ಇದ್ದರೆ ಕನ್ನಡ ಭಾಷೆಯಲ್ಲಿ ಎರಡು ಪ್ರಕಾರದ ವಚನ ವ್ಯವಸ್ಥೆ ಇದೆ. ಅವುಗಳೆಂದರೆ

1. ಏಕವಚನ
2. ಬಹುವಚನ

### 1. ಏಕವಚನ

ವಸ್ತು, ವ್ಯಕ್ತಿ ಮತ್ತು ಪ್ರಾಣಿಗಳ ಸಂಖ್ಯೆ ಒಂದು ಎಂದು ಹೇಳುವುದೇ ಏಕವಚನ.

ಉದಾ: ಅವನು, ಅವಳು, ಅದು, ಹುಡುಗ, ಮರ, ಮನೆ, ತಾಯಿ, ಮಗು, ಶಾಲೆ ಇತ್ಯಾದಿ

### 2. ಬಹುವಚನ

ವಸ್ತು, ವ್ಯಕ್ತಿ ಮತ್ತು ಪ್ರಾಣಿಗಳ ಸಂಖ್ಯೆ ಒಂದಕ್ಕಿಂತ ಹೆಚ್ಚು ಎಂದು ಹೇಳುವುದೇ ಬಹುವಚನ.

ಉದಾ: ಅವರು, ಅವು, ಹುಡುಗರು, ಮರಗಳು, ಮನೆಗಳು, ತಾಯಂದಿರು, ಮಕ್ಕಳು, ಶಾಲೆಗಳು ಇತ್ಯಾದಿ

### ಬಹುವಚನ ಪ್ರತ್ಯಯಗಳು

ಬಹುವಚನದ ಪದಗಳೆಂದು ಸೂಚಿಸುವುದಕ್ಕಾಗಿ ಆಯಾ ಪದಗಳಿಗೆ ಹೊಂದಿಕೊಳ್ಳುವ ಪ್ರತ್ಯಯಗಳೇ ಬಹುವಚನ ಪ್ರತ್ಯಯಗಳು.

ಉದಾ: ಗಳು, ಅಂದಿರು, ಅರು, ರು, ವು, ಅವು.

ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಲಿಂಗ ವ್ಯವಸ್ಥೆ

## ದ್ವಿಲಿಂಗ ಪದ್ಧತಿ

ಎರಡೂ ಲಿಂಗದ ಅರ್ಥವನ್ನು ಕೊಡುವ ಪದಗಳು. ಇವು ಎರಡೆರಡು ಲಿಂಗದಲ್ಲಿ ಬಳಸುವ ಪದಗಳಾಗಿದ್ದು, ಇವುಗಳನ್ನು ಉಭಯಲಿಂಗಗಳು ಎಂದು ಕರೆಯುವರು. ದ್ವಿಲಿಂಗದಲ್ಲಿ ನಾಲ್ಕು ವಿಧಗಳಿವೆ. ಅವು

ಅ) ಪು–ಸ್ತ್ರೀಲಿಂಗ
ಬ) ಪುನ್ನಪುಂಸಕಲಿಂಗ
ಕ) ಸ್ತ್ರೀನಪುಂಸಕಲಿಂಗ
ಡ) ನಿತ್ಯ ನಪುಂಸಕಲಿಂಗ

**ಅ) ಪು–ಸ್ತ್ರೀಲಿಂಗ** – ಪುಲ್ಲಿಂಗ ಹಾಗೂ ಸ್ತ್ರೀಲಿಂಗದ ಅರ್ಥವೆರಡನ್ನು ಕೊಡುವಂತಹ ಪದಗಳು.

**ಉದಾ:** ಬಂದರು, ನಿಂತರು, ಅವರು, ಇವರು, ಎಲ್ಲರೂ, ಕೂಗಿದರು, ಹಿರಿಯರು,ಚಿಕ್ಕವರು, ಶಿಕ್ಷಕರು, ಓಡಿದರು, ನಡೆದರು ಇತ್ಯಾದಿ

**ಬ) ಪುನ್ನಪುಂಸಕಲಿಂಗ** – ಪುಲ್ಲಿಂಗ ಹಾಗೂ ನಪುಂಸಕಲಿಂಗಗಳ ಅರ್ಥವೆರಡನ್ನುಕೊಡುವಂತಹ ಪದಗಳು.

**ಉದಾ:** ಸೂರ್ಯ, ಚಂದ್ರ, ಶನಿ, ಶುಕ್ರ, ಮಾರುತ, ಬಸವ,ಗುರು, ಜನ, ವಸಂತ, ಆಳು, ಪುರುಷ ದೇವರನಾಮಗಳು ಇತ್ಯಾದಿ.

**ಕ) ಸ್ತ್ರೀನಪುಂಸಕಲಿಂಗ** – ಸ್ತ್ರೀಲಿಂಗ ಹಾಗೂ ನಪುಂಸಕಲಿಂಗಗಳ ಅರ್ಥವನ್ನು ಕೊಡುವಂತಹ ಪದಗಳು.

**ಉದಾ:** ಭೂಮಿ, ವಧು, ನರ್ಮದಾ, ಗಂಗಾ, ಕೃಷ್ಣಾ, ಕಾವೇರಿ ಮೊದಲಾದ ನದಿ, ಸ್ತ್ರೀ ದೇವರನಾಮಗಳು ಇತ್ಯಾದಿ

**ಡ) ನಿತ್ಯನಪುಂಸಕಲಿಂಗ** – ಯಾವಾಗಲೂ ನಪುಂಸಕ ಲಿಂಗದಲ್ಲಿಯೇ ಇರುವ ಪದಗಳು

**ಉದಾ:** ಶಿಶು, ಮಗು, ದಂಡು, ಜನ, ಸಭೆ, ಸಮಿತಿ, ಗುಂಪು, ಸೈನ್ಯ, ಮಕ್ಕಳು ಇತ್ಯಾದಿ

## ಕನ್ನಡ ಕಲಿ



ಡಾ. ಶಿವಾನಂದ ಟವಳಿ
shivu.tavali@gmail.com

# ಕ್ರಿಯಾಪದಗಳು

### 1. ಧಾತುಗಳು

ಯಾವುದೇ ಪ್ರತ್ಯಯವನ್ನು ಹೊಂದಿರದ ಕ್ರಿಯಾಪದದ ಮೂಲ ರೂಪವೇ ಧಾತು. ಇದಕ್ಕೆ 'ಕ್ರಿಯಾ ಪ್ರಕೃತಿ' ಎಂತಲೂ ಕರೆಯುವರು. ಧಾತುಗಳಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳಿವೆ.

ಉದಾ :– ಬರೆ, ಕೇಳು, ಮಾಡು, ಕೊಡು, ತಿನ್ನು, ಜಿಗಿ, ನಡೆ, ಕಲಿ, ಹೋಗು, ಬರು, ಹೀರು, ನಲಿ, ಕುಣಿ, ಓದು ಇತ್ಯಾದಿ

### ಧಾತುಗಳ ಪ್ರಕಾರಗಳು

**i. ಸಹಜ ಧಾತುಗಳು**

ಅ. ಸಕರ್ಮಕ ಧಾತುಗಳು
ಬ. ಅಕರ್ಮಕ ಧಾತುಗಳು

**ii. ಸಾಧಿತ ಧಾತುಗಳು**

**i. ಸಹಜ ಧಾತುಗಳು**

ಯಾವುದೇ ರೀತಿಯ ಪ್ರತ್ಯಯ ಸೇರಿರದ ಕ್ರಿಯಾಪದದ ಮೂಲ ರೂಪಗಳೇ 'ಸಹಜ ಧಾತುಗಳು.' ಇವುಗಳಿಗೆ 'ಮೂಲ ಧಾತುಗಳು' ಎಂತಲೂ ಕರೆಯುವರು. ಈ ಸಹಜ ಧಾತುಗಳಲ್ಲಿ ಮತ್ತೆ ಎರಡು ಪ್ರಕಾರಗಳಿವೆ.

**ಅ. ಸಕರ್ಮಕ ಧಾತುಗಳು–** ಕರ್ಮಪದವನ್ನು ಅಪೇಕ್ಷಿಸುವ ಧಾತುಗಳೇ ಸಕರ್ಮಕ ಧಾತುಗಳು. ಇವುಗಳಿಗೆ ಏನನ್ನು? ಯಾರನ್ನು? ಎಂಬ ಪ್ರಶ್ನೆ ಮಾಡಿದಾಗ ಉತ್ತರವು (ಕರ್ಮಪದ) ಸಿಗುತ್ತದೆ.

**ಉದಾ:** ತಿನ್ನು, ಬರೆ, ಕರೆ, ಹಾಡು, ತೀಡು, ಕೇಳು, ಆಡು, ತೋಡು, ಓದು, ಉಣ್ಣು, ಕುಡಿ, ಮಾಡು ಇತ್ಯಾದಿ

**ಬ. ಅಕರ್ಮಕ ಧಾತುಗಳು–** ಕರ್ಮಪದವನ್ನು ಅಪೇಕ್ಷಿಸದೇ ಇರುವ ಧಾತುಗಳೇ ಅಕರ್ಮಕ ಧಾತುಗಳು. ಇವುಗಳಿಗೆ ಏನನ್ನು? ಯಾರನ್ನು? ಎಂಬ ಪ್ರಶ್ನೆ ಮಾಡಿದಾಗ ಉತ್ತರವು (ಕರ್ಮಪದ) ಸಿಗುವುದಿಲ್ಲ.

ಉದಾ: ಬೀಳು, ಅಳು, ನಡೆ, ಅಳು, ನಗು, ಹುಟ್ಟು, ಓಡು, ಮಲಗು, ಹೋಗು, ನಾಚು, ಬದುಕು, ನಿಲ್ಲು, ಸೇರು ಇತ್ಯಾದಿ

**ವಿ.ಸೂ:** ಕೆಲವೊಮ್ಮೆ ಅಕರ್ಮಕ ಧಾತುಗಳಿಗೆ 'ಇಸು' ಪ್ರತ್ಯಯ ಹಚ್ಚಿದಾಗ ಅವು ಸಕರ್ಮಕ ಧಾತುಗಳಾಗುತ್ತವೆ.

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಪಲ್ಲಟಗಳು

ಪಲ್ಲಟ ಎಂದರೆ ಸ್ಥಾನ ಬದಲಾವಣೆ ಎಂದರ್ಥ. ಭಾಷೆಯನ್ನು ದಿನನಿತ್ಯ ಬಳಸುವಾಗ ಪದಗಳಲ್ಲಿನ ಪ್ರತ್ಯಯಗಳು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಬದಲಾವಣೆ ಹೊಂದುವುದನ್ನು 'ಪಲ್ಲಟ' ಎಂದು ಕರೆಯುವರು. ಅದು ವಿಭಕ್ತಿ, ಕಾಲ, ವಚನ, ಸ್ಥಾನಗಳ ಬದಲಾವಣೆಯಾಗಿರಬಹುದು. ಬದಲಾದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಕನ್ನಡ ಭಾಷೆಯಲ್ಲಿ ಉಂಟಾಗುವ ಪಲ್ಲಟಗಳನ್ನು ನಾಲ್ಕು ವಿಧಗಳಲ್ಲಿ ವಿಂಗಡಿಸಲಾಗಿದೆ.

### ಪಲ್ಲಟಗಳ ವಿಧಗಳು

1) ವಿಭಕ್ತಿ ಪಲ್ಲಟ
2) ಕಾಲಪಲ್ಲಟ
3) ವಚನ ಪಲ್ಲಟ
4) ಸ್ಥಾನಪಲ್ಲಟ

### 1) ವಿಭಕ್ತಿ ಪಲ್ಲಟ

ಭಾಷೆಯನ್ನು ದಿನನಿತ್ಯ ಮಾತನಾಡುವಾಗ ನಾಮಪ್ರಕೃತಿಗಳಿಗೆ ಸೇರಿಸುವ ವಿಭಕ್ತಿ ಪ್ರತ್ಯಯಗಳು ಒಂದು ವಿಭಕ್ತಿ ಪ್ರತ್ಯಯದ ಸ್ಥಾನದಿಂದ ಇನ್ನೊಂದು ವಿಭಕ್ತಿ ಪ್ರತ್ಯಯಕ್ಕೆ ಬದಲಾವಣೆ ಹೊಂದುವುದನ್ನು 'ವಿಭಕ್ತಿ ಪಲ್ಲಟ' ಎನ್ನುವರು. ಒಂದು ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಇನ್ನೊಂದು ವಿಭಕ್ತಿ ಪ್ರತ್ಯಯವನ್ನು ಬಳಸಿ ಮಾತನಾಡುವುದೇ ವಿಭಕ್ತಿ ಪಲ್ಲಟದ ಮುಖ್ಯ ಲಕ್ಷಣ. ಇಂತಹ ಪ್ರಯೋಗಕ್ಕೆ ವಿಭಕ್ತಿ ವಿಪರಿಣಾಮ ಎಂಬ ಹೆಸರೂ ಇದೆ. ವಿಭಕ್ತಿ ಪಲ್ಲಟವನ್ನು ಹಳಗನ್ನಡ ಹಾಗೂ ಹೊಸಗನ್ನಡದಲ್ಲಿ ಕಾಣುತ್ತೇವೆ.

**1. ದ್ವಿತೀಯಾ ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಷಷ್ಠಿ ವಿಭಕ್ತಿ ಪ್ರತ್ಯಯ**

ಉದಾ: ನಾನು ಯಾತ್ರೆಯನ್ನು ಮುಗಿಸಿದೆನು. (ದ್ವಿತೀಯಾ)
ನಾನು ಯಾತ್ರೆಯ ಮುಗಿಸಿದೆನು. (ಷಷ್ಠಿ) ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಿಭಕ್ತಿ ಪಲ್ಲಟ

**2. ದ್ವಿತೀಯಾ ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯ**

ಉದಾ: ಅವಳು ಹಾಡನ್ನು ಹಾಡಿದಳು. (ದ್ವಿತೀಯಾ)
ಅವಳು ಹಾಡು ಹಾಡಿದಳು. (ಪ್ರಥಮಾ)
ಅಮ್ಮ ಹಾಲನ್ನು ಕುಡಿಯಲು ಕೊಟ್ಟಳು. (ದ್ವಿತೀಯಾ)
ಅಮ್ಮ ಹಾಲು ಕುಡಿಯಲು ಕೊಟ್ಟಳು. (ಪ್ರಥಮಾ)

**3. ದ್ವಿತೀಯಾ ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯ**

ಉದಾ: ಶಂಕರನು ಶಾಲೆಯನ್ನು ಸೇರಿದನು. (ದ್ವಿತೀಯಾ)
ಶಂಕರನು ಶಾಲೆಗೆ ಸೇರಿದನು. (ಚತುರ್ಥಿ)
ಅವಳು ಮಗುವನ್ನು ಹೊಡೆದಳು. (ದ್ವಿತೀಯಾ)
ಅವಳು ಮಗುವಿಗೆ ಹೊಡೆದಳು. (ಚತುರ್ಥಿ)

**4. ತೃತೀಯಾ ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯ**

ಉದಾ: ಹೂವಿನಿಂದ ಅಲಂಕರಿಸು. (ತೃತೀಯಾ)
ಹೂವನ್ನು ಅಲಂಕರಿಸು. (ದ್ವಿತೀಯಾ)
ಸೆರೆಯಿಂದ ಬಿಡಿಸಿದನು. (ತೃತೀಯಾ)
ಸೆರೆಯನ್ನು ಬಿಡಿಸಿದನು. (ದ್ವಿತೀಯಾ)

**5. ತೃತೀಯಾ ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯ**

ಉದಾ: ಕೈಯಿಂದ ಮಾಡಿದ ಅಡುಗೆ. (ತೃತೀಯಾ)
ಕೈಯಲ್ಲಿ ಮಾಡಿದ ಅಡುಗೆ. (ಸಪ್ತಮಿ)
ಪೆನ್ನಿನಿಂದ ಬರೆದನು. (ತೃತೀಯಾ)
ಪೆನ್ನಲ್ಲಿ ಬರೆದನು. (ಸಪ್ತಮಿ) ■

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಪ್ರಕೃತಿ ಭಾವ

ಭಾವಸೂಚಕಾವ್ಯಯ, ಪ್ಲುತ ಸ್ವರ, ಅನುಕರುಣಾವ್ಯಯ, ಅವಧಾರಣೆ ಮುಂತಾದವುಗಳ ಮುಂದೆ ಸ್ವರ ಬಂದಾಗ ನಡೆಯಬೇಕಾದ ಸಂಧಿಕಾರ್ಯವು ನಡೆಯದಿರುವುದೇ ಪ್ರಕೃತಿ ಭಾವ. (ಸಂಧಿ ದೋಷ) ಉದಾ:

**ಅಬ್ಬಾ + ಅದು ಹಾವೇ = ಅಬ್ಬಾ ಅದು ಹಾವೇ**
**ಸರಸರ + ಎಂದು = ಸರಸರ ಎಂದು**
**ಅಯ್ಯೋ + ದೇವರೆ = ಅಯ್ಯೋ ದೇವರೆ**
**ಓಹೋ + ಅಜ್ಜಿ ಬಂದರೇ = ಓಹೋ ಅಜ್ಜಿ ಬಂದರೇ**
**ಅಕ್ಕಾ + ಇತ್ತ ಬಾ = ಅಕ್ಕಾ ಇತ್ತ ಬಾ**

ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿದಾಗ ಸ್ವರದ ಮುಂದೆ ಸ್ವರ ಬಂದಿರುವುದರಿಂದ ಲೋಪ ಅಥವಾ ಆಗಮ ಸಂಧಿ ಆಗಬೇಕಿತ್ತು. ಹಾಗೆ ಸಂಧಿ ಮಾಡಿದರೆ ಅರ್ಥ ಕೆಡುತ್ತದೆ. ಹಾಗಾಗಿ ಸಂಧಿ ಕಾರ್ಯ ಮಾಡುವುದಿಲ್ಲ. ಪ್ಲುತ ಸ್ವರದ ಮುಂದೆ, ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ ಸಂಧಿ ಮಾಡಬಾರದು. ಹೀಗೆಯೇ ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇದ್ದ ಹಾಗೆಯೇ ಇರುವುದೇ ಪ್ರಕೃತಿ ಭಾವ.

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ತತ್ಸಮ-ತದ್ಭವಗಳಾಗುವ ಬಗೆ

ಸಂಸ್ಕೃತ ಪದಗಳನ್ನು ಕನ್ನಡ ಭಾಷೆಯಲ್ಲಿ ಬಳಸುವಾಗ ಮಾಡಿಕೊಂಡ ಬದಲಾವಣೆಯನ್ನು ಅಥವಾ ಹೊಂದಿದ ವಿಕಾರವನ್ನು ವಿವಿಧ ರೀತಿಯಲ್ಲಿ ಗುರುತಿಸಬಹುದು. ಅವು ಈ ಕೆಳಗಿನಂತಿವೆ.

**1) ಸಂಸ್ಕೃತ ಪದದಲ್ಲಿನ ಕೆಲವು ಮಹಾ ಪ್ರಾಣ ಅಕ್ಷರಗಳು ಕನ್ನಡದಲ್ಲಿ ಅಲ್ಪಪ್ರಾಣ ಅಕ್ಷರಗಳಾಗುವವು.**

| ತತ್ಸಮ-ತದ್ಭವ | ಘಂಟಾ-ಗಂಟೆ |
|---|---|
| ಛಲ-ಚಲ | ಕಥಾ-ಕತೆ |
| ಶುಂಠಿ-ಸುಂಟಿ | ಅರ್ಘ-ಅಗ್ಗ |
| ಛಂದ-ಚಂದ | |

**2) ಸಂಸ್ಕೃತ ಪದದಲ್ಲಿನ 'ಸ್' ವ್ಯಂಜನಾಂತವು ಕನ್ನಡದಲ್ಲಿ ದ್ವಿತ್ವದೊಡನೆ 'ಉ'ಕಾರ ಹೊಂದುತ್ತವೆ.**

| ತತ್ಸಮ-ತದ್ಭವ | ಶ್ರೇಯಸ್ -ಶ್ರೇಯಸ್ಸು |
|---|---|
| ತೇಜಸ್-ತೇಜಸ್ಸು | ತಪಸ್-ತಪಸ್ಸು |
| ಯಶಸ್-ಯಶಸ್ಸು | ವಯಸ್-ವಯಸ್ಸು |
| ಶಿರಸ್ - ಶಿರಸ್ಸು | |

**3. ಸಂಸ್ಕೃತ ಪದದಲ್ಲಿನ ಕೆಲವು ವ್ಯಂಜನಾಂತಗಳು ಕನ್ನಡದಲ್ಲಿ ದ್ವಿತ್ವದೊಡನೆ 'ಉ' ಕಾರ ಹೊಂದುವವು.**

| ತತ್ಸಮ-ತದ್ಭವ | ವಿಪತ್-ವಿಪತ್ತು |
|---|---|
| ದಿಕ್-ದಿಕ್ಕು | ಮೆಲ್-ಮೆಲ್ಲು |
| ಹೊನ್-ಹೊನ್ನು | ನಿಲ್-ನಿಲ್ಲು |
| ತಿನ್-ತಿನ್ನು | |

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ವಿಭಕ್ತಿ ವ್ಯವಸ್ಥೆ

### ಕಾರಕಗಳು

'ಕ್ರಿಯಾಜನಕಂ ಕಾರಕಂ' ಎಂಬ ವೈಯಾಕರಣರು ಹೇಳುವಂತೆ 'ಕ್ರಿಯೆಯನ್ನುಂಟು ಮಾಡುವುದೇ ಕಾರಕ'.
ವಾಕ್ಯದಲ್ಲಿಯ ನಾಮವಿಭಕ್ತಿಗಳ ಕ್ರಿಯೆಯ ಅರ್ಥವನ್ನುಂಟು ಮಾಡುವಂತವುಗಳೇ ಕಾರಕಗಳು. ನಾಮಪದ ಹಾಗೂ ಕ್ರಿಯಾಪದದ ನಡುವಿನ ಕ್ರಿಯಾ ಸಂಬಂಧಾರ್ಥವನ್ನು ತಿಳಿಸುವಲ್ಲಿ ಕಾರಕವು ಮೂಲವಾಗಿದೆ. ಪ್ರತಿಯೊಂದು ವಿಭಕ್ತಿಯು ಒಂದೊಂದು ಕಾರಕ ಸಂಬಂಧವನ್ನು ಸೂಚಿಸುತ್ತವೆ. ವಿಭಕ್ತಿ ಪ್ರತ್ಯಯಗಳು ಅವು ಹೊಂದಿರುವ ಕಾರಕಗಳನ್ನು ಈ ಕೆಳಗೆ ನೀಡಲಾಗಿದೆ.

| ವಿಭಕ್ತಿ ಪ್ರತ್ಯಯ | ಕಾರಕಗಳು |
|---|---|
| ಪ್ರಥಮಾ | ಕರ್ತೃ |
| ದ್ವಿತೀಯಾ | ಕರ್ಮ |
| ತೃತೀಯಾ | ಕರಣ |
| ಚತುರ್ಥಿ | ಸಂಪ್ರದಾನ |
| ಪಂಚಮಿ | ಅಪಾದಾನ |
| ಷಷ್ಠಿ | ಸಂಬಂಧ |
| ಸಪ್ತಮಿ | ಅಧಿಕರಣ |
| ಸಂಭೋಧನಾ | ಅಭಿಮುಖೀಕರಣ |

ಸಂಬೋಧನೆಯನ್ನು ಹೊರತುಪಡಿಸಿ ಉಳಿದ ಏಳು ವಿಭಕ್ತಿಗಳಿಗೆ ಏಳು ಕಾರಕಗಳನ್ನು ಕಾಣುತ್ತೇವೆ. ಸಂಬೋಧನೆಗೆ ಕಾರಕಾರ್ಥವು ಇಲ್ಲವೆಂಬುದು ಹಲವರ ವಾದ. ಅದಾಗಿಯೂ ಅಭಿಮುಖೀಕರಣ ಸಂಬೋಧನೆಯ ಕಾರಕಾರ್ಥವೆಂದು ಇನ್ನು ಹಲವರು ಹೇಳುತ್ತಾರೆ.

### ವಿಭಕ್ತಿ ವ್ಯವಸ್ಥೆಗೆ ಸಂಬಂಧಿಸಿದ ಬಹು ಆಯ್ಕೆಯ ಪ್ರಶ್ನೋತ್ತರಗಳು

**1) 'ಕಟ್ಟಡವನ್ನು' ಎಂಬ ಪದದಲ್ಲಿ ಇರುವ ವಿಭಕ್ತಿ ಪ್ರತ್ಯಯ**

ಅ. ಪ್ರಥಮಾ  ಬ. ದ್ವಿತೀಯಾ
ಕ. ತೃತೀಯಾ  ಡ. ಷಷ್ಠಿ  [ಬ]

**2) ಇದು ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ**

ಅ. ಹೇಳಿದ  ಬ. ಬರಲು
ಕ. ಮರದಲ್ಲಿ  ಡ. ಮನೆತನ  [ಕ]

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಲಿಂಗ ವ್ಯವಸ್ಥೆ

ಲಿಂಗವೆಂಬುದು ನಾಮಪದದ ರೂಪಾಂತರವಾಗಿದ್ದು ಜ್ಞಾನ–ಅಜ್ಞಾನದ ಕುರುಹೇ ಲಿಂಗ. ಕನ್ನಡ ಭಾಷೆಯಲ್ಲಿ ಲಿಂಗವೆಂಬ ಪದ ಬಳಕೆಯನ್ನು ಮನುಷ್ಯ ವರ್ಗಕ್ಕೆ ಮಾತ್ರ ಮಾಡಲಾಗುತ್ತದೆ. ಲಿಂಗವು ನಾಮಪದಗಳ ಸ್ವರೂಪವನ್ನು ವಿಭಜಿಸಿ ಅವು ಯಾವ ವರ್ಗಕ್ಕೆ ಸೇರುತ್ತವೆಂಬುದನ್ನು ತಿಳಿಸುತ್ತದೆ. ಒಂದೊಂದು ಭಾಷೆಯಲ್ಲಿ ಒಂದೊಂದು ರೀತಿಯ ಲಿಂಗ ವ್ಯವಸ್ಥೆ ಇದೆ.

## ಲಿಂಗವ್ಯವಸ್ಥೆಯ ವಿಧಗಳು

ಕೇಶಿರಾಜನು ಸಂಸ್ಕೃತ ವ್ಯಾಕರಣವನ್ನು ಅನುಸರಿಸಿ ಕನ್ನಡದಲ್ಲಿ 'ಲಿಂಗವೊಂಬುತ್ತುತೆರಂ' ಎಂದು ಚರ್ಚೆಗೆ ನಾಂದಿ ಹಾಡಿದನು. ಆದರೆ ಅನಂತರ ಆತನೇ 'ಕನ್ನಡದಲ್ಲಿ ಮೂರು ಲಿಂಗಗಳು ಮುಖ್ಯ, ಉಳಿದ ಆರು ಲಿಂಗಗಳು ಅಷ್ಟಾಗಿ ಬಳಕೆಯಲ್ಲಿ ಇಲ್ಲ' ಎಂದನು. ಕನ್ನಡದ ಲಿಂಗ ವ್ಯವಸ್ಥೆಯಲ್ಲಿ ಮೂರು ವಿಧಗಳಿವೆ. ಅವು

1. ಪುಲ್ಲಿಂಗ 2. ಸ್ತ್ರೀಲಿಂಗ 3. ನಪುಂಸಕಲಿಂಗ

### 1. ಪುಲ್ಲಿಂಗ

ಗಂಡು ಎಂಬರ್ಥವನ್ನು ಸೂಚಿಸುವ ಪುರುಷ ವಾಚಕ ಪದಗಳೇ ಪುಲ್ಲಿಂಗ.

**ಉದಾ:** ಅವನು, ಇವನು, ಸೋಮ, ಭೀಮ, ರಾಮ, ರಮೇಶ, ರಾಜ, ರಾಘವ ಇತ್ಯಾದಿ

### 2. ಸ್ತ್ರೀಲಿಂಗ

ಹೆಣ್ಣು ಎಂಬರ್ಥವನ್ನು ಸೂಚಿಸುವ ಸ್ತ್ರೀವಾಚಕ ಪದಗಳೇ ಸ್ತ್ರೀಲಿಂಗ.

**ಉದಾ:** ಅವಳು, ಇವಳು, ಕುಂತಿ, ವಿದುಷಿ, ರಾಣಿ, ರಾಧಾ, ಸೀತೆ, ಪ್ರೇಮಾ ಇತ್ಯಾದಿ

### 3. ನಪುಂಸಕಲಿಂಗ

ಸ್ತ್ರೀ–ಪುರುಷ ವಾಚಕಗಳನ್ನು ಹೊರತಪಡಿಸಿ ಉಳಿದೆಲ್ಲ ಸಜೀವ ಹಾಗೂ ನಿರ್ಜೀವ ವಸ್ತುಗಳನ್ನು ಸೂಚಿಸುವ ಪದಗಳೇ ನಪುಂಸಕ ಲಿಂಗಗಳು.

**ಉದಾ:** ಗಿಳಿ, ಹಸು, ಎಮ್ಮೆ, ಎತ್ತು, ಟಗರು, ಹಸು, ಹಕ್ಕಿ, ಹಲಸು, ಬಳಪ, ಪುಸ್ತಕ, ಮರ, ಲೇಖನಿ, ಯಂತ್ರ ಇತ್ಯಾದಿ.

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅಧ್ಯಾಹಾರ

ಅಧ್ಯಾಹಾರ ಎಂದರೆ ಊಹಿಸಿ ಹೇಳುವುದು ಎಂದರ್ಥ. ಒಂದು ವಾಕ್ಯದಲ್ಲಿ ಬಿಟ್ಟುಹೋದ ಪದ, ಪ್ರತ್ಯಯ, ಅಕ್ಷರ ಅಥವಾ ಇಡೀ ವಾಕ್ಯ ಸಂದರ್ಭವನ್ನು ಆ ವಾಕ್ಯದಲ್ಲಿರುವ ಇತರ ಪದಗಳ ಸಹಾಯದಿಂದ ಊಹಿಸಿ ಹೇಳುವುದಕ್ಕೆ 'ಅಧ್ಯಾಹಾರ' ಎನ್ನುವರು.

ಸಾಮಾನ್ಯವಾಗಿ ಇಬ್ಬರ ಸಂಭಾಷಣೆಯಲ್ಲಿ ಪರಸ್ಪರ ಕೆಲವು ವಿಚಾರಗಳು ಮೊದಲೇ ಗೊತ್ತಿರುವುದರಿಂದ ವ್ಯಾಕರಣಬದ್ಧವಾಗಿ ಬಳಸಬೇಕಾದ ಪದಗಳನ್ನು ಮಾತನಾಡುವಾಗ ಬಳಸುವುದಿಲ್ಲ. ಹೀಗೆ ಬಿಟ್ಟಿರುವ ಪದವನ್ನು ಕಲ್ಪಿಸಿ ಅಥವಾ ಊಹಿಸಿ ಹೇಳುವುದಕ್ಕೆ ಅಧ್ಯಾಹಾರ ಎಂದರೆ ಹಾಗೇ ಊಹಿಸಿ ಹೇಳಿದ ಪದಕ್ಕೆ 'ಅಧ್ಯಾಹೃತ ಅಥವಾ ಅಧ್ಯಾರೋಹಿತ' ಎಂದು ಕರೆಯುವರು.

ಉದಾ : **ನಿಜವಾಗಿಯೂ ಬರುತ್ತಿದ್ದೆ. (ನಾನು)**

**(ಇಲ್ಲಿ 'ನಾನು' ಎಂದು ಊಹಿಸಿಕೊಳ್ಳಲಾಗಿದೆ)**

- **ಅವಳ ನಾಸಿಕವು ಸಂಪಿಗೆಯಂತೆ. (ಸುಂದರವಾಗಿದೆ) (ಇಲ್ಲಿ 'ಸುಂದರವಾಗಿದೆ' ಎಂದು ಊಹಿಸಿಕೊಳ್ಳಲಾಗಿದೆ)**
- **ನೀನು (ನಾಳೆ) ಬೆಂಗಳೂರಿಗೆ ಹೋಗು. (ಬೇಕು) (ಇಲ್ಲಿ 'ನಾಳೆ, ಬೇಕು' ಎಂಬ ಪದಗಳನ್ನು ಊಹಿಸಿಕೊಳ್ಳಲಾಗಿದೆ)**
- **(ಅವನು) ಊರಿನಿಂದ (ಮನೆಗೆ) ಬಂದನು. (ಇಲ್ಲಿ 'ಅವನು, ಮನೆಗೆ' ಎಂಬ ಪದಗಳನ್ನು ಊಹಿಸಿಕೊಳ್ಳಲಾಗಿದೆ)**
- **ನನ್ನ ಟೋಪಿ ಎಲ್ಲಿ ? (ಇದೆ) (ಇಲ್ಲಿ 'ಇದೆ' ಎಂದು ಊಹಿಸಿಕೊಳ್ಳಲಾಗಿದೆ)** ▪

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ಅಧ್ಯಾಹಾರದ ವಿಧಗಳು

ಬಿಟ್ಟಿರುವ ಪದವನ್ನು ಕಲ್ಪಿಸಿ ಅಥವಾ ಊಹಿಸಿ ಹೇಳುವುದಕ್ಕೆ ಅಧ್ಯಾಹಾರ ಎಂದರೆ ಹಾಗೇ ಊಹಿಸಿ ಹೇಳಿದ ಪದಕ್ಕೆ 'ಅಧ್ಯಾಹೃತ ಅಥವಾ ಅಧ್ಯಾರೋಹಿತ'ವಾಗಿದೆ. ಒಂದು ವಾಕ್ಯದಲ್ಲಿ ಯಾವ ಪದ ಬಿಟ್ಟುಹೋಗಿದೆ? ಎಂಬುದನ್ನು ಅವಲೋಕಿಸಿ ಅಧ್ಯಾಹಾರದಲ್ಲಿ ಕರ್ತೃಪದ, ಕರ್ಮಪದ ಹಾಗೂ ಕ್ರಿಯಾಪದ ಅಧ್ಯಾಹಾರ ಎಂಬ ಮೂರು ಪ್ರಕಾರಗಳನ್ನು ಮಾಡಲಾಗಿದೆ.

### 1. ಕರ್ತೃಪದ ಅಧ್ಯಾಹಾರ

ಉದಾ: 1) (ಅವಳು) ಈಗ ಹೋದಳು.
2) (ಅವನು) ಊಟ ಮಾಡಿದನು.
3) (ಅದು) ಮರವನ್ನು ಏರಿತು.
4) (ಅವರು) ಹಾಡನ್ನು ಹಾಡಿದರು.

### 2) ಕರ್ಮಪದ ಅಧ್ಯಾಹಾರ

ಉದಾ: 1) ಮಕ್ಕಳು (ಆಟವನ್ನು) ಆಡುತ್ತಿದ್ದಾರೆ.
2) ಗುರುಗಳು (ಪಾಠವನ್ನು) ಹೇಳಿದರು.
3) ರಾಮನು (ರಾವಣನನ್ನು) ಕೊಂದನು.
4) ಹಕ್ಕಿಯು (ಆಗಸದಲ್ಲಿ) ಹಾರುತ್ತಿದೆ.

### 3) ಕ್ರಿಯಾಪದ ಅಧ್ಯಾಹಾರ

ಉದಾ: 1) ಅವಳು ಮನೆಯಲ್ಲಿ (ಇದ್ದಾಳೆ)
2) ಅವನು ತುಂಬ ಜಾಣ. (ಆಗಿದ್ದಾನೆ)
3) ನನಗೆ ಇಲ್ಲಿ ಇರಲು ಬಹಳ ತೊಂದರೆ (ಆಗುತ್ತದೆ)
4) ಅದು ಮರದಲ್ಲಿ (ಇದೆ)

## ಕನ್ನಡ ಕಲಿ

▪ ಡಾ. ಶಿವಾನಂದ ಟವಳಿ
shivu.tavali@gmail.com



# ವಾಕ್ಯಗಳು

## ವಾಕ್ಯ ಪರಿವರ್ತನೆ

ಸಾಮಾನ್ಯ, ಸಂಯೋಜಿತ ಹಾಗೂ ಮಿಶ್ರ ವಾಕ್ಯದಲ್ಲಿನ ಯಾವುದೊಂದು ವಾಕ್ಯವನ್ನು ಅದರಲ್ಲಿ ಕೆಲವು ಅರ್ಥವ್ಯತ್ಯಾಸಗಳನ್ನು ಮಾಡಿ ಬೇರೆ ವಾಕ್ಯವನ್ನು ರಚಿಸಬಹುದು. ಈ ರೀತಿಯ ವಾಕ್ಯಗಳ ಬದಲಾವಣೆಗೆ ವಾಕ್ಯ ಪರಿವರ್ತನೆ ಎಂದು ಕರೆಯುವರು. ವಾಕ್ಯಗಳ ರೂಪ, ಅರ್ಥಗಳನ್ನು ಬದಲಿಸುವ ಕಾರ್ಯ ನಡೆಯುತ್ತದೆ.

ವಾಕ್ಯ ಪರಿವರ್ತನೆ ಮಾಡುವಾಗ ಸಂಯೋಜಿತ ಹಾಗೂ ಮಿಶ್ರ ವಾಕ್ಯಗಳಲ್ಲಿರುವ ಪೂರ್ಣ ಕ್ರಿಯಾಪದಗಳಿಗೆ ಸಾಪೇಕ್ಷ (ಅಪೂರ್ಣ) ಕ್ರಿಯಾರೂಪ, ಕೃದಂತನಾಮ, ಕೃದಂತ ಭಾವನಾಮ ಇವುಗಳನ್ನು ಉಪಯೋಗಿಸಿ ಸಾಮಾನ್ಯ ವಾಕ್ಯ ರಚನೆ ಮಾಡಬಹುದು.

ಉದಾ:

▪ ಶಂಕರನು ನಿತ್ಯ ಶಾಲೆಗೆ ಹೋದರೂ ಅಲ್ಲಿ ಅವನು ಕಲಿಯಲಿಲ್ಲ. (ಸಾಮಾನ್ಯ ವಾಕ್ಯ)

ಶಂಕರನು ನಿತ್ಯ ಶಾಲೆಗೆ ಹೋದನು ಆದರೆ ಅಲ್ಲಿ ಅವನು ಕಲಿಯಲಿಲ್ಲ. (ಸಂಯೋಜಿತ ವಾಕ್ಯ)

ಶಂಕರನು ನಿತ್ಯ ಶಾಲೆಗೆ ಹೋಗಿ, ಅವನು ಅಲ್ಲಿ ಕಲಿಯಲಿಲ್ಲ. (ಮಿಶ್ರ ವಾಕ್ಯ)

▪ ರೈಲು ಹಳಿ ತಪ್ಪಿದ ಸುದ್ದಿ ಕೇಳಿ ಜನರು ಓಡಿ ಬಂದರು. (ಸಾಮಾನ್ಯ ವಾಕ್ಯ)

ರೈಲು ಹಳಿ ತಪ್ಪಿತು ಎಂಬ ಸುದ್ದಿ ಕೇಳಿ ಜನರು ಓಡಿ ಬಂದರು. (ಸಂಯೋಜಿತ ವಾಕ್ಯ)

ರೈಲು ಹಳಿ ತಪ್ಪಿತೆಂಬ ಸುದ್ದಿ ಕೇಳಿ ಜನರು ಓಡಿ ಬಂದರು. (ಮಿಶ್ರ ವಾಕ್ಯ)

▪ ಕೃಷ್ಣನ ಕೃಪೆಯು ಪಾಂಡವರು ಯುದ್ಧದಲ್ಲಿ ಗೆಲ್ಲಲು ಸಹಾಯಕವಾಯಿತು. (ಸಾಮಾನ್ಯ ವಾಕ್ಯ)

ಕೃಷ್ಣನು ಕೃಪೆ ತೋರಿದ್ದರಿಂದ ಪಾಂಡವರ ಯುದ್ಧದಲ್ಲಿ ಗೆಲ್ಲಲು ಸಹಾಯಕವಾಯಿತು. (ಸಂಯೋಜಿತ ವಾಕ್ಯ)

ಕೃಷ್ಣನು ಕೃಪೆ ತೋರಿದ್ದು ಪಾಂಡವರು ಯುದ್ಧದಲ್ಲಿ ಗೆಲ್ಲಲು ಸಹಾಯಕವಾಯಿತು. (ಮಿಶ್ರ ವಾಕ್ಯ) ▪

ಕನ್ನಡ ಕಲಿ



■ ಡಾ. ಶಿವಾನಂದ ಟವಳಿ
shivu.tavali@gmail.com

# ಕರ್ತೃ–ಕರ್ಮ–ಕ್ರಿಯಾಪದಗಳು

ಕನ್ನಡ ಭಾಷೆಯ ವ್ಯಾಕರಣದ ನಿಯಮದಂತೆ ಒಂದು ವಾಕ್ಯದಲ್ಲಿ ಕರ್ತೃ, ಕರ್ಮ ಹಾಗೂ ಕ್ರಿಯಾಪದಗಳು ಇರುತ್ತವೆ. ಕರ್ತೃ, ಕರ್ಮ, ಕ್ರಿಯಾಪದಗಳಿಂದ ಒಂದು ವಾಕ್ಯದ ನಿರ್ಮಾಣವಾಗಿ, ಆಯಾ ಪದಗಳಿಗೆ ಸಂಬಂಧಿಸಿದಂತೆ ವಿಶೇಷಣಗಳು ಆಯಾಪದಗಳ ಆದಿಯಲ್ಲಿ ಬರುತ್ತವೆ. ಕನ್ನಡದ ವಾಕ್ಯಗಳಲ್ಲಿ ಮೊದಲಿಗೆ ಕರ್ತೃಪದ, ತದನಂತರ ಕರ್ಮಪದ ಕೊನೆಯಲ್ಲಿ ಕ್ರಿಯಾಪದ ಬರುತ್ತದೆ.

ಕನ್ನಡ ಭಾಷೆಯ ವ್ಯಾಕರಣದಂತೆ ಒಂದು ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳು ಇರುವಿಕೆ ಅತ್ಯವಶ್ಯಕ. ಇವುಗಳಿಂದ ಅರ್ಥಪೂರ್ಣ ವಾಕ್ಯದ ನಿರ್ಮಾಣವಾಗುತ್ತವೆ. ಕರ್ತೃಪದ ಹಾಗೂ ಕರ್ಮಪದವನ್ನು ಆಯ್ಕೆ ಮಾಡುವಾಗ ಕ್ರಿಯಾಪದವನ್ನು ಏಕವಚನ, ಬಹುವಚನಗಳಲ್ಲಿ ನಾನಾ ವಿಧಗಳಲ್ಲಿ ಪ್ರಶ್ನಿಸಬೇಕು. ದೊರೆತ ಉತ್ತರ ಕರ್ಮ, ಕರ್ತೃಪದವಾದರೆ ಕ್ರಿಯೆಯನ್ನು ಸೂಚಿಸುವುದು ಕ್ರಿಯಾಪದವಾಗಿರುತ್ತವೆ.

## ಕರ್ತೃಪದ

ಕರ್ತೃಪದದ ಆಯ್ಕೆಗೆ ಈ ಕೆಳಗಿನಂತೆ ಏಕವಚನ ಹಾಗೂ ಬಹುವಚನಗಳಲ್ಲಿ ಪ್ರಶ್ನಿಸಬೇಕು. ಪ್ರಶ್ನೆ ಮಾಡಿದಾಗ ಯಾವ ಪ್ರಶ್ನೆಗೆ ಯಾವ ಪದದಿಂದ ಉತ್ತರ ದೊರೆಯುವುದೋ ಅದು ಕರ್ತೃಪದವಾಗಿರುತ್ತದೆ.

| ವಚನ/ಲಿಂಗ | ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|---|
| ಏಕವಚನ | ಯಾವನು? | ಯಾವಳು? | ಯಾವುದು? ಏನು? |
| ಬಹುವಚನ | ಯಾರು? | ಯಾರು? | ಯಾವವು? ಏನು? |

ಈ ಮೇಲ್ಕಂಡ ಪ್ರಶ್ನಾರ್ಥಕ ಪದಗಳನ್ನು ಬಳಕೆ ಮಾಡಿದಾಗ ದೊರೆಯುವ ಉತ್ತರವು ಕರ್ತೃಪದವಾಗಿರುತ್ತದೆ.

ಉದಾ: ರಾಮಣ್ಣನು ಹೊಲಕ್ಕೆ ಹೋದನು (ಮೂಲವಾಕ್ಯ)

ಪ್ರಶ್ನೆ– **ಯಾವನು ಹೊಲಕ್ಕೆ ಹೋದನು?** ■

ಉತ್ತರ– ರಾಮಣ್ಣನು (ಕರ್ತೃಪದ)

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಅವ್ಯಯಗಳು

### 7) ಕ್ರಿಯಾರ್ಥಕ ಅವ್ಯಯಗಳು

ಯಾವುದೇ ವ್ಯತ್ಯಾಸವನ್ನು ಹೊಂದದೇ ಸಂಪೂರ್ಣವಾಗಿ ಕ್ರಿಯಾಪದ ಅರ್ಥವನ್ನು ನೀಡುವ ಪದಗಳಿಗೆ ಕ್ರಿಯಾರ್ಥಕ ಅವ್ಯಯ ಎಂದು ಹೆಸರು. ವಾಕ್ಯದಲ್ಲಿ ಕ್ರಿಯಾಪದಗಳ ಸ್ಥಾನದಲ್ಲಿದ್ದು. ಯಾವ ಪ್ರತ್ಯಯದ ನೆರವಿಲ್ಲದೆ ಮೂಲಧಾತುವಿನಂತೆ ಉಪಯೋಗವಾಗುತ್ತವೆ. ಇವುಗಳಿಗೆ ಕ್ರಿಯಾವಾಚಕಾವ್ಯಯ ಎಂಬ ಹೆಸರೂ ಇದೆ.

ಉದಾ: **ಸಾಕು, ಬೇಕು, ಉಂಟು, ಅಲ್ಲ, ಇಲ್ಲ, ಬೇಡ, ಉಂಟು ಇತ್ಯಾದಿ**

### 8) ಸಂಬೋಧಕಾವ್ಯಯಗಳು

ಯಾರನ್ನಾದರೂ ಕರೆಯುವಾಗ ಉಪಯೋಗಿಸುವ ಅರ್ಥವಿರದ ಪದಗಳನ್ನು 'ಸಂಬೋಧಕಾವ್ಯಯ' ಎಂದು ಕರೆಯುವರು.

ಉದಾ: **ಎಲೇ, ಎಲೋ, ಎಲೌ, ಓ, ಎಲಾ, ಲೇ, ಏ ಇತ್ಯಾದಿ**

### 9) ಪ್ರಶ್ನಾರ್ಥಕಾವ್ಯಯಗಳು

ಪ್ರಶ್ನಿಸುವಾಗ, ಪ್ರಶ್ನೆ ಮಾಡುವಾಗ ಉಪಯೋಗಿಸುವ ಪದಗಳನ್ನು 'ಪ್ರಶ್ನಾರ್ಥಕಾವ್ಯಯ' ಎನ್ನುವರು. ಈ ಪದಗಳಲ್ಲಿ ಎ, ಏ, ಓ, ಆ, ಏನು? ಎಂಬ ಪ್ರತ್ಯಯ ಕೂಡ ಪ್ರಶ್ನಾರ್ಥವನ್ನು ಸೂಚಿಸುತ್ತವೆ.

ಉದಾ: ಬಂದನೆ?, ನಿಂತರೇ?, ಸಿಕ್ಕಿತೋ?, ನಾನಾ?, ಹೋದರೇನು?, ಬಂದರೇ?, ಬಂದಳೇ?, ಬಂದೆಯಾ? ಇತ್ಯಾದಿ

### 10) ಅವಧರಣಾರ್ಥಕಾವ್ಯಯಗಳು

ನಿಶ್ಚಯ ಹಾಗೂ ನಿರ್ಣಯವನ್ನು ಸೂಚಿಸುವ ಪದಗಳು. ಅವಧರಣ ಎಂದರೆ ನಿಶ್ಚಯಿಸು, ನಿರ್ಧರಿಸು ಎಂದರ್ಥ. ಹಲವು ವಸ್ತುಗಳಲ್ಲಿ ಒಂದನ್ನು ನಿರ್ಧರಿಸಿ ಹೇಳುವಾಗ ನಿಶ್ಚಯಾರ್ಥದಲ್ಲಿ ಬಳಕೆಯಾಗುವ ಪದಗಳನ್ನು 'ಅವಧರಣಾರ್ಥಕಾವ್ಯಯ' ಎನ್ನುವರು. ಎ, ಏ ಪ್ರತ್ಯಯಗಳು ನಿಶ್ಚಯಾರ್ಥವನ್ನು ಸೂಚಿಸುತ್ತವೆ

ಉದಾ: **ಅದೇ, ಅವರೇ, ನೀವೇ, ನಾನೇ, ಅವಳೇ, ಅವನೇ ಇತ್ಯಾದಿ**

# ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

## ಕರ್ತೃ–ಕರ್ಮ–ಕ್ರಿಯಾಪದ ವಿಚಾರಗಳು

### ಕರ್ಮಪದ

ವಾಕ್ಯದಲ್ಲಿನ ಕರ್ಮಪದ ಗುರುತಿಸಬೇಕಾದರೆ ಈ ಕೆಳಗಿನಂತೆ ಏಕವಚನ, ಬಹುವಚನಗಳಲ್ಲಿ ಪ್ರಶ್ನಿಸಬೇಕು. ಪ್ರಶ್ನೆ ಮಾಡಿದಾಗ ಯಾವ ಪ್ರಶ್ನೆಗೆ ಯಾವ ಪದದಿಂದ ಉತ್ತರ ದೊರೆಯುವುದೋ ಅದು ಕರ್ಮಪದವಾಗಿರುತ್ತದೆ.

| ವಚನ/ಲಿಂಗ | ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|---|
| ಏಕವಚನ | ಯಾವನನ್ನು? | ಯಾವಳನ್ನು? | ಯಾವುದನ್ನು? ಏನನ್ನು? |
| ಬಹುವಚನ | ಯಾರನ್ನು? | ಯಾರನ್ನು ? | ಯಾವನ್ನು ? |

ಈ ಮೇಲ್ಕಂಡ ಪ್ರಶ್ನಾರ್ಥಕ ಪದಗಳನ್ನು ಬಳಕೆ ಮಾಡಿದಾಗ ದೊರೆಯುವ ಉತ್ತರವು ಕರ್ಮಪದವಾಗಿರುತ್ತದೆ.

ಉದಾ: **ಗೌರಿಯು ಹಣ್ಣನ್ನು ತಿಂದಳು. (ಮೂಲವಾಕ್ಯ)**

**ಪ್ರಶ್ನೆ – ಗೌರಿಯು ಏನನ್ನು ತಿಂದಳು?**
**ಉತ್ತರ – ಹಣ್ಣನ್ನು (ಕರ್ಮಪದ)**

### ಕ್ರಿಯಾಪದ

ಕ್ರಿಯೆಯು ನಡೆದಿರುವ ಬಗ್ಗೆ ತಿಳಿಸುವ ಪದವಾಗಿದ್ದು ಪೂರ್ಣಪ್ರಮಾಣದ ಕ್ರಿಯೆ ಜರುಗಿದ್ದನ್ನು ತಿಳಿಸುವ ಶಬ್ದವಾಗಿದೆ. ಈ ಕ್ರಿಯಾಪದವನ್ನು ಪ್ರಶ್ನಿಸುವ ಮೂಲಕ ಕರ್ತೃ, ಕರ್ಮಪದವನ್ನು ಗುರುತಿಸಬಹುದು. ಏ, ಆ, ಎ, ಓ ಎಂಬ ಪ್ರಶ್ನಾರ್ಥಕಗಳ ಮೂಲಕ ಕ್ರಿಯಾಪದವನ್ನು ಗುರುತಿಸಬಹುದು.

ಉದಾ: **ರಾಮನು ರಾವಣನನ್ನು ಕೊಂದನು**

**ಪ್ರಶ್ನೆ – ರಾಮನು ರಾವಣನನ್ನು ಕೊಂದನೇ?**
**ಉತ್ತರ – ಕೊಂದನು (ಕ್ರಿಯಾಪದ)** ▪

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ನಾಮಪದಗಳು

## ವಿಶೇಷ ನಾಮಗಳು

4) **ಪರಿಮಾಣವಾಚಕಗಳು:** ವಸ್ತುಗಳ, ಪ್ರಾಣಿಗಳ ಸಾಮಾನ್ಯ ಅಳತೆ, ತೂಕ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳೇ ಪರಿಮಾಣ ವಾಚಕಗಳು.
ಉದಾ :– ಅಷ್ಟು, ಇಷ್ಟು, ಸ್ವಲ್ಪ, ಅಪಾರ, ಬಹಳ, ಕಡಿಮೆ, ಹಲವು, ಕೆಲವು, ಸಣ್ಣದು, ದೊಡ್ಡದು ಇತ್ಯಾದಿ.

5) **ಪ್ರಕಾರವಾಚಕಗಳು:** ವಸ್ತುಗಳ ನಿಜಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೇ ಪ್ರಕಾರ ವಾಚಕಗಳು.
ಉದಾ :– ಅಂತಹ, ಇಂತಹ, ಎಂತಹ, ಅಂಥ, ಇಂಥ, ಎಂಥವನು ಇತ್ಯಾದಿ.

6) **ದಿಗ್ವಾಚಕಗಳು:** ದಿಕ್ಕುಗಳ ಹೆಸರನ್ನು ಹೇಳುವ ಶಬ್ದಗಳೇ ದಿಗ್ವಾಚಕಗಳು.
ಉದಾ :– ಮೂಡಣ, ಪಡುವಣ, ಬಡಗಣ, ತೆಂಕಣ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಈಶಾನ್ಯ, ವಾಯುವ್ಯ, ನೈರುತ್ಯ, ಅತ್ತ, ಇತ್ತ, ಅಲ್ಲಿ, ಇಲ್ಲಿ, ಆಕಡೆ, ಈಕಡೆ, ಎಡ, ಬಲ ಇತ್ಯಾದಿ

7) **ತದ್ಧಿತ ವಿಶೇಷಣಗಳು:** ತದ್ಧಿತ ನಾಮಗಳು ವಿಶೇಷಣದ ಸ್ಥಾನದಲ್ಲಿ ಬಂದಾಗ ಅವು ತದ್ಧಿತ ವಿಶೇಷಣಗಳೆನಿಸುತ್ತವೆ.
ಉದಾ:– ದಯಾವಂತ ರಾಜ, ವಾಚಾಳಿ ವಾಣಿ, ಲಂಚಗುಳಿ ಅಧಿಕಾರಿ, ಸಿರಿವಂತ ಸೀತೆ, ಮೋಡಿಗಾರ ಮೋಹನ, ಕನಸುಗಾರ ರವಿ ಇತ್ಯಾದಿ ಇಲ್ಲಿ ದಯಾವಂತ, ವಾಚಾಳಿ, ಲಂಚಗುಳಿ, ಸಿರಿವಂತ, ಮೋಡಿಗಾರ, ಕನಸುಗಾರ ಮುಂತಾದವುಗಳನ್ನು ತದ್ಧಿತ ವಿಶೇಷಣಗಳಾಗಿವೆ.

8) **ಕೃದಂತ ವಿಶೇಷಣಗಳು:** ಕೃದಂತ ನಾಮಗಳು ವಿಶೇಷಣಗಳ ಸ್ಥಾನದಲ್ಲಿ ಬಂದಾಗ ಅವು ಕೃದಂತ ವಿಶೇಷಣಗಳೆನಿಸುತ್ತವೆ.
ಉದಾ:– ಸುಡುವ ಚಹಾ, ಕಾಡುವ ನೆನಪು, ನಗುವ ಹುಡುಗಿ, ಈಜುವ ಮೀನು, ಹಾರುವ ಹಕ್ಕಿ ಇತ್ಯಾದಿ. ಇಲ್ಲಿ ಸುಡುವ, ನಗುವ, ಈಜುವ, ಹಾರುವ ಮುಂತಾದ ಪದಗಳು ಕೃದಂತ ಪದಗಳಾಗಿದ್ದರೂ ಅವು ವಿಶೇಷಣದ ಸ್ಥಾನದಲ್ಲಿ ಬಂದಿರುವುದರಿಂದ ಅವು ಕೃದಂತ ವಿಶೇಷಣಗಳು ಎನಿಸುತ್ತವೆ.

**ಕನ್ನಡ ಕಲಿ**



▪ ಡಾ. ಶಿವಾನಂದ ಟವಳಿ
shivu.tavali@gmail.com

# ನಾಮಪದಗಳು

## I. ವಸ್ತುವಾಚಕ ನಾಮಗಳು

ಮನುಷ್ಯ, ವಸ್ತು, ಪ್ರಾಣಿ ಮತ್ತು ಸ್ಥಳಗಳ ಹೆಸರನ್ನು ಸೂಚಿಸುವ ಅಥವಾ ಆಯಾ ವಸ್ತುಗಳ ಹೆಸರನ್ನು ತಿಳಿಸುವ ನಾಮಪದಗಳಿಗೆ ವಸ್ತುವಾಚಕನಾಮ ಎಂದು ಹೆಸರು. ಇವು ಸಜೀವ ಇಲ್ಲವೆ ನಿರ್ಜೀವ ವಸ್ತುಗಳಾಗಿರಬಹುದು. ವಸ್ತುವಾಚಕ ನಾಮಗಳಲ್ಲಿ ಮೂರು ಪ್ರಕಾರಗಳಿವೆ.

### ವಸ್ತುವಾಚಕ ನಾಮಗಳ ಪ್ರಕಾರಗಳು

ಅ. ರೂಢನಾಮ
ಆ. ಅಂಕಿತನಾಮ
ಇ. ಅನ್ವರ್ಥಕನಾಮ

**ಅ. ರೂಢನಾಮಗಳು :–** ರೂಢಿಗತವಾಗಿ ಬಂದ ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರುಗಳೇ ರೂಢನಾಮಗಳು.

**ಉದಾ:–** ನದಿ, ಪಕ್ಷಿ, ದೇವಾಲಯ, ಶಾಲೆ, ಗ್ರಹ, ನಕ್ಷತ್ರ, ಗಂಡಸು, ಹೆಂಗಸು, ಪರ್ವತ, ಬೆಟ್ಟ, ಹುಡುಗ, ಹುಡುಗಿ ಇತ್ಯಾದಿ

ಆ. ಅಂಕಿತನಾಮಗಳು :– ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳನ್ನು ಗುರುತಿಸಲು ಅನುಕೂಲವಾಗಲು ಇಟ್ಟಂತಹ ಹೆಸರುಗಳೇ ಅಂಕಿತನಾಮಗಳು.

**ಉದಾ :–** ಲತಾ, ಗೀತಾ, ಧಾರವಾಡ, ಅಭಿಷೇಕ, ಶಾಂತ, ಕರ್ನಾಟಕ, ಭಾರತ, ಭೂಮಿ, ಗಂಗಾ, ಕಾವೇರಿ, ಮುಳ್ಳಯ್ಯನಗಿರಿ ಇತ್ಯಾದಿ

**ಇ. ಅನ್ವರ್ಥಕ ನಾಮಗಳು :–** ವ್ಯಕ್ತಿ, ಪ್ರಾಣಿ ಹಾಗೂ ವಸ್ತುವಿನ ಗುಣ, ಸ್ವಭಾವ, ಉದ್ಯೋಗ, ಆಕಾರ, ಬಣ್ಣ, ನಡತೆ ಮೊದಲಾದ ಸ್ವಭಾವಗಳಿಗನುಸಾರವಾಗಿ ವಾಡಿಕೆಯಿಂದ ಬಂದ ಹೆಸರುಗಳೇ ಅನ್ವರ್ಥಕನಾಮಗಳು.

**ಉದಾ :–** ಕುರುಡ, ಕುಂಟ, ಶಿಕ್ಷಕ, ವೈದ್ಯ, ವಿದ್ಯಾಕಾಶಿ, ಗುಮ್ಮಟನಗರಿ, ಭಿಕ್ಷುಕ, ಗಾಯಕ, ಮೂರ್ಖ, ಚಾಲಕ, ವರಕವಿ, ಗಾನಕೋಗಿಲೆ ಇತ್ಯಾದಿ.

## ಕನ್ನಡ ಕಲಿ

■ ಡಾ. ಶಿವಾನಂದ ಟವಳಿ
shivu.tavali@gmail.com



# ವಚನ ಪಲ್ಲಟ

ವಿಭಕ್ತಿ ಪಲ್ಲಟದಂತೆ ವಚನ ಪಲ್ಲಟವೂ ಕೂಡ ಮಾಡನಾಡುವಾಗ ನಡೆಯುತ್ತದೆ. ಏಕವಚನದ ಸ್ಥಾನದಲ್ಲಿ ಬಹುವಚನ ಬಹುವಚನದ ಸ್ಥಾನದಲ್ಲಿ ಏಕವಚನವನ್ನು ಬಳಸುವುದನ್ನು ವಚನ ಪಲ್ಲಟ ಎಂದು ಕರೆಯುತ್ತಾರೆ. ವಚನ ಪಲ್ಲಟಕ್ಕೆ ವಚನ ವಿಪರಿಣಾಮ ಎಂಬ ಹೆಸರೂ ಇದೆ.

ವಾಕ್ಯದಲ್ಲಿನ ಕರ್ತೃ, ಕರ್ಮ, ಕ್ರಿಯಾಪದ ಹಾಗೂ ಇನ್ನಿತರ ಯಾವುದೇ ಪದಗಳಲ್ಲಿ ವಚನ ಪಲ್ಲಟವಾಗುವುದನ್ನು ಕಾಣಬಹುದು. ಹಳಗನ್ನಡ ಹಾಗೂ ಹೊಸಗನ್ನಡದಲ್ಲಿ ವಚನ ಪಲ್ಲಟ ಸಾಮಾನ್ಯ. ಮಾತು ಬರಹಗಳೆರಡರಲ್ಲಿಯೂ ವಚನ ಪಲ್ಲಟದ ಬಳಕೆ ಕಂಡುಬರುತ್ತದೆ.

ಉದಾ: 1) ಇವರಿಬ್ಬರ ಹೆಸರುಗಳೇನು? (ಮೂಲವಾಕ್ಯ)
ಇವರಿಬ್ಬರ ಹೆಸರೇನು? (ಪಲ್ಲಟವಾಕ್ಯ)

2) ರೈತರು ಬೀಜಗಳನ್ನು ಬಿತ್ತಿದರು. (ಮೂಲವಾಕ್ಯ)
ರೈತರು ಬೀಜ ಬಿತ್ತಿದರು. (ಪಲ್ಲಟವಾಕ್ಯ)

3) ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ರಜೆ ನೀಡಲಾಗಿದೆ (ಮೂಲವಾಕ್ಯ)
ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗೆ ರಜೆ ನೀಡಲಾಗಿದೆ (ಪಲ್ಲಟವಾಕ್ಯ)

4) ಶಂಕರನು ಕಣ್ಣುಗಳನ್ನು ತೆರೆದನು. (ಮೂಲವಾಕ್ಯ)
ಶಂಕರನು ಕಣ್ಣು ತೆರೆದನು. (ಪಲ್ಲಟವಾಕ್ಯ)

5) ಗ್ರಂಥಾಲಯವು ನೂರಾರು ಪುಸ್ತಕಗಳಿಂದ ಕೂಡಿದೆ. (ಮೂಲವಾಕ್ಯ)
ಗ್ರಂಥಾಲಯವು ನೂರಾರು ಪುಸ್ತಕದಿಂದ ಕೂಡಿದೆ (ಪಲ್ಲಟವಾಕ್ಯ)

7) ನಾಡಿನ ಜನರು ಸೌಖ್ಯದಿಂದ ಇದ್ದಾರೆ. (ಮೂಲವಾಕ್ಯ)
ನಾಡಿನ ಜನ ಸೌಖ್ಯದಿಂದ ಇದ್ದಾರೆ. (ಪಲ್ಲಟವಾಕ್ಯ)

8) ಹುಲಿಯು ಹತ್ತಾರು ಹಸುಗಳನ್ನು ತಿಂದಿತು. (ಮೂಲವಾಕ್ಯ)
ಹುಲಿಯು ಹತ್ತಾರು ಹಸು ತಿಂದಿತು. (ಪಲ್ಲಟವಾಕ್ಯ) ■

## ಕನ್ನಡ ಕಲಿ

ಡಾ. ಶಿವಾನಂದ ಟವಳಿ
shivu.tavali@gmail.com



# ಸ್ಥಾನ ಪಲ್ಲಟ

ವಾಕ್ಯದಲ್ಲಿಯ ಪದಗಳು ಒಂದು ಸ್ಥಾನದಿಂದ ಬೇರೊಂದು ಸ್ಥಾನಕ್ಕೆ ಬದಲಾವಣೆಯಾಗುವುದನ್ನು 'ಸ್ಥಾನಪಲ್ಲಟ' ಎನ್ನುವರು. ಇಲ್ಲಿ ಪದಗಳು ತಮ್ಮತಮ್ಮ ಸ್ಥಾನದಲ್ಲಿರದೇ ಬೇರೆಬೇರೆ ಸ್ಥಾನದಲ್ಲಿರುತ್ತದೆ.

ವಿಭಕ್ತಿ ವಚನ ಹಾಗೂ ಕಾಲ ಪಲ್ಲಟದಂತೆ ಮಾತಿನಲ್ಲಿ ವಿಶೇಷವಾಗಿ ಬರವಣಿಗೆಯಲ್ಲೂ ಕಂಡುಬರುತ್ತವೆ. ವಾಕ್ಯಗಳ ಗಾತ್ರ ದೊಡ್ಡದಿರುವಾಗ ಸ್ಥಾನಪಲ್ಲಟ ಹೆಚ್ಚಾಗಿರುತ್ತದೆ. ವಾಕ್ಯದಲ್ಲಿಯ ಪದಗಳು ಸರಿಯಾದ ಸ್ಥಾನದಲ್ಲಿರದಿದ್ದರೆ ವಾಕ್ಯದ ಅರ್ಥದ ಸರಿಯಿರದೇ ಅನರ್ಥಕ್ಕೀಡಾಗುವ ಪ್ರಸಂಗಗಳೇ ಹೆಚ್ಚಾಗಿರುತ್ತವೆ.

ಉದಾ:

1. ಭಯೋತ್ಪಾದನೆ ವಿರೋಧ ಕುರಿತು ಸಮ್ಮೇಳನ. (ಮೂಲರೂಪ)

ಭಯೋತ್ಪಾದನೆ ಕುರಿತು ವಿರೋಧ ಸಮ್ಮೇಳನ. (ಪಲ್ಲಟರೂಪ)

2. 4 ಸೆಂ.ಮೀ ತ್ರಿಜ್ಯವುಳ್ಳ ಒಂದು ವೃತ್ತ ರಚಿಸಿರಿ. (ಮೂಲರೂಪ)

ಒಂದು 4 ಸೆಂ.ಮೀ ತ್ರಿಜ್ಯವುಳ್ಳ ವೃತ್ತ ರಚಿಸಿರಿ. (ಪಲ್ಲಟರೂಪ)

3. ಗಾಂಧಿಜಿ ಪ್ರತಿನಿತ್ಯ ಪ್ರಾರ್ಥನೆ ಮಾಡುತ್ತಿದ್ದರು. (ಮೂಲರೂಪ)

ಪ್ರತಿನಿತ್ಯ ಗಾಂಧೀಜಿ ಪ್ರಾರ್ಥನೆ ಮಾಡುತ್ತಿದ್ದರು. (ಪಲ್ಲಟರೂಪ)

4. ಶತಮಾನಗಳಷ್ಟು ಪ್ರಾಚೀನವಾದ ಬಿಜಾಪುರದ ಸ್ಮಾರಕಗಳು ವಿನಾಶದ ಅಂಚಿನಲ್ಲಿವೆ. (ಮೂಲರೂಪ)

ಬಿಜಾಪುರದ ಶತಮಾನಗಳಷ್ಟು ಪ್ರಾಚೀನವಾದ ಸ್ಮಾರಕಗಳು ವಿನಾಶದ ಅಂಚಿನಲ್ಲಿವೆ. (ಪಲ್ಲಟರೂಪ)

## ಕನ್ನಡ ಕಲಿ



▪ ಡಾ. ಶಿವಾನಂದ ಟವಳಿ
shivu.tavali@gmail.com

# ಕಾಲ ಪಲ್ಲಟ

ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲಗಳಲ್ಲಿ ಯಾವುದೇ ಒಂದು ಕಾಲದಲ್ಲಿ ಹೇಳಬೇಕಾದ ಕ್ರಿಯೆಯನ್ನು ಬೇರೊಂದು ಕ್ರಿಯಾರೂಪದಿಂದ ಹೇಳುವುದನ್ನು 'ಕಾಲ ಪಲ್ಲಟ' ಎನ್ನುವರು. ಇದಕ್ಕೆ ಕ್ರಿಯಾ ವಿಪರಿಣಾಮ ಎಂಬ ಹೆಸರೂ ಇದೆ.

ಕಾಲಪಲ್ಲಟವು ಕ್ರಿಯಾಪದದಲ್ಲಿ ಮಾತ್ರ ಕಂಡುಬರುತ್ತದೆ. ಇದು ವಿಭಕ್ತಿ ವಚನಪಲ್ಲಟಗಳಂತೆ ಸ್ಥಾನ ಬದಲಾವಣೆ ಹೊಂದುವುದು. ಇಲ್ಲಿ ಒಂದು ಕಾಲದ ಕ್ರಿಯಾಪದದ ಸ್ಥಾನದಲ್ಲಿ ಬೇರೆ ಯಾವುದೇ ಒಂದು ಕಾಲದ ಕ್ರಿಯಾಪದವನ್ನು ವಾಕ್ಯದಲ್ಲಿ ಬಳಕೆ ಮಾಡಲಾಗುತ್ತದೆ.

**1. ಭೂತಕಾಲದ ಕ್ರಿಯಾಪದದ ಸ್ಥಾನದಲ್ಲಿ ವರ್ತಮಾನ/ಭವಿಷ್ಯತ್ ಕಾಲದ ಕ್ರಿಯಾಪದ**

ಉದಾ: ದುಶ್ಯಾಸನನ ಕಳೆಬರ ನೋಡಿ ಕೌರವ ಹೀಗೆ ದುಃಖಿಸಿದನು. (ಭೂ)
ದುಶ್ಯಾಸನನ ಕಳೆಬರ ನೋಡಿ ಕೌರವ ಹೀಗೆ ದುಃಖಿಸುತ್ತಾನೆ. (ವ)
ದುಶ್ಯಾಸನನ ಕಳೆಬರ ನೋಡಿ ಕೌರವ ಹೀಗೆ ದುಃಖಿಸುವನು. (ಭ)

**2. ವರ್ತಮಾನ ಕಾಲದ ಕ್ರಿಯಾಪದದ ಸ್ಥಾನದಲ್ಲಿ ಭವಿಷ್ಯತ್ ಕಾಲದ ಕ್ರಿಯಾಪದ**

ಉದಾ: ಅಗೋ ಅಲ್ಲಿ ಸೂರ್ಯ ಉದಯವಾಗುತ್ತಾನೆ. (ವ)
ಅಗೋ ಅಲ್ಲಿ ಸೂರ್ಯ ಉದಯವಾಗುವನು. (ಭ)

**3. ವರ್ತಮಾನ/ಭವಿಷ್ಯತ್ ಕಾಲದ ಕ್ರಿಯಾಪದ ಸ್ಥಾನದಲ್ಲಿ ಭೂತಕಾಲದ ಕ್ರಿಯಾಪದ**

ಉದಾ: ಅವನು ಸತ್ತ ಮೇಲೆ ಸ್ವರ್ಗ ಕಾಣುತ್ತಾನೆ. (ವ)
ಅವನು ಸತ್ತ ಮೇಲೆ ಸ್ವರ್ಗ ಕಾಣುವನು. (ಭ)
ಅವನು ಸತ್ತ ಮೇಲೆ ಸ್ವರ್ಗ ಕಂಡನು. (ಭೂ)

**4. ಭವಿಷ್ಯತ್‌ಕಾಲದ ಕ್ರಿಯಾಪದದ ಸ್ಥಾನದಲ್ಲಿ ವರ್ತಮಾನ ಕಾಲದ ಕ್ರಿಯಾಪದ**

ಉದಾ: ನಾಳೆ ಪರೀಕ್ಷೆ ನಡೆಯುವುದು. (ಭ)
ನಾಳೆ ಪರೀಕ್ಷೆ ನಡೆಯುತ್ತದೆ. (ವ) ▪

## ಕನ್ನಡ ಕಲಿ



ಡಾ. ಶಿವಾನಂದ ಟವಳಿ
shivu.tavali@gmail.com

# ಕೃದಂತ ಪದಗಳು

**1. ಕೃದಂತ ವಿಶೇಷಣಗಳು**

ತದ್ಧಿತನಾಮಗಳು ವಿಶೇಷಣ ಸ್ಥಾನದಲ್ಲಿ ಬಂದಾಗ ಅವು ತದ್ಧಿತ ವಿಶೇಷಣಗಳೆನಿಸುತ್ತವೆ. ಕೃದಂತ ನಾಮಗಳನ್ನು ವಿಶೇಷಣಗಳಂತೆ ಬಳಸುವುದರಿಂದ ಅವುಗಳೇ ಕೃದಂತ ವಿಶೇಷಣಗಳು.

ಉದಾ:

| | |
|---|---|
| ಕೇಳದ ಕಿವಿ | ಕಾಣದ ಕಣ್ಣು |
| ಹಾರುವ ಕುದುರೆ | ಕಾಡುವ ಹುಡುಗಿ |
| ಕೇಳಿದ ಮಾತು | ಬೇಡಿದ ಭಿಕ್ಷೆ |
| ನೋಡಿದ ಚಿತ್ರ | ಚಲಿಸುವ ಮೋಡ |
| ತಿನ್ನುವ ಹಣ್ಣು | ಕರಗಿದ ಕಷ್ಟ |
| ಕುಂಟುವ ನಾಯಿ | ಹಾರುವ ಹಕ್ಕಿ |
| ಹೇಳಿದ ಮಾತು | ಓಡುವ ಜಿಂಕೆ |

ಈ ಮೇಲ್ಕಂಡ ರೂಪಗಳಲ್ಲಿ ಪೂರ್ವಪದದ ಸ್ಥಾನದಲ್ಲಿರುವ ಗೆರೆ ಎಳೆದ ಪದಗಳು ಕೃದಂತ ವಿಶೇಷಣಗಳು ಎನಿಸುತ್ತವೆ.

**ಕೃದಂತ ಭಾವನಾಮಗಳು**

ಧಾತುಗಳಿಗೆ ಭಾವಾರ್ಥದಲ್ಲಿ ವಿವಿಧ ರೀತಿಯ ಕೆಲವು ಭಾವಸೂಚಕ ಕೃತ್ ಪ್ರತ್ಯಯಗಳಾದ 'ಇಕೆ, ವಳಿಕೆ, ವಣಿಗೆ, ಪು, ತ' ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳು ರೂಪುಗೊಳ್ಳುತ್ತವೆ. ಉದಾ:

ಇಕೆ – ಅಂಜಿಕೆ, ನಾಚಿಕೆ, ಕಲಿಕೆ, ಹೊಗಳಿಕೆ
ತ – ಕೊರೆತ, ಮುರಿತ, ಬಡಿತ, ಸೆಳೆತ
ವಳಿಕೆ – ನಡವಳಿಕೆ, ತಿಳಿವಳಿಕೆ, ಕಳವಳಿಕೆ
ವಣಿಗೆ – ಬರವಣಿಗೆ, ಉರವಣಿಗೆ, ಮೆರವಣಿಗೆ
ಟ – ಊಟ, ನೋಟ, ಮಾಟ, ಕೂಟ
ಪು – ಹೊಳಪು, ವನಪು, ನೆನಪು